# ವಿಪ್ರನುಡಿ

ಸ್ವಾವಲಂಬನೆ–ಸಂಘಟನೆ–ಸಂಸ್ಕಾರ

ಸಂಪುಟ–34, ಶ್ರೀ ಶುಭಕೃತ್‌ನಾಮ ಸಂವತ್ಸರ, ಭಾದ್ರಪದ ಮಾಸ ಸೆಪ್ಟಂಬರ್–2022, ಸಂಚಿಕೆ–6, ಪುಟಗಳು–32, ಬೆಲೆ ರೂ.–15/–


## ಅಕ್ಟೋಬರ್ 2ರಂದು
## ವಿಧುರಾಶ್ವತ್ಥಕ್ಕೆ ಮಹಾಸಭೆಯಿಂದ ಬೃಹತ್ ಪಾದಯಾತ್ರೆ




**ಮಠಾಧೀಶರುಗಳು ಮಂತ್ರಿಗಳು, ಸಂಸದರು, ಶಾಸಕರು ಜನ ಪ್ರತಿನಿಧಿಗಳು ಭಾಗವಹಿಸುವ ಈ ಬೃಹತ್ ಯಾತ್ರೆಗೆ ಸಹಸ್ರ ಸಹಸ್ರ ಸಂಖ್ಯೆಯಲ್ಲಿ ಸಾರ್ವಜನಿಕರು ಭಾಗವಹಿಸಿ ಹುತಾತ್ಮರಾದ ಸ್ವಾತಂತ್ರ್ಯ ಯೋಧರನ್ನು ಸ್ಮರಿಸಿ ಗೌರವ ನಮನ ಸಮರ್ಪಿಸೋಣ.**

## ಚಾತುರ್ಮಾಸ್ಯ ವ್ರತನಿರತ ಗುರುವರ್ಯರಿಗೆ ಭಿಕ್ಷಾ ಸಮರ್ಪಣೆ ಸಂಪನ್ನ
## ನವಸಂಪ್ರದಾಯಕ್ಕೆ ಅಭೂತಪೂರ್ವ ಸ್ವಾಗತ, ಮನ್ನಣೆ, ಪೂರ್ಣಾಶೀರ್ವಾದ.



ಮಹಾಸಭೆಯ ಅಧ್ಯಕ್ಷರಾದ ಶ್ರೀ ಅಶೋಕ ಹಾರನಹಳ್ಳಿ ನೂತನ ಯೋಜನೆಯಾದ ಚಾತುರ್ಮಾಸ್ಯ ವ್ರತನಿರತ ಗುರವರ್ಯರುಗಳಿಗೆ ಮಹಾಸಭೆಯ ವತಿಯಿಂದ ಸಮಸ್ತ ವಿಪ್ರ ಸಮುದಾಯದ ಪರವಾಗಿ ದವಸ–ಧಾನ್ಯ, ಫಲ–ಪುಷ್ಪ, ಕಾಣಿಕೆ ಹಾಗೂ ಗೌರವಫಲಕದೊಂದಿಗೆ ಮಾಡಿದ ಭಿಕ್ಷಾ ಸಮರ್ಪಣೆಯ ಕಾರ್ಯಕ್ರಮಕ್ಕೆ ನಾಡಿನಾದ್ಯಂತ ಯತಿಗಳು ಸ್ವಾಗತಿಸಿ, ಮೆಚ್ಚುಗೆ ವ್ಯಕ್ತಪಡಿಸಿ ಈ ನವ ಸಂಪ್ರದಾಯಕ್ಕೆ ಮನ್ನಣೆ ನೀಡಿ, ವಿಪ್ರ ಸಮುದಾಯವನ್ನು ಪೂರ್ಣಾಶೀರ್ವಾದೊಂದಿಗೆ ಹರಸಿರುತ್ತಾರೆ. ಅಧ್ಯಕ್ಷರ ಮಾರ್ಗದರ್ಶನ ಹಾಗೂ ಸಂಘಟನೆಯ ಕಾರ್ಯದರ್ಶಿ ರಾಘವೇಂದ್ರ ಭಟ್ ಅವರ ನೇತೃತ್ವದಲ್ಲಿ ಮಹಾಸಭೆಯ ಪದಾಧಿಕಾರಿಗಳು ಸ್ಥಳೀಯ ವಿಪ್ರ ಸಂಘಟನೆಗಳು ಹಾಗೂ ಮುಖಂಡರುಗಳ ಸಹಕಾರದಿಂದ ವ್ರತನಿರತ ಗುರುವರ್ಯರಿಗೆ ಭಕ್ತಿಯಿಂದ ಸಲ್ಲಿಸಿದ ಭಿಕ್ಷಾ ಸಮರ್ಪಣೆಯ ಕಾರ್ಯಕ್ರಮ ಅತ್ಯಂತ ಯಶಸ್ವಿಯಾಗಿ ಸಂಪನ್ನವಾಯಿತು. ಈ ಸಂದರ್ಭದಲ್ಲಿ ಪೀಠಾಧೀಶರುಗಳು ಸಂತುಷ್ಟರಾಗಿ ಮಹಾಸಭೆಯು ಆರಂಭಿಸಿದ ಈ ನೂತನ ಸಂಪ್ರದಾಯವನ್ನು ಸ್ವಾಗತಿಸಿ ಅಧ್ಯಕ್ಷರಾದ ಶ್ರೀ ಅಶೋಕ ಹಾರನಹಳ್ಳಿ ಹಾಗೂ ಮಹಾಸಭೆಯ ಸಮಸ್ತ ವಿಪ್ರರಿಗೆ ಪೂರ್ಣಾಶೀರ್ವಾದವನ್ನು ನೀಡಿ ಸಂದೇಶಗಳನ್ನು ನೀಡಿರುತ್ತಾರೆ.

## ಚಾತುರ್ಮಾಸ್ಯ ವ್ರತನಿರತ ಗುರುವರ್ಯರಿಗೆ ಭಿಕ್ಷಾ ಸಮರ್ಪಣೆ

# ನವಸಂಪ್ರದಾಯಕ್ಕೆ ಅಭೂತಪೂರ್ವ ಸ್ವಾಗತ, ಮನ್ನಣೆ, ಪೂರ್ಣಾಶೀರ್ವಾದ.

### ಶ್ರೀ ಶೃಂಗೇರಿ ಶಾರದಾ ಪೀಠ



ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾದ ವತಿಯಿಂದ ಚಾತುರ್ಮಾಸದ ಸಂದರ್ಭದಲ್ಲಿ ಅಧ್ಯಕ್ಷರಾದ ಶ್ರೀ ಅಶೋಕ್ ಹಾರನಹಳ್ಳಿ ಅವರು, ಮಹಾಸಭಾದ ಸಂಘಟನಾ ಕಾರ್ಯದರ್ಶಿ ರಾಘವೇಂದ್ರ ಭಟ್ ಹಾಗೂ ಕಾರ್ಯಕಾರಿಣಿ ಸದಸ್ಯರಾದ ಜಯಸಿಂಹ ಅವರೊಡಗೂಡಿ ಶ್ರೀ ಶೃಂಗೇರಿ ಶಾರದಾ ಪೀಠದ ಜಗದ್ಗುರು ಶ್ರೀ ಶ್ರೀ ವಿಧುಶೇಖರಭಾರತೀ ಸನ್ನಿಧಾನಂಗಳವರಿಗೆ ಭಿಕ್ಷಾ ಸಮರ್ಪಣೆ ಮಾಡಿದರು.

### ಶ್ರೀ ಲಕ್ಷ್ಮೀನರಸಿಂಹ ಪೀಠ, ಹರಿಹರಪುರ



ಅಧ್ಯಕ್ಷರಾದ ಶ್ರೀ ಅಶೋಕ್ ಹಾರನಹಳ್ಳಿ ಅವರು, ಮಹಾಸಭಾದ ಸಂಘಟನಾ ಕಾರ್ಯದರ್ಶಿ ರಾಘವೇಂದ್ರ ಭಟ್ ಹಾಗೂ ಕಾರ್ಯಕಾರಿಣಿ ಸದಸ್ಯರಾದ ಜಯಸಿಂಹ ಶತ್ರುಘ್ನ, ಎನ್.ಎಸ್. ನರಸಿಂಹಮೂರ್ತಿ ಅವರೊಡಗೂಡಿ ಹರಿಹರಪುರದ ಶ್ರೀ ಶ್ರೀ ಸ್ವಯಂಪ್ರಕಾಶ ಸಚ್ಚಿದಾನಂದ ಸರಸ್ವತಿ ಮಹಾಸ್ವಾಮಿಗಳವರಿಗೆ ಭಿಕ್ಷಾ ಸಮರ್ಪಣೆ ಮಾಡಿದರು.

### ಶ್ರೀ ಪೇಜಾವರ ಮಠ, ಉಡುಪಿ



ಉಡುಪಿ ಪೇಜಾವರ ಮಠಾಧೀಶರಾದ ವಿಶ್ವ ಪ್ರಸನ್ನ ತೀರ್ಥ ಶ್ರೀ ಪಾದಂಗಳರಿಗೆ ಚಾತುರ್ಮಾಸ್ಯ ಸಂದರ್ಭದಲ್ಲಿ ಅಖಿಲ ಕರ್ನಾಟಕ ಬ್ರಾಹ್ಮಣ ಸಭಾ ವತಿಯಿಂದ ಉಪಾಧ್ಯಕ್ಷರಾದ ಅ. ವಿ. ರಾಮಮೂರ್ತಿ, ರಾಜ್ಯ ಸಂಘಟನಾ ಕಾರ್ಯದರ್ಶಿ ಬಿ.ಎಸ್. ರಾಘವೇಂದ್ರ ಭಟ್ ಇವರುಗಳು ಗೌರವ ಫಲಕದೊಂದಿಗೆ ಭಿಕ್ಷಾ ಸಮರ್ಪಣೆ ಸಲ್ಲಿಸಿ ಆಶೀರ್ವಾದ ಪಡೆದರು.

### ಶ್ರೀ ಯತಿರಾಜ ಮಠ



ಶ್ರೀ ಯದುಗಿರಿ ಯತಿರಾಜ ನಾರಾಯಣ ರಾಮಾನುಜ ಜೀಯರ್ ಸ್ವಾಮೀಜಿಗಳಿಗೆ ಮಹಾಸಭೆಯಯ ಅಧ್ಯಕ್ಷರಾದ ಅಶೋಕ ಹಾರನಹಳ್ಳಿ, ರಾಘವೇಂದ್ರ ಭಟ್ಟ ಹಾಗೂ ಸದಸ್ಯರು ಇವರುಗಳು ಗೌರವ ಫಲಕದೊಂದಿಗೆ ಭಿಕ್ಷಾ ಸಮರ್ಪಣೆ ಸಲ್ಲಿಸಿ ಆಶೀರ್ವಾದ ಪಡೆದರು.

## ರಾಘವೇಂದ್ರ ಮಠ ಶ್ರೀ ಕ್ಷೇತ್ರ, ಮಂತ್ರಾಲಯ



ಶ್ರೀ ಕ್ಷೇತ್ರ ಮಂತ್ರಾಲಯದ ಶ್ರೀ ಶ್ರೀ ಸುಬುದೇಂದ್ರ ತೀರ್ಥ ಶ್ರೀಪಾದಂಗಳವರಿಗೆ ಉಪಾಧ್ಯಕ್ಷರಾದ ಆಡಿ ಆನಂದತೀರ್ಥ ಫಡ್ನಿಸ್, ಹಿರಿಯರಾದ ನರಸಿಂಗರಾವ್ ದೇಶಪಾಂಡೆ, ಶ್ರೀ ಮುರಳೀಧರ್, ಶ್ರಿ ರಾಘವೇಂದ್ರ ಚೂಡಾಮಣಿ ಇವರುಗಳು ಗೌರವ ಫಲಕದೊಂದಿಗೆ ಭಿಕ್ಷಾ ಸಮರ್ಪಣೆ ಸಲ್ಲಿಸಿ ಆಶೀರ್ವಾದ ಪಡೆದರು.

## ಶ್ರೀ ಅದಮಾರು ಮಠ



ಮಹಾಸಭಾ ಉಪಾಧ್ಯಕ್ಷರಾದ ಶ್ರೀಯುತ ಮಹೇಶ್ ಕಜೆಯವರು ಮತ್ತು ರಾಜ್ಯ ಕಾರ್ಯಕಾರಿಣಿಯ ಸದಸ್ಯರು ಹಾಗೂ ರಾಜ್ಯ ಧಾರ್ಮಿಕ ಪರಿಷತ್ತಿನ ಸದಸ್ಯರಾದ ವಿದ್ವಾಂಸ ಶ್ರೀ ಕಶೆಕೋಡಿ ಸೂರ್ಯನಾರಾಯಣ ಭಟ್ ಮತ್ತು ಮಹಾಸಭಾದ ರಾಜ್ಯ ಕಾರ್ಯಕಾರಿಣಿಯ ಸದಸ್ಯರು ಹಾಗೂ ಜಿಲ್ಲಾ ಧಾರ್ಮಿಕ ಪರಿಷತ್ತಿನ ಸದಸ್ಯರಾದ ಪೊಳಲಿ ಶ್ರೀ ಗಿರಿಪ್ರಕಾಶ ತಂತ್ರಿಯವರು, ತಮ್ಮ ಕುಟುಂಬ ಸಮೇತರಾಗಿ ಬಂಟ್ವಾಳ ತಾಲೂಕು ಸಾಲೆತ್ತೂರು ಗ್ರಾಮದ ಕಡ್ತಿಲ ಶ್ರೀ ಗೋಪಾಲಕೃಷ್ಣ ದೇವಸ್ಥಾನದಲ್ಲಿ ಚಾತುರ್ಮಾಸ ವ್ರತದಲ್ಲಿರುವ ಅದಮಾರು ಮಠದ ಶ್ರೀ ಶ್ರೀ ಈಶಪ್ರಿಯ ತೀರ್ಥ ಮಹಾಸ್ವಾಮಿಗಳಿಗೆ ಮಹಾಸಭಾ ವತಿಯಿಂದ ಭಿಕ್ಷಾ ಸಮಾರ್ಪಣೆ ಹಾಗೂ ಬಿನ್ನವತ್ತಳೆ ನೀಡಿ ಆಶೀರ್ವಾದ ಪಡೆದರು.

## ಶ್ರೀ ರಾಮಚಂದ್ರಾಪುರ ಮಠ




ಶ್ರೀ ರಾಮಚಂದ್ರಾಪುರ ಮಠದ ಪೀಠಾಧೀಶರಾದ ಶ್ರೀ ರಾಘವೇಶ್ವರ ಭಾರತೀ ಸ್ವಾಮಿಜಿಗಳಿಗೆ ಶಶಿಭೂಷಣ ಹೆಗಡೆ ಉಪಾಧ್ಯಕ್ಷರು ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ಹಾಗೂ ರಾಜ್ಯ ಸಂಘಟನಾ ಕಾರ್ಯದರ್ಶಿ ಬಿಎಸ್ ರಾಘವೇಂದ್ರ ಭಟ್ ಮತ್ತು ಧಾರ್ಮಿಕ ಸಮಿತಿ ಸಂಚಾಲಕರು ಶ್ರೀ ಭಾನುಪ್ರಕಾಶ್ ಶರ್ಮ ಹಾಗೂ ರಾಜ್ಯ ಕಾರ್ಯಕಾರಣಿ ಸದಸ್ಯರಾದ ಶ್ರೀ ಶ್ರೀಪಾದ ರಾಯಸದ. ನಾರಾಯಣ ಹೆಗಡೆ ಇವರುಗಳಿಂದ ಗೌರವ ಫಲಕದೊಂದಿಗೆ ಭಿಕ್ಷಾ ಸಮರ್ಪಣೆ.

## ಶ್ರೀ ಪಾದರಾಜ ಮಠ, ಮುಳಬಾಗಿಲು



ಶ್ರೀ ಶ್ರೀಪಾದರಾಜ ಗುರುಸಾರ್ವಭೌಮರ ಮೂಲ ವೃಂದಾವನ ಸನ್ನಿಧಾನ ಶ್ರೀ ಕ್ಷೇತ್ರ ನರಸಿಂಹತೀರ್ಥ. ಮುಳಬಾಗಿಲು ಇದರ ಪೀಠಾಧಿಪತಿಗಳಾದ ಶ್ರೀ ಶ್ರೀಪಾದರಾಜ ಮಠಾಧೀಶರಾದ ಶ್ರೀ ಶ್ರೀ ಸುಜಯನಿಧಿ ತೀರ್ಥ ಶ್ರೀ ಪಾದಂಗಳವರಿಗೆ ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ಉಪಾಧ್ಯಕ್ಷರಾದ ಶ್ರೀ ಡಿ.ವಿ. ರಾಜೇಂದ್ರ ಪ್ರಸಾದ್ ಹಾಗೂ ರಾಜ್ಯ ಸಂಘಟನಾ ಕಾರ್ಯದರ್ಶಿಗಳಾದ ಶ್ರೀ ಡಾ॥ ಬಿಎಸ್ ರಾಘವೇಂದ್ರ ಭಟ್ ಮತ್ತು ಧಾರ್ಮಿಕ ಸಂಚಾಲಕರಾದ ಶ್ರೀ ವೇ॥ಬ್ರ॥ ಡಾ॥ ಭಾನುಪ್ರಕಾಶ್ ಶರ್ಮ ಹಾಗೂ ಕಾರ್ಯಕಾರಿ ಸಮಿತಿ ಸದಸ್ಯರಾದ ಅಂಜನ್ ಕುಮಾರ್ ಶರ್ಮ ಇವರುಗಳಿಂದ ಗೌರವ ಫಲಕದೊಂದಿಗೆ ಭಿಕ್ಷಾ ಸಮರ್ಪಣೆ ಸಲ್ಲಿಸಿ ಆಶೀರ್ವಾದ ಪಡೆದರು.

## ಶ್ರೀ ಉತ್ತರಾಧಿ ಮಠ



ಸಂತೆ ಬಿದನೂರಿನ ಉತ್ತರಾಧಿ ಮಠದಲ್ಲಿ ಚಾತುರ್ಮಾಸ್ಯ ಸಂಕಲ್ಪ ಕೈಗೊಂಡಿರುವ ಶ್ರೀ ಶ್ರೀ ಸತ್ಯಾತ್ಮ ತೀರ್ಥ ಶ್ರೀ ಪಾದಂಗಳವರು, ಶ್ರೀ ಸತ್ಯವರ ತೀರ್ಥರ ಉತ್ತರ ಅರಾಧನೆಯಂದು ಮಹಾಸಭಾ ವತಿಯಿಂದ ಅಧ್ಯಕ್ಷರಾದ ಶ್ರೀ ಅಶೋಕ ಹಾರನಹಳ್ಳಿ ಹಾಗೂ ಖಜಾಂಚಿಯಾದ ಶ್ರೀ ವೆಂಕಟೇಶ್ ನಾಯಕ್ ಇವರುಗಳು ಗೌರವ ಫಲಕದೊಂದಿಗೆ ಭಿಕ್ಷಾ ಸಮರ್ಪಣೆ ಸಲ್ಲಿಸಿ ಆಶೀರ್ವಾದ ಪಡೆದರು.

## ಶ್ರೀ ಎಡನೀರು ಮಠ



ಎಡನೀರು ಮಹಾಸಂಸ್ಥಾನದ ಪೀಠಾಧಿಪತಿಗಳಾದ ಪರಮಪೂಜ್ಯ ಶ್ರೀ ಶ್ರೀ ಸಚ್ಚಿದಾನಂದ ಭಾರತಿ ಶ್ರೀಪಾದಂಗಳವರಿಗೆ ಬ್ರಾಹ್ಮಣ ಮಹಾಸಭಾ ಉಪಾಧ್ಯಕ್ಷರಾದ ಮಹೇಶ್ ಕಜೆ, ಕಾರ್ಯಕಾರಿಣಿಯ ಸದಸ್ಯರು ಹಾಗೂ ರಾಜ್ಯ ಧಾರ್ಮಿಕ ಪರಿಷತ್ತಿನ ಸದಸ್ಯರಾದ ವಿದ್ವಾಂಸ ಶ್ರೀ ಕಶೆಕೋಡಿ ಸೂರ್ಯನಾರಾಯಣ ಭಟ್, ಕಾರ್ಯಕಾರಿಣಿಯ ಸದಸ್ಯರು ಹಾಗೂ ಜಿಲ್ಲಾ ಧಾರ್ಮಿಕ ಪರಿಷತ್ತಿನ ಸದಸ್ಯರಾದ ಪೊಳಲಿ ಶ್ರೀ ಗಿರಿಪ್ರಕಾಶ ತಂತ್ರಿಯವರು ಇವರುಗಳು ಗೌರವ ಫಲಕದೊಂದಿಗೆ ಭಿಕ್ಷಾ ಸಮರ್ಪಣೆ ಸಲ್ಲಿಸಿ ಆಶೀರ್ವಾದ ಪಡೆದರು.

## ಶ್ರೀ ಅವಧೂತ ಪೀಠ, ಮೈಸೂರು



ಮೈಸೂರಿನ ಅವಧೂತ ದತ್ತ ಪೀಠದ ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮಕ್ಕೆ ಮಹಾಸಭಾ ವತಿಯಿಂದ ಚಾತುರ್ ಮಾಸ್ಯ ಪ್ರಯುಕ್ತ ಶ್ರೀ ಶ್ರೀ ದತ್ತ ವಿಜಯಾನಂದ ತೀರ್ಥ ಸ್ವಾಮೀಜಿಯವರನ್ನು ಮತ್ತು ಪರಕಾಲ ಮಠದ ಶ್ರೀ ಶ್ರೀ ಶ್ರೀ ಅಭಿನವ ವಗೀಷಾ ಬ್ರಾಹ್ಮತಂತ್ರ ಸ್ವತಂತ್ರ ಸ್ವಾಮೀಜಿರವರಿಗೆ ಎ.ಕೆ. ಬಿ. ಎಂ. ಎಸ್ ಧಾರ್ಮಿಕ ಪರಿಷತ್ ಸಂಚಾಲಕ ರಾದ ಭಾನುಪ್ರಕಾಶ್ ಶರ್ಮಾಜಿ, ರಾಜ್ಯ ಉಪಾಧ್ಯಕ್ಷರಾದ ಸಿ.ಕೆ. ರಾಮಾಮೂರ್ತಿ ಮತ್ತು ಪುಷ್ಪ ಅಯ್ಯಂಗಾರ್, ಜಿಲ್ಲಾ ಮಹಿಳಾ ಅಧ್ಯಕ್ಷರಾದ ವಿಜಯಲಕ್ಷ್ಮೀ, ರಾಜ್ಯ ಕಾರ್ಯಕಾರಿಣಿ ಸದಸ್ಯರಾದ ಸತ್ಯನಾರಾಯಣ್, ಜಗದೀಶ್, ಇವರುಗಳು ಗೌರವ ಫಲಕದೊಂದಿಗೆ ಭಿಕ್ಷಾ ಸಮರ್ಪಣೆ ಸಲ್ಲಿಸಿ ಆಶೀರ್ವಾದ ಪಡೆದರು.

## ಶ್ರೀ ವಿದ್ಯಾರಣ್ಯ ಪೀಠ, ವಿಜಯನಗರ



ವಿಜಯನಗರ ವಿದ್ಯಾರಣ್ಯ ಪೀಠದ ಶ್ರೀ ಶ್ರೀ ವಿದ್ಯಾರಣ್ಯಭಾರತಿ ಮಹಾಸ್ವಾಮಿಗಳಿಗೆ ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾದ ವತಿಯಿಂದ ಚಾತುರ್ಮಾಸದ ಸಂದರ್ಭದಲ್ಲಿ ಉಪಾಧ್ಯಕ್ಷರಾದ ಪ್ರಮೋದ್ ಮನೋಳ್ಳಿ ಹಾಗೂ ಕಾರ್ಯಕಾರಿಣಿ ಸದಸ್ಯರಾದ ಉಮೇಶ್, ಕೆ. ದಿವಾಕರ. ತಾಲ್ಲೂಕು ಬ್ರಾಹ್ಮಣ ಸಂಘದ ಅಧ್ಯಕ್ಷರು, ವೇಣುಗೋಪಾಲ್ ವೈದ್ಯ ಕಾರ್ಯದರ್ಶಿ, ಸದಸ್ಯರಾದ ರಮೇಶ್ ಪುರೋಹಿತ, ಅನಂತರಾವ್ ಪಟೇಲ್, ಅಗ್ನಿಹೋತ್ರಿ ದತ್ತಂ ಭಟ್ ಹಾಗೂ ಗುರುರಾಜ್ ಇವರುಗಳು ಗೌರವ ಫಲಕದೊಂದಿಗೆ ಭಿಕ್ಷಾ ಸಮರ್ಪಣೆ ಸಲ್ಲಿಸಿ ಆಶೀರ್ವಾದ ಪಡೆದರು.

**ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ (ರಿ)**
ಗಾಯತ್ರೀ ಭವನ, ನಂ.3070, (14ನೇ ಅಡ್ಡರಸ್ತೆ), 9ನೇ ಮುಖ್ಯರಸ್ತೆ,
ಗಾಯತ್ರೀ ಭವನ ರಸ್ತೆ, ಬನಶಂಕರಿ 2ನೇ ಹಂತ, ಬೆಂಗಳೂರು–70
ದೂರವಾಣಿ : 26771695, 26770066
E-mail : info@akbms.com
Website : www.akbms.com

ಅಧ್ಯಕ್ಷರು
**ಅಶೋಕ ಹಾರನಹಳ್ಳಿ**
ಪ್ರಧಾನ ಕಾರ್ಯದರ್ಶಿ
**ಶ್ರೀಧರಮೂರ್ತಿ ಎಸ್.**

ಖಜಾಂಚಿ
**ವೆಂಕಟೇಶ ಎಸ್. ನಾಯಕ್**

ಸಂಘಟನಾ ಕಾರ್ಯದರ್ಶಿ
**ಡಾ। ಬಿ.ಎಸ್. ರಾಘವೇಂದ್ರ ಭಟ್**

**ವಿಪ್ರನುಡಿ ಪ್ರಕಟಣಾ ಸಮಿತಿ**

ಪ್ರಧಾನ ಸಂಪಾದಕರು
**ಡಾ। ಎಂ.ಕೆ. ಶ್ರೀಧರ್**

ಗೌರವ ಸಲಹೆಗಾರರು
**ಎಂ.ಕೆ. ಭಾಸ್ಕರರಾವ್**
**ಡಾ। ಎಂ. ಸೂರ್ಯಪ್ರಸಾದ್**

ಸಮಿತಿ ಸದಸ್ಯರು
**ಜ್ಯೋತಿಷಿ ವಿ॥ ಡಾ। ಮುದ್ರಾಡಿ ವಾಸುದೇವ ಭಟ್**
**ನಾರಾಯಣ ಭಟ್ ಹುಳೇಗಾರು**
**ಪ್ರಭಾಕರ ಕೆ.ಸಿ**
**ಕಾರ್ತಿಕ್ ಬಾಪಟ್**
**ಹೆಚ್.ವಿ. ಸುಬ್ಬರಾವ್**

ಕಛೇರಿ ಸಮಯ : ಮಂಗಳವಾರದಿಂದ ಶನಿವಾರ
ಬೆಳಿಗ್ಗೆ 10.00 ರಿಂದ 2.00
ಸಂಜೆ 4.00 ರಿಂದ 8.00
ಭಾನುವಾರ ಬೆಳಿಗ್ಗೆ 10.00 ರಿಂದ 2.00
ವಾರದ ರಜಾ : ಸೋಮವಾರ

ಮುದ್ರಕರು : ಪರಿಮಳ ಮುದ್ರಣಾಲಯ
ನಂ 184, 14ನೇ ಮುಖ್ಯರಸ್ತೆ, ಹನುಮಂತನಗರ
ಬೆಂಗಳೂರು–560 050. ದೂ. : 26606061.

# ನಲ್ನುಡಿ

**ದಾಕ್ಷಿಣ್ಯಂ ಸ್ವಜನೇ ದಯಾ ಪರಿಜನೇ ಶಾಠ್ಯಂ ಸದಾ ದುರ್ಜನೇ**
**ಪ್ರೀತಿಃ ಸಾಧುಜನೇ ನಯೋ ನೃಪಜನೇ ವಿದ್ವಜ್ಜನೇ ಚಾರ್ಜವೆಮ್ ।**
**ಶೌರ್ಯಂ ಶತ್ರುಜನೇ ಕ್ಷಮಾಗುರುಜನೇ ಕಾಂತಾಜನೇ ಧೃಷ್ಟತಾ**
**ಏತ್ಯೈವಂ ಪುರುಷಾಃ ಕಲಾಸು ಕುಶಲಾಸ್ತೇಕ್ತ್ರೀವ ಲೋಕಸ್ಥಿತಿಃ ॥**

'ತಮ್ಮ ಬಂಧು ಜನರಲ್ಲಿ ದಾಕ್ಷಿಣ್ಯ ಭಾವ, ಸೇವಕರಲ್ಲಿ ದಯೆ, ದುರ್ಜನರಲ್ಲಿ ಸದಾ ಒರಟುತನ, ಸಜ್ಜನರಲ್ಲಿ ಪ್ರೀತಿ, ರಾಜರಲ್ಲಿ ನಯವಾದ ವ್ಯವಹಾರ, ವಿದ್ವಾಂಸರಲ್ಲಿ ಕಲಿಯುವ ಮನೋಭಾವ, ಶತ್ರುಗಳಲ್ಲಿ ಶೌರ್ಯ ಪ್ರದರ್ಶನ, ಹಿರಿಯರಲ್ಲಿ ಕ್ಷಮೆ, ಸ್ತ್ರೀಜನರಲ್ಲಿ ದಿಟ್ಟತೆ, ಈ ರೀತಿ ಅನೇಕ ಕಲೆಗಳಲ್ಲಿ ಪರಿಣಿತರಾದ ಪುರುಷರು ಯಾರಿರುವರೋ ಅವರಿಂದ ಲೋಕಸ್ಥಿತಿಯು ದೃಢವಾಗಿರುವುದು'. 7ನೇ ಸಾಮಾನ್ಯ ಶತಕದಲ್ಲಿ ಉಜ್ಜಯನಿಯ ರಾಜನಾದ ಭರ್ತೃಹರಿ ಬರೆದ ನೀತಿ ಶತಕದ ಶ್ಲೋಕವಿದು. ಇದರಲ್ಲಿ ಕವಿಯು ವಿದ್ವಾಂಸರ ಗುಣಗಳನ್ನು ವರ್ಣನೆ ಮಾಡುವುದರ ಮೂಲಕ ಲೋಕ ವ್ಯವಹಾರ ಹೇಗಿರಬೇಕೆಂದು ತಿಳಿಸುತ್ತಾನೆ. ಸಮಾಜದಲ್ಲಿರುವ ವಿವಿಧ ಮನೋಭಾವದ ವ್ಯಕ್ತಿಗಳಲ್ಲಿ ಯಾವ ಗುಣಗಳನ್ನು ನಾವು ಪ್ರದರ್ಶಿಸಿದರೆ, ಸುಲಲಿತವಾಗಿ ವ್ಯವಹರಿಸಬಹುದು ಎಂಬುದನ್ನು ಕವಿ ವಿವರಿಸುತ್ತಾನೆ. ಸದಾ ಕಾಲವೂ ನಾವು ಸಂತೋಷದಿಂದ ಇರಬೇಕಾದರೆ, ಆತ್ಮೀಯ ಬಂಧುಗಳಲ್ಲಿ, ದಾಕ್ಷಿಣ್ಯ ಭಾವವನ್ನು ತೋರಬೇಕು. ನಾಚಿಕೆಯನ್ನು ಪ್ರದರ್ಶಿಸಬೇಕು. ಅದೇ ವಿದ್ವಾಂಸರಿಗೆ ಹೆಣ್ಣಿಗೆ ಭೂಷಣ. ಸೇವಕರಲ್ಲಿ, ದೀನರಲ್ಲಿ ದಯಾಪರರಾಗಿರಬೇಕು. ದ್ವೈಧೀಭಾವದಿಂದ ವ್ಯವಹರಿಸುವ, ನಯವಂಚಕರು, ದುರ್ಜನರೊಂದಿಗೆ ಒರಟುತನವನ್ನು ಪ್ರದರ್ಶಿಸಬೇಕು. ಅಲ್ಲಿ ಸಜ್ಜನಿಕೆ, ಮೃದುತ್ವ, ಪ್ರಯೋಜನಕ್ಕೆ ಬರುವುದಿಲ್ಲ. ವಾಲ್ಮೀಕಿ ಮಹರ್ಷಿಗಳು ರಾಮಾಯಣದಲ್ಲಿ ಮೃದುಸ್ವಭಾವ ಅವಮಾನ. ಸೋಲಿಗೆ ಕಾರಣವಾಗುತ್ತದೆ ಎಂದು ನುಡಿಯುತ್ತಾರೆ. (**ಮೃದುರ್ಹಿ ಪರಿಭೂಯತೇ।**). ಸಾಧು ಸಂತರಲ್ಲಿ ಅತ್ಯಂತ ವಿನಯದಿಂದ, ಪ್ರೀತಿ–ಗೌರವಗಳಿಂದ ನಡೆದುಕೊಳ್ಳಬೇಕು. ರಾಜರು, ಮೇಲಧಿಕಾರಿಗಳೊಂದಿಗೆ ಬಹಳ ನಾಜೂಕಾಗಿ, ಚತುರತೆಯಿಂದ ವ್ಯವಹರಿಸಬೇಕು. ವಿದ್ವಾಂಸರೊಂದಿಗೆ ಒಡಗೂಡಿದಾಗ ಅವರ ಜ್ಞಾನ ಮಹತ್ತ್ವವನ್ನು ಅರಿತು, ವಿನಯದಿಂದ ಜ್ಞಾನಾರ್ಜನೆ ಮಾಡಿಕೊಳ್ಳಬೇಕು. ಶತ್ರುಗಳು ಎದುರಾದಾಗ ವೀರ–ಪರಾಕ್ರಮಗಳನ್ನು ಪ್ರದರ್ಶಿಸಿ ಅವರನ್ನು ಹಿಮ್ಮೆಟ್ಟಿಸಬೇಕು. ತಪ್ಪೆಸಗಿದಾಗ, ಗುರುಹಿರಿಯರಲ್ಲಿ ಅದನ್ನು ಪ್ರಸ್ತಾಪಿಸಿ, ಕ್ಷಮೆಗಾಗಿ ಪ್ರಾರ್ಥಿಸಬೇಕು, ಯುಧಿಷ್ಠಿರನು ಯಕ್ಷಪ್ರಶ್ನೆಯಲ್ಲಿ ಕ್ಷಮೆಯೇ ವೀರನಿಗೆ ಭೂಷಣ ಎನ್ನುತ್ತಾನೆ (ಕ್ಷಮಾ ವೀರಸ್ಯ ಭೂಷಣಮ್।). ಸ್ತ್ರೀಯರಲ್ಲಿ ಗಾಂಭೀರ್ಯವನ್ನು, ಪ್ರಗಲ್ಭತೆಯನ್ನು ಪ್ರದರ್ಶಿಸಬೇಕು. ಹೀಗೆ ಕಲೆಗಳಲ್ಲಿ ಕುಶಲರಾದವರು ಲೋಕಪೂಜ್ಯತೆಯನ್ನು, ಮರ್ಯಾದೆಯನ್ನು ಹೊಂದುವರು, ಇಂತಹ ಗುಣಗಳನ್ನು ಯುವಜನರಿಗೆ ವಿಪ್ರ ಹಿರಿಯರು ಪ್ರೇರಣೆ ನೀಡುವಂತಾಗಲಿ.

## ವಿಪ್ರನುಡಿಯಲ್ಲಿ ಜಾಹೀರಾತಿಗಾಗಿ ಮನವಿ

**ಪ್ರತಿ ತಿಂಗಳ ಜಾಹೀರಾತಿನ ದರ ಹೀಗಿದೆ.**

| | | | | |
|---|---|---|---|---|
| 1. | ಹೊರ ರಕ್ಷಾ ಪುಟ (ವರ್ಣ) | .. | ರೂ. | 30,000/= |
| 2. | ಒಳ ರಕ್ಷಾ ಪುಟ (ವರ್ಣ) | .. | ರೂ. | 20,000/= |
| 3. | ಒಳ ಪುಟ (ವರ್ಣ) | .. | ರೂ. | 15,000/= |
| 4. | ಒಳ ಪುಟ (ಕಪ್ಪು ಬಿಳುಪು) | .. | ರೂ. | 10,000/= |
| 5. | ಒಳ ಅರ್ಧ ಪುಟ (ಕಪ್ಪು ಬಿಳುಪು) | .. | ರೂ. | 5,000/= |
| 6. | ಒಳ ಕಾಲು ಪುಟ (ಕಪ್ಪು ಬಿಳುಪು) | .. | ರೂ. | 2,500/= |
| 7. | ಎರಡು ಸಾಲಿನ ಪ್ರಕಟಣೆ | .. | ರೂ. | 1,000/= |
| 8. | ಒಂದು ಪುಟ ಪ್ರಾಯೋಜಕತ್ವ | .. | ರೂ. | 2,000/= |

# ಮಹಾಲಯ ಅಮಾವಾಸ್ಯೆ

–ವಿದ್ವಾನ್ ಮಂಜುನಾಥ್ ಭಟ್,
ಸರ್ಕಾರಿ ಸಂಸ್ಕೃತ ಪಾಠಶಾಲಾ ಪ್ರಾಧ್ಯಾಪಕರು

ಭಾದ್ರಪದ ಬಹುಳ ಪ್ರತಿಪತ್‌ನಿಂದ ಪ್ರಾರಂಭಿಸಿ ಭಾದ್ರಪದ ಅಮಾವಾಸ್ಯೆಯವರೆಗಿನ 15 ದಿನಗಳ ಕಾಲವನ್ನು ಮಹಾಲಯ ಪಕ್ಷ ಎನ್ನುತ್ತಾರೆ. ಈ ಕಾಲವನ್ನು ವಸು, ರುದ್ರ, ಆದಿತ್ಯ ಲೋಕದಲ್ಲಿರುವ ಸರ್ವಪಿತೃಗಳನ್ನುದ್ದೇಶಿಸಿ ಮಾಡುವ ಪಿಂಡ ತರ್ಪಣಾದಿಗಳನ್ನು ಮಾಡುವ ಕಾಲವೆಂದು ಪರಿಗಣಿತವಾಗಿದೆ. ವರ್ಷದ ಉಳಿದೆಲ್ಲ ಕಾಲಗಳಲ್ಲಿ ದೇವತೆಗಳಿಗೆ ಸಂಬಂಧಿಸಿದ ಕಾರ್ಯವನ್ನು ಮಾಡಲು ಬಳಸಿ ಈ ಪಕ್ಷ ಕಾಲವನ್ನು ಪಿತೃ ಸಂಬಂಧಿ ಕಾರ್ಯವನ್ನು ಮಾಡಲು ಧರ್ಮಶಾಸ್ತ್ರಗಳು ತಿಳಿಸಿದೆ. ಹಾಗಾಗಿ ಈ ಪಕ್ಷ ಸಂದರ್ಭದಲ್ಲಿ ಯಾವುದೇ ಶುಭ ಸಂಸ್ಕಾರ ಕಾರ್ಯವನ್ನಾಗಲಿ ಗೃಹಪ್ರವೇಶಾದಿ ಕೃತ್ಯಗಳನ್ನಾಗಲೀ ಮಾಡುತ್ತಿಲ್ಲ. ಈ ಸಂದರ್ಭದಲ್ಲಿ **"ಅಯೋಧ್ಯಾ ಮಥುರಾಮಾಯಾಕಾಶಿ ಕಾಂಚಿ ಅವಂತಿಕಾ ಪುರಿದ್ವಾರವಲೇಚೈವ ಸಪ್ತೈತಮೋಕ್ಷದಾಯಿಕಾಃ"** ಎನ್ನುವಂತೆ ಸ್ವಗೃಹದಲ್ಲಿ ಅಥವ ಸಪ್ತ ಕ್ಷೇತ್ರದಲ್ಲಿ ಪಿತೃಗಳಿಗೆ ಕಾರ್ಯಗಳನ್ನು ಮಾಡಲು ಸಾಧ್ಯವಾಗದೇ ಇದ್ದಾಗ ಮನೆಯಲ್ಲಾಗಲಿ, ನದೀ ತೀರದಲ್ಲಾಗಲಿ, ಕೆರೆದಂಡೆಗಳ ಮೇಲಾಗಲಿ ಮಾತೃವರ್ಗತ್ರಯ ಪಿತೃವರ್ಗತ್ರಂಯದವರನ್ನು ಸ್ಮರಿಸಿ ಅವರಿಗೆ ಕೊಡುವ ತಿಲತರ್ಪಣ ಪಿಂಡ ಪ್ರದಾನ ವಾಯಸ ಬಲಿಯೇ ಮುಂತಾದ ಕರ್ಮಗಳಿಂದ ಸರ್ವಪಿತೃಗಳು ತೃಪ್ತರಾಗಿ ಈತನು ಮಾಡುವ ಪುಣ್ಯ ಕಾರ್ಯಗಳಲ್ಲಿ ಯಜ್ಞದ ಫಲಗಳು ಲಭಿಸುತ್ತದೆ ಎನ್ನುವುದು ನಂಬಿಕೆ.

ಯಜ್ಞಯಾಗಾದಿಗಳಿಂದ ದೇವತೆಗಳನ್ನು ಅಧ್ಯಯನ ಅಧ್ಯಾಪನಾದಿಗಳಿಂದ ಋಷಿ ಋಣವನ್ನು ತೀರಿಸಬಹುದು. ಇವುಗಳಿಗೆ ಶುಭಕಾಲವನ್ನು ಅವಲಂಬನೆ ಮಾಡಬಹುದು. ಆದರೆ ಮಾತಾ ಪಿತೃಗಳ ಕಾರ್ಯವನ್ನು ಅವರು ಮೃತವಾದ ತಿಥಿಗಳಂದೇ ಮಾಡ ಬೇಕಾಗಿರುವುದು ಕರ್ತವ್ಯವಾಗಿರುವುದರಿಂದ, ವಿದೇಶಗಮನ, ರೋಗಭಾದೆ ಅಥವಾ ಇನ್ನಾವುದೇ ಕಾರಣದಿಂದ ಮಾಡಲು ಸಾಧ್ಯವಾಗದೇ ಇರುವಾಗ ಈ ಕಾಲದಲ್ಲಿ ಉಕ್ತ ಪ್ರಾಯಶ್ಚಿತ್ತಪೂರ್ವಕ ಮಾಡಿಕೊಳ್ಳಲು ಶಾಸ್ತ್ರ ಅವಕಾಶ ಮಾಡಿದೆ. ಇತರ ವರ್ಣೀಯರಿಗೆ ಪಂಚಾಂಗವನ್ನು ನೋಡಲು ಬಾರದೇ ಇರುವವರಿಗಾಗಿ ಈ ಪಕ್ಷದಲ್ಲಿ ಪಿತೃಕಾರ್ಯಗಳನ್ನು ಮಾಡಲು ಶಾಸ್ತ್ರವು ಅವಕಾಶ ಮಾಡಿಕೊಟ್ಟಿದೆ.

ಮಹಾಲಯ ಪಕ್ಷದಲ್ಲಿ ಕೇವಲ ತರ್ಪಣ, ಪಿಂಡ ಪ್ರದಾನ, ವಾಯಸ ಬಲಿದಾನ, ತೀರ್ಥಶಾಸ್ತ್ರ ಮುಂತಾದ ವಿಧಗಳಿವೆ. ಅವರವರ ಶಕ್ತ್ಯಾನುಸಾರ ದಾನಧರ್ಮಾದಿಗಳನ್ನು ಹೇಳಿವೆ.

ಮಹಾಲಯ ಪಕ್ಷದಲ್ಲಿ ಸರ್ವಪಿತೃಗಳಿಗೂ ಅಂದರೆ ಬಂಧು ಬಾಂಧವರು, ಆಪ್ತೇಷ್ಟರು, ದಾಯಾದಿಗಳೆಲ್ಲರಿಗೂ ತರ್ಪಣಾದಿ ಗಳನ್ನು ನೀಡುವ ಅವಕಾಶವಿದೆ. ಆ ಪಕ್ಷದ ಅಮಾವಾಸ್ಯೆಯೆ ಆ ವರ್ಷದ ಪಿತೃಗಳಿಗೆ ಕೊನೆಯ ದಿನವಾಗಿರುತ್ತದೆ. ಪಿತೃಗಳಿಗೆ ತಿಲತರ್ಪಣ ಹಾಗೂ ವಾಯಸ (ಕಾಗೆಗೆ) ಬಲಿ ನೀಡುವಿಕೆ ಬಹಳ ಪ್ರಮುಖವಾದದ್ದು ಏಕೆಂದರೆ ಪಿತೃಗಳು ಪಿಂಡ ರೂಪದಲ್ಲಿ, ಯಮನು ವಾಯಸ ರೂಪದಲ್ಲಿ ಸ್ವೀಕರಿಸು ತ್ತಾನೆ ಎನ್ನುವ ನಂಬಿಕೆಯಿದೆ. ಒಟ್ಟಿನಲ್ಲಿ ಜನ್ಮಕ್ಕೆ ಕಾರಣರಾದ ಮಾತಾಪಿತೃ ಗಳ ಋಣ ಪರಿಹಾರ ಕಂಡುಕೊಳ್ಳಲು ಇದೊಂದು ಶಾಸ್ತ್ರ ನೀಡಿದ ಮಾರ್ಗ.

**ಜಾಹಿರಾತು**

## ಶ್ರೀ ಶ್ರೀನಿವಾಸ ನಿಲಯ ಧಾರ್ಮಿಕ ಸಭಾ ಮಂದಿರ

## Sri Srinivasa Nilaya Dharmika Sabha Mandira

**ಸೀತಾ ಸರ್ಕಲ್‌ನಿಂದ ಗಿರಿನಗರಕ್ಕೆ ಹೋಗುವ ಮಾರ್ಗ**
**ಶ್ರೀ ವಿವೇಕಾನಂದ ಪಾರ್ಕ್ ಎದುರು, ಬೆಂಗಳೂರು-560085**

**ಶ್ರೀ ಶ್ರೀನಿವಾಸ ನಿಲಯ ಧಾರ್ಮಿಕ ಸಭಾ ಮಂದಿರ ಎಂಬ ನೂತನ ಕಟ್ಟಡದಲ್ಲಿ ಉಪನಯನ, ಮದುವೆ, ಸೀಮಂತ, ನಾಮಕರಣ, ಹುಟ್ಟುಹಬ್ಬ, ಹೋಮ-ಹವನ ಸತ್ಯನಾರಾಯಣ ಪೂಜೆ ಇನ್ನಿತರ ದೇವತಾ ಕಾರ್ಯಗಳು, ವೈಕುಂಠ ಸಮಾರಾಧನೆ, ಅನ್ನ ದಾನಾದಿಗಳನ್ನು ಹಾಗೂ ಸಂಜೆ ಕಾರ್ಯಕ್ರಮಗಳನ್ನು ಇತರ ಶುಭ, ಧಾರ್ಮಿಕ ಕಾರ್ಯಕ್ರಮಗಳನ್ನು ಮಾಡಬಹುದಾಗಿದೆ.**

**ಸ್ಥಳದ ಬಾಡಿಗೆ ಇರುವುದಿಲ್ಲ.**

**ದಕ್ಷಿಣ ಮತ್ತು ಉತ್ತರ ಭಾರತದ ಅಡುಗೆಯನ್ನು ಮಡಿಯಲ್ಲಿ ಮಾಡಲಾಗುವುದು**

**ವಿವರಗಳಿಗಾಗಿ ಕಾರ್ಯಾಲಯವನ್ನು ಸಂಪರ್ಕಿಸಿ**
**ದೂರವಾಣಿ : 2672 2267, 98866 55755**

# ಅಧ್ಯಕ್ಷರ ನುಡಿ



ಆತ್ಮೀಯ ವಿಪ್ರಬಂಧುಗಳೇ,

ನಿಮ್ಮೆಲ್ಲರಿಗೂ ದಸರೆಯ ಶುಭಾಶಯಗಳು. ಕೋವಿಡ್ ಭೀತಿ ಮರೆ ಮಾಚುತ್ತಿದ್ದಂತೆ ಹಬ್ಬಗಳ ಆಚರಣೆಗಳು ಕಳೆಕಟ್ಟುತ್ತಿವೆ. ಮನಸ್ಸು ಪ್ರಫುಲ್ಲವಾಗಲು ಹಬ್ಬ ಹರಿದಿನಗಳ ಆಚರಣೆ ಅತ್ಯಗತ್ಯ ಸತತವಾಗಿ ದುಡ್ಡು, ಕೀರ್ತಿ ಭವಿಷ್ಯವೆಂದು ಅದರ ಹಿಂದೆ ಬೀಳುವ ಮನುಷ್ಯನಿಗೆ ಆ ಯೋಚನೆಗಳಿಂದ ಹೊರಬರುವಂತೆ ಮಾಡುವುದೆ ಈ ಹಬ್ಬ ಹರಿದಿನಗಳು. ಬಿಡುವಿಲ್ಲದ "Rat Race" ಗೆ ಕೊಂಚ ಬಿಡುವು ಕೊಡುವಂತೆ ಮಾಡುವುದ ಈ ಹಬ್ಬಗಳು.

ಹೀಗೆ ನಾವೆಲ್ಲರು ಆಯಾ ಧರ್ಮಗಳಿಗೆ ಪಂಗಡಕ್ಕೆ ಸಂಬಂಧಪಟ್ಟರೂ ಆಯಾ ಧರ್ಮದ ಚೌಕಟ್ಟನ್ನು ಅವರವರ ಹಬ್ಬಗಳನ್ನು ಆಚರಿಸಿಕೊಳ್ಳುತ್ತೇವೆ. ಆದರೆ ರಾಷ್ಟ್ರಧರ್ಮವೆಂಬುವುದಿದೆಯಲ್ಲ ಆ ಧರ್ಮದ ಪರಿಪಾಲನೆ ನಾವುಗಳು ಮಾಡಿಕೊಂಡಿದ್ದೇವೆಯೇ ಹಾಗೂ ಈ ರಾಷ್ಟ್ರಕ್ಕಾಗಿ ಸರ್ವಸ್ವ ವನ್ನು ಪರಿತ್ಯಾಗ ಮಾಡಿದ ಸ್ವಾತಂತ್ರ ಸೇನಾನಿಗಳನ್ನು ಸ್ಮರಿಸಿ ಆ ಮಹಾನ್ ಚೇತನಗಳು ಹಾಕಿಕೊಟ್ಟ ದಾರಿಯಲ್ಲಿ ನಾವು ನಡೆಯುತ್ತಿದ್ದೇವೆಯೇ ಎಂಬುದು ನಾವುಗಳು ಆಗಾಗ್ಗೆ ಕೇಳಿಕೊಳ್ಳಬೇಕಾಗುತ್ತದೆ. ಅಷ್ಟೇ ಅಲ್ಲ ಮುಂದಿನ ಹಾಗೂ ಇಂದಿನ ಯುವ ಪೀಳಿಗೆಗಳಿಗೆ ಹಬ್ಬಹರಿದಿನಗಳ ರೀತಿರಿವಾಜುಗಳನ್ನು ಹೇಳಿಕೊಟ್ಟ ಹಾಗೆ ಸ್ವಾತಂತ್ರಕ್ಕಾಗಿ ತಮ್ಮ ಜೀವನವನ್ನು ಮುಡುಪಾಗಿಟ್ಟ ಮಹಾನ್ ಸೇನಾನಿಗಳನ್ನು ಸ್ಮರಿಸುವ ಸಂಪ್ರದಾಯಗಳನ್ನು ಬೆಳೆಸಿದ್ದೇವೆಯೇ ಎಂಬುದನ್ನು ನಾವು ಕೇಳಿಕೊಳ್ಳಬೇಕು.

ಭಾರತ ಸ್ವತಂತ್ರಗೊಂಡು ಎಪ್ಪತ್ತೈದು ವರ್ಷಗಳೇ ಕಳೆಯಿತು. ಸ್ವಾತಂತ್ರ್ಯೋತ್ಸವದ ಸುವರ್ಣ ಸಂದರ್ಭದಲ್ಲಿ ಆ ವೀರಯೋಧರ ಸ್ಮರಿಸುವ ಹಾಗೂ ಆ ಸೇನಾನಿಗಳು ಪಟ್ಟ ಕಷ್ಟಗಳನ್ನು ಮತ್ತೆ ಮತ್ತೆ ನೆನಪಿಸುವ ಜವಾಬ್ದಾರಿ ನಮ್ಮ ಸಮಾಜದ ಮೇಲಿದೆ ಎಂದು ಮನಗೊಂಡು ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾದ ನೇತೃತ್ವದಲ್ಲಿ ಎಲ್ಲಾ ಪದಾಧಿಕಾರಿಗಳ ಹಾಗೂ ಹಿರಿಯರ, ಕಿರಿಯರ ಒತ್ತಾಸೆಯಂತೆ "ಸದ್ಭಾವನ ಯಾತ್ರೆ" ಯನ್ನು ಗೌರಿಬಿದನೂರಿನಿಂದ ವಿದುರಾಶ್ವತ್ಥದಡೆಗೆ" ಇದೇ ಬರುವ ಅಕ್ಟೋಬರ್ ಎರಡರಂದು ಹಮ್ಮಿಕೊಳ್ಳಲಾಗಿದೆ. ಸ್ವಾತಂತ್ರ ಸಂಗ್ರಾಮದಲ್ಲಿ ಕರುನಾಡಿಗೂ ಹಾಗೂ ವಿಧುರಾಶ್ವತ್ಥಕ್ಕೂ ತನ್ನದೇ ಆದ ಮಹತ್ವವಿದೆ. ಚಿಕ್ಕಬಳ್ಳಾಪುರ ಜಿಲ್ಲೆಯ ಗೌರಿಬಿದನೂರು ತಾಲ್ಲೂಕಿನ ಪುಟ್ಟ ಗ್ರಾಮ ವಿಧುರಾಶ್ವತ್ಥ ಸ್ವಾತಂತ್ರ್ಯ ಹೋರಾಟದ ಕಿಚ್ಚು ಹೊತ್ತಿದ್ದ ಸಂದರ್ಭದಲ್ಲಿ ವಿಧುರಾಶ್ವತ್ಥದಲ್ಲಿ ಅಂದಿನ ಕಾಂಗ್ರೆಸ್ ಸಮಿತಿಯ ಧ್ವಜಾರೋಹಣ ಕಾರ್ಯಕ್ರಮ ಹಮ್ಮಿಕೊಂಡಿತ್ತು.

1938 ಏಪ್ರಿಲ್ 8 ರಿಂದ 10ರವರೆಗೆ ಬ್ರಿಟಿಷರ ವಿರುದ್ಧ ಪ್ರತಿಭಟಿಸಲು ಅಂದಿನ ಜನನಾಯಕರು ಮಂಡ್ಯ ಜಿಲ್ಲೆಯ ಶಿವಪುರ ಗ್ರಾಮದಲ್ಲಿ ಪ್ರಥಮ ಕಾಂಗ್ರೆಸ್ ಸಮಾವೇಶವನ್ನು ನಡೆಸಿದರು. ಹೀಗೆ ಸಭೆಯಲ್ಲಿ ಬ್ರಿಟಿಷರ ವಿರುದ್ಧ ಹೋರಾಡಲು ಧ್ವಜ ಸತ್ಯಾಗ್ರಹ, ಸರ್ಕಾರಿ ಆಜ್ಞೆ ಉಲ್ಲಂಘಿಸುವುದು ಮುಂತಾದ ಪ್ರಮುಖ ನಿರ್ಧಾರ ಕೈಗೊಂಡರು. ಈ ನಿರ್ಣಯದಿಂದ ಪ್ರಭಾವಿತರಾಗಿ ಹಲವಾರು ಜನರು ಹೋರಾಟಕ್ಕೆ ಧುಮುಕಿದರು. ಅಂದಿನ ಸ್ವಾತಂತ್ರ್ಯ ಸೇನಾನಿಗಳಾದ ಎನ್.ಸಿ. ನಾಗಯ್ಯ ರೆಡ್ಡಿ ಅವರ ನೇತೃತ್ವದಲ್ಲಿ ವಿಧುರಾಶ್ವತ್ಥವನ್ನು ಹೋರಾಟದ ಕೇಂದ್ರ ಸ್ಥಾನವನ್ನಾಗಿ ಮಾಡಿಕೊಂಡು ಬ್ರಿಟಿಷರ ವಿರುದ್ಧ ಹೋರಾಡಲು ನಿರ್ಧರಿಸಿದರು.

ಕೋಲಾರ, ಚಿಕ್ಕಬಳ್ಳಾಪುರ, ಗೌರಿಬಿದನೂರು ಹಾಗೂ ಸುತ್ತಮುತ್ತಲಿನ ಮುಖಂಡರನ್ನು ಸಂಪರ್ಕಿಸಿ 1938 ಏಪ್ರಿಲ್ 25ರಂದು ವಿಧುರಾಶ್ವತ್ಥದಲ್ಲಿ ಧ್ವಜ ಸತ್ಯಾಗ್ರಹ ನಡೆಸಬೇಕೆಂದು ನಿರ್ಧರಿಸಲಾಯಿತು. ವಿಧುರಾಶ್ವತ್ಥದ ಧ್ವಜ ಸತ್ಯಾಗ್ರಹ ವಿಷಯವನ್ನರಿತ ಅಂದಿನ ಕೋಲಾರ ಜಿಲ್ಲಾ ಮ್ಯಾಜಿಸ್ಟ್ರೇಟ್ ತಾಲ್ಲೂಕಿನಾದ್ಯಂತ 144 ವಿಧಿ ಹೊರಡಿಸಿ ಸಭೆ ಸಮಾರಂಭಗಳನ್ನು ನಡೆಸದಂತೆ ಸೂಚಿಸಿದರು. ಇದ್ಯಾವುದನ್ನು ಲೆಕ್ಕಿಸದೇ ಧ್ವಜ ಸತ್ಯಾಗ್ರಹ ಕಾರ್ಯಕ್ರಮ ನಡೆಸುತ್ತಿದ್ದ ಎನ್.ಸಿ. ನಾಗಯ್ಯ ರೆಡ್ಡಿ, ಶ್ರೀಪಾಲಯ್ಯ, ಗೆದರೆ ರಾಮಸ್ವಾಮಿ, ನರಸೀಯಪ್ಪ, ನಾರಾಯಣಪ್ಪ, ಸೂರ್ಯನಾರಾಯಣರಾವ್, ವೆಂಕಟರಾವ್, ಸಂಗಪ್ಪ ಮುಂತಾದ ನಾಯಕರು ಹಾಗೂ ಕಾರ್ಯಕರ್ತರನ್ನು ಪಟ್ಟಿ ಮಾಡಿ ಏಪ್ರಿಲ್ 22ರಂದು ಬಂಧಿಸಿ ಚಿಕ್ಕಬಳ್ಳಾಪುರ ಹಾಗೂ ಸೆಂಟ್ರಲ್ ಜೈಲಿಗೆ ಕಳುಹಿಸಲಾಯಿತು. ಈ ನಡೆಯಿಂದ ರೊಚ್ಚಿಗೆದ್ದ ಕಾರ್ಯಕರ್ತರು ಭಾರಿ ಸಂಖ್ಯೆಯಲ್ಲಿ ಏಪ್ರಿಲ್ 25ರಂದು ವಿಧುರಾಶ್ವತ್ಥದಲ್ಲಿ ಜಮಾವಣೆಗೊಂಡರು. ನಾಯಕರಾದ ಟಿ.ರಾಘವಾಚಾರ್ ಮತ್ತು ಹಲವು ಕಾರ್ಯಕರ್ತರನ್ನು ಪೋಲೀಸರು ಬಂಧಿಸಿದರು. ಇದನ್ನು ಕಂಡ ಜನ ರೊಚ್ಚಿಗೆದ್ದು ಬ್ರಿಟಿಷ್ ಸರ್ಕಾರದ ವಿರುದ್ಧ ಭಾರತ ಮಾತಾ ಕೀ ಜೈ ಎಂದು ಘೋಷಣೆ ಕೂಗುತ್ತಾ ಪ್ರತಿಭಟನೆಗೆ ಮುಂದಾದರು. ಆಗ ಸತ್ಯಾಗ್ರಹಿಗಳು ಹಾಗೂ ಪೋಲೀಸರ ನಡುವೆ ಉದ್ರಿಕ್ತ ವಾತಾವರಣ ನಿರ್ಮಾಣವಾಗಿ ಪೋಲೀಸರು ಕಂಡಕಂಡಲ್ಲಿ ಲಾಠಿ ಬೀಸಲು ಪ್ರಾರಂಭಿಸಿದರರು. ಅದನ್ನು ಪ್ರತಿಭಟಿಸಿದ ದೇಶಭಕ್ತ ಹೋರಾಟಗಾರರ ಮೇಲೆ ಮನಸೋ ಇಚ್ಛೆ ಗುಂಡಿನ ಸುರಿಮಳೆಗೈದರು. ಈ ದುರ್ಘಟನೆಯಲ್ಲಿ ಇಡಗೂರು ಭೀಮಯ್ಯ, ಚೌಳೂರು ನರಸಪ್ಪ, ಗಜ್ಜನ್ನಗಾದಿನರಸಪ್ಪ, ಹನುಮಂತಪ್ಪ, ಕಾರಗೊಂಡಹಳ್ಳಿ ಮಲ್ಲಯ್ಯ, ನಾಮಾ ಅಶ್ವತ್ಥನಾರಾಯಣ ಶೆಟ್ಟಿ, ವೆಂಕಟಗಿರಿಯಪ್ಪ, ನರಸಪ್ಪ, ಮರಳೂರು ಗೌರಮ್ಮ ಸ್ಥಳದಲ್ಲೇ ಪ್ರಾಣ ತೆತ್ತರೆ ನೂರಾರು ಜನರು ಗಾಯಗೊಂಡರು.

ಈ ಕರಾಳ ದುರಂತವಾರ್ತೆ ಮಹಾತ್ಮಗಾಂಧಿ ಅವರಿಗೆ ತಲುಪಿತು. ಅವರ ಆದೇಶದಂತೆ ಸರ್ದಾರ ಪಟೇಲ್ ಮತ್ತು ಆಚಾರ್ಯ ಕೃಪಲಾನಿ ವಿಧುರಾಶ್ವತ್ಥಕ್ಕೆ ಭೇಟಿ ನೀಡಿದ್ದರು.

ಹೀಗೆ ವಿಧುರಾಶ್ವತ್ಥಕ್ಕೆ ಸ್ವಾತಂತ್ರ ಸಂಗ್ರಾಮದಲ್ಲಿ ತನ್ನದೇ ಆದ ಸ್ಥಾನವಿದೆ. ಈ ನಿಟ್ಟಿನಲ್ಲಿ ಮಹಾಸಭೆವತಿಯಿಂದ ಹಮ್ಮಿಕೊಂಡಿರುವ ಬೃಹತ್ ಪಾದಯಾತ್ರೆಗೆ ತಾವೆಲ್ಲರೂ ಬಂಧು ಬಳಗ ಹಾಗೂ ಗೆಳೆಯರೊಂದಿಗೆ ಸಕ್ರಿಯವಾಗಿ ಭಾಗವಹಿಸಿ ಪಾದಯಾತ್ರೆ ಯಶಸ್ವಿಗೊಳಿಸಬೇಕೆಂದು ತಮ್ಮಲ್ಲಿ ಸವಿನಯ ಪ್ರಾರ್ಥನೆ.

ಇದಲ್ಲದೆ ಕಳೆದ ತಿಂಗಳು ಶಿವಮೊಗ್ಗದಲ್ಲಿ ನಡೆದ ಕಾರ್ಯಕಾರಿಣಿ ಸಭೆಗೆ ಉತ್ಸಾಹದಿಂದ ಪಾಲ್ಗೊಂಡಿದ್ದ ಕಾರ್ಯಕಾರಣಿ ಸದಸ್ಯರೆಲ್ಲರಿಗೂ ನನ್ನ ನಮಸ್ಕಾರಗಳು. ಇದೊಂದು ಮಾದರಿ ಕಾರ್ಯಕ್ರಮವೆಂಬಂತೆ ಶಿವಮೊಗ್ಗ ಜಿಲ್ಲಾ ಬ್ರಾಹ್ಮಣ ಸಭಾ ಪದಾಧಿಕಾರಿಗಳು ನಟರಾಜ ಭಾಗವತ್ ಅವರ ನೇತೃತ್ವದಲ್ಲಿ ಆಯೋಜಿಸಿದ್ದು ನಿಜಕ್ಕೂ ಪ್ರಶಂಸಾರ್ಹ ವಿಷಯವೇ ಸರಿ.

**ಪಾದಯಾತ್ರೆಯಲ್ಲಿ ನಿಮ್ಮ ನಿರೀಕ್ಷೆಯಲ್ಲಿ,**

**ಅಶೋಕ ಹಾರನಹಳ್ಳಿ**

**ಮಹಾಸಭಾಧ್ಯಕ್ಷರು.**

# ಸಂಪಾದಕೀಯ

**ಆತ್ಮೀಯ ವಿಪ್ರಬಂಧುಗಳೇ,**

ಆಗಸ್ಟ್-ಸೆಪ್ಟಂಬರ್ ಮಾಸಗಳಲ್ಲಿ ಹಬ್ಬದ ಸಾಲುಗಳು. ಎಲ್ಲ ವಿಪ್ರರೂ ಆಚರಿಸಿ ಸಂಭ್ರಮಿಸುತ್ತಿದ್ದಾರೆ. ಇವುಗಳಲ್ಲಿ ಪ್ರಮುಖವಾದದು ಸ್ವರ್ಣಗೌರೀ-ಗಣೇಶನ ಹಬ್ಬ-ವ್ರತ. ಭಾದ್ರಪದ ಶುಕ್ಲ ಚತುರ್ಥಿಯಂದು ಆಚರಿಸುವ ಗಣೇಶ ಹಬ್ಬ ಅಸಾಮಾನ್ಯವಾದದ್ದು. ಭಾರತೀಯರೆಲ್ಲರೂ ಸಮುದಾಯ, ಜನಾಂಗ, ಪ್ರಾಂತ್ಯ-ರಾಜ್ಯ ಭೇದವಿಲ್ಲದೇ ವೈಭವದಿಂದ ಈ ಹಬ್ಬವನ್ನು ಆಚರಿಸುತ್ತಾರೆ. ಲೋಕಮಾನ್ಯ ಬಾಲಗಂಗಾಧರ ತಿಲಕ್ ಅವರು ಸ್ವಾತಂತ್ರ್ಯಪೂರ್ವ ಹೋರಾಟ ಸಂದರ್ಭದಲ್ಲಿ ಸಾರ್ವಜನಿಕ ಗಣೇಶೋತ್ಸವವನ್ನು ಜಾರಿಗೊಳಿಸಿ, ಜನರನ್ನು ಸಂಘಟಿಸಿ, ಸ್ವಾತಂತ್ರ್ಯ ಹೋರಾಟಕ್ಕೆ ಹುರಿದುಂಬಿಸಿದರು. ಈ ಗಣೇಶ ಪೂಜೆ,, ತತ್ತ್ವ ಕೇವಲ ನಮ್ಮ ದೇಶದಲ್ಲಷ್ಟೇ ಅಲ್ಲ, ಇಡೀ ವಿಶ್ವವ್ಯಾಪಿಯಾಗಿದೆ. ಗಣಪತಿ ಆರಾಧನೆ ಆಗ್ನೇಯ ಏಷ್ಯಾ ದೇಶಗಳಲ್ಲಿ, ಹಿಂದೂ-ಬೌದ್ಧ ಮತಧರ್ಮಗಳಲ್ಲಿ ಭಾರತೀಯ ಸಂಸ್ಕೃತಿಯ ದ್ಯೋತಕವಾಗಿ ಚಾಲ್ತಿಯಲ್ಲಿದೆ! ಸಮುದ್ರಯಾನ ಕೈಗೊಳ್ಳುತ್ತಿದ್ದ ವ್ಯಾಪಾರಿಗಳು, ಅವರೊಂದಿಗೆ ಜೊತೆಗೂಡಿದ ಯುವಕರು, ವಿದ್ವಾಂಸರು, ಸಾಧು-ಸಂತರು ಆಗ್ನೇಯ ಏಷ್ಯಾದಲ್ಲಿ ಭಾರತೀಯ ದೇವತೆಗಳನ್ನು, ಸಂಸ್ಕೃತಿಯನ್ನು ಗ್ರಂಥಗಳನ್ನು ಪರಿಚಯಿಸಿದರು. ಆ ದೇವತೆಗಳಲ್ಲಿ ಗಣಪತಿಗೆ ಅಗ್ರಸ್ಥಾನ. ಆ ಹಲವಾರು ದೇಶಗಳಲ್ಲಿ ಗಣಪತಿಯು ಜ್ಞಾನಕ್ಕೆ ಅಧಿದೇವತೆಯಾಗಿ, ವಿಘ್ನನಿವಾರಕನಾಗಿ ಪೂಜೆಗೊಳ್ಳುತ್ತಿದ್ದಾನೆ. ಆಫ್‌ಘಾನಿಸ್ಥಾನದಲ್ಲಿ 5-7 ಶತಮಾನದಲ್ಲಿ ಗಣೇಶಮೂರ್ತಿಗಳನ್ನು ನಾವು ಕಾಣಬಹುದು. ಈ ಮೂರ್ತಿಗಳು ನಿಂತಿರುವ ಭಂಗಿಯಲ್ಲಿದ್ದು, ಗ್ರೀಕ್-ಭಾರತೀಯ ಶಿಲ್ಪಗಳ ಮಿಶ್ರಣವಾಗಿದೆ. ಟಿಬೆಟ್‌ನ ಅನೇಕ ಬೌದ್ಧ ಪಗೋಡ ದೇವಸ್ಥಾನಗಳ ಮುಖ್ಯದ್ವಾರಗಳ ಮೇಲೆ ಗಣೇಶಮೂರ್ತಿಗಳನ್ನು ಕೆತ್ತಲಾಗಿದೆ. ಬೌದ್ಧ ಭಿಕ್ಷುವೊಬ್ಬನು ಟಿಬೆಟ್‌ನಲ್ಲಿದ್ದ ಗಣೇಶ ವಿಗ್ರಹವನ್ನು ಮಂಗೋಲಿಯಾ ದೇಶಕ್ಕೆ ಕೊಂಡೊಯ್ದು ಸ್ಥಾಪಿಸಿದನಂತೆ. ಆ ಗಣೇಶ ನೃತ್ಯಭಂಗಿಯಲ್ಲಿದೆ. ಶ್ರೀಲಂಕಾದ ಶಿವದೇವಾಲಯದ ಒಂದು ಸ್ತಂಭದ ಮೇಲೆ ಚತುರ್ಭುಜ ಗಣೇಶ ವಿಗ್ರಹವಿದೆ. ಭಾರತೀಯ ವರ್ತಕರು ಬರ್ಮಾ ದೇಶಕ್ಕೆ ವ್ಯಾಪಾರಕ್ಕೆ ಹೋದಾಗ ಗಣೇಶಮೂರ್ತಿಗಳನ್ನು ತೆಗೆದುಕೊಂಡು ಹೋಗಿ ಸ್ಥಾಪಿಸಿದರು. ನೇಪಾಳದ ಹಲವಾರು ಪ್ರಾಂತ್ಯಗಳಲ್ಲಿ ಗಣೇಶ ವಿಗ್ರಹಗಳಿದ್ದು ಅವನು ಮೂರು ಅಥವ ಐದು ಮುಖಗಳು, ಆರು ಅಥವಾ ಹತ್ತು ಕೈಗಳನ್ನು ಹೊಂದಿದ್ದು ಆಯುಧಧಾರಿಯಾಗಿದ್ದಾನೆ. ಬಹುಶಃ ಬಂಗಾಳದ ದಶಭುಜಾ ದುರ್ಗಾದೇವಿಯ ಪ್ರಭಾವವೂ ಇರಬಹುದು. ಥಾಯಲ್ಯಾಂಡ್‌ಗೆ ಸುವರ್ಣಭೂಮಿ ಎಂದು ಹೆಸರಿದ್ದು, ಅಲ್ಲಿ ಬಹಳ ಪ್ರಾಚೀನ ಕಾಲದಿಂದಲೂ ಹಲವಾರು ದೇವತೆಗಳ ಆರಾಧನೆ ನಡೆಯುತ್ತಿದ್ದು ಗಣೇಶನಿಗೆ ಅಗ್ರಪೂಜೆ ಸಲ್ಲಿಸಲಾಗಿದೆ. ದೇವಸ್ಥಾನ ಒಂದು ವಿಗ್ರಹದಲ್ಲಿ ಗಣೇಶನನ್ನು ವ್ಯಾಸಭಾರತ ಬರೆಯುವ ಲಿಪಿಕಾರನನ್ನಾಗಿ ಬಿಂಬಿಸಲಾಗಿದೆ. ಜಾವಾ ದ್ವೀಪದಲ್ಲಿರುವ ಪರಶಿವನ ದೇವಸ್ಥಾನದಲ್ಲಿ, ಡಿಯಾಂಗ್ ಪ್ರದೇಶದಲ್ಲಿ ಚತುರ್ಭುಜನಾದ ಗಣೇಶ ದಂತ, ಕೊಡಲಿ, ಅಕ್ಷಮಾಲೆಯನ್ನು ಪಿಡಿದು ವರಪ್ರದನಾಗಿದ್ದಾನೆ. ಬಾಲಿಯಿಂದ 50 ಮೈಲಿ ದೂರದಲ್ಲಿರುವ ಯೂಬೂದ್ ಎಂಬ ಪ್ರದೇಶದಲ್ಲಿ ಗೋಗಜ ದೇವಾಲಯವಿದೆ. ಅಲ್ಲಿ ಐವತ್ತು ವರ್ಷಗಳಿಗೊಮ್ಮೆ ವಿಶ್ವ ಕಲ್ಯಾಣಕ್ಕೋಸ್ಕರ ಸನಾತನ ವೈದಿಕ ಉತ್ಸವ ನಡೆಯುತ್ತದೆ. 2009 ರಲ್ಲಿ ನಡೆದ ಆ ಅಪರೂಪದ ಉತ್ಸವದಲ್ಲಿ ಈ ಲೇಖಕನಿಗೆ ಭಾಗವಹಿಸುವ ಅವಕಾಶ ದೊರಕಿತ್ತು. ಸಾವಿರಾರು ಬಾಲಿ ಜನರು ಬಿಳೀ ವಸ್ತ್ರಗಳನ್ನು ಧರಿಸಿ, ಕಲಶ, ನೀರು, ನೆಂದ ಅಕ್ಕಿಕಾಳು, ತಾಳೆಹೂವುಗಳನ್ನು ಹಿಡಿದು ಧಾರ್ಮಿಕ ಕಾರ್ಯಕ್ರಮದಲ್ಲಿ ವೈದಿಕ ವಿಧಿ ರೀತಿಯಲ್ಲಿ ಭಾಗವಹಿಸಿದ್ದು ಅಭೂತಪೂರ್ವ ಸಂಗತಿ. ಇಂಡೋನೇಷಿಯಾ ದೇಶಕ್ಕೆ ಸ್ವಾತಂತ್ರ್ಯ ಬಂದ ಸಂದರ್ಭದಲ್ಲಿ ಅದು ಮುಸ್ಲಿಂ ರಾಷ್ಟ್ರವಾದರೂ, ಪ್ರಥಮ ಅಧ್ಯಕ್ಷರಾದ ಸುಕಾರ್ನೋ ಅವರ ಮಾರ್ಗದರ್ಶನದಂತೆ, ಅವರ ಇಪ್ಪತ್ತು ಸಾವಿರ ನೋಟಿನಲ್ಲಿ ವಿದ್ಯಾಧಿಪತಿ ಗಣೇಶನ ಚಿತ್ರವನ್ನು ಅಳವಡಿಸಿದ್ದು ಹೆಗ್ಗಳಿಕೆ ಹಾಗೂ ನಮ್ಮ ದೇಶದ ಗಣೇಶನಿಗೆ ಸಂದ ಶ್ರೇಷ್ಠ ಗೌರವ.

ನಮ್ಮ ದೇಶಕ್ಕೆ ಸ್ವಾತಂತ್ರ್ಯ ಬಂದ ನಂತರ ಹಲವಾರು ಪ್ರತಿಭಾವಂತ ಭಾರತೀಯರು ಪ್ರಪಂಚದ ನೂರಕ್ಕೂ ಹೆಚ್ಚು ದೇಶಗಳಿಗೆ ವೃತ್ತಿ-ವ್ಯಾಪಾರಕ್ಕೆ ಹೋಗಿ ಅಲ್ಲಿ ಹಿಂದೂ ದೇವಾಲಯಗಳನ್ನು ಸ್ಥಾಪಿಸಿದರು. ಉತ್ತರ ಅಮೆರಿಕಾ ದೇಶದಲ್ಲಿ 400 ದೇವಾಲಯಗಳಿದ್ದು, ಅಲ್ಲಿ, ಭಾರತೀಯ ಶಿಲ್ಪ ಶೈಲಿಯಲ್ಲಿ ಗಣಪತಿ ವಿಗ್ರಹಗಳನ್ನು ಸ್ಥಾಪಿಸಲಾಗಿದೆ. ವಿದೇಶೀಯ ದೇವಾಲಯಗಳಲ್ಲೂ ನಮ್ಮ ಗಣಪನಿಗೆ ಅಗ್ರಪೂಜೆ ಸಲ್ಲಿಸುತ್ತಿದ್ದಾರೆ. ಅಂತಹ ವಿಶ್ವಮಾನ್ಯ ಪ್ರಾಚೀನತಮ ವೈದಿಕ ಮೂಲ ಗಣಪತಿಗೆ ನಮ್ಮೆಲ್ಲರ ನಮನಗಳು.

ವಂದನೆಗಳೊಂದಿಗೆ,

**ಪ್ರೊ.ಎಂ.ಕೆ.ಶ್ರೀಧರ್**

**ಪ್ರಧಾನ ಸಂಪಾದಕ.**

### ಮಹಾಸಭೆ ನೇತೃತ್ವದಲ್ಲಿ ಅಕ್ಟೋಬರ್ 2ರಂದು ಗೌರಿಬಿದನೂರಿನಿಂದ ವಿಧುರಾಶ್ವತ್ಥಕ್ಕೆ ಪಾದಯಾತ್ರೆ

# ಸದ್ಭಾವನಾ ಯಾತ್ರೆ – ನಮ್ಮ ನಡೆ ಭಾವೈಕ್ಯದೆಡೆ



ಗಾಂಧೀಜಿ ಹಾಗೂ ಶಾಸ್ತ್ರೀಜಿ ಅವರ ಜಯಂತಿಯಂದು ಗೌರಿಬಿದನೂರು ನಗರದಿಂದ ಕನಾಟಕದ ಜಲಿಯನ್ ವಾಲಾಬಾಗ್ ಎಂದೇ ಕರೆಯಲ್ಪಡುವ ಸ್ವಾತಂತ್ರ್ಯ ಯೋಧರ ಸ್ಮಾರಕ ವಿಧುರಾಶ್ವತ್ಥಕ್ಕೆ ಬೃಹತ್ ಪಾದಯಾತ್ರೆಯನ್ನು ಹಮ್ಮಿಕೊಳ್ಳಲು ನಿರ್ಧರಿಸಲಾಗಿದೆ ಎಂದು ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ಅಧ್ಯಕ್ಷರಾದ ಶ್ರೀ ಅಶೋಕ ಹಾರನಹಳ್ಳಿ ತಿಳಿಸಿದರು.

ಪತ್ರಿಕಾಗೋಷ್ಠಿ ಹಾಗೂ ಪೂರ್ವಭಾವಿ ಸಭೆಯನ್ನುದ್ದೇಶಿಸಿ ಮಾತನಾಡಿದ ಅವರು, ಈ ಪಾದಯಾತ್ರೆ ರಾಷ್ಟ್ರೀಯ ಏಕತೆ ಮತ್ತು ಭಾವೈಕ್ಯತೆಯನ್ನು ಸಾರುವ ಪಕ್ಷಾತೀತ ಮತ್ತು ಜಾತ್ಯತೀತ ಕಾರ್ಯಕ್ರಮವಾಗಿರಲಿದೆ. ಬ್ರಿಟಿಷರ ಹಿಡಿತದಿಂದ ಭಾರತವನ್ನು ಮುಕ್ತಗೊಳಿಸುವ ಸಲುವಾಗಿ ನಡೆದ ಚಳುವಳಿಯಲ್ಲಿ ಹುತಾತ್ಮರಾದ ಸ್ವಾತಂತ್ರ್ಯ ಯೋಧರಿಗೆ ನಮ್ಮ ಗೌರವ ನಮನ ಸಲ್ಲಿಸುವ ಪವಿತ್ರ ಉದ್ದೇಶ ಹೊಂದಿದೆ. ಇಂತಹ ಅಪೂರ್ವ ಕಾರ್ಯಕ್ರಮದಲ್ಲಿ ನಾಡಿನ



ಸಮಸ್ತ ನಾಗರಿಕರು ಹಾಗೂ ಸಂಘ ಸಂಸ್ಥೆಗಳು ಭಾಗವಹಿಸುವ ಮೂಲಕ ಪಾದಯಾತ್ರೆಯನ್ನು ಯಶಸ್ವಿಗೊಳಿಸಬೇಕೆಂದು ಮನವಿ ಮಾಡಿದರು.

ಹಳ್ಳಿಯ ಅನೇಕ ಸಾಮಾನ್ಯ ಜನ ಗಾಂಧೀಜಿಯವರ ಕರೆಗೆ ಓಗೊಟ್ಟು ಭಾರತ ಧ್ವಜವನ್ನು ಕಟ್ಟಿಕೊಂಡು ಸ್ವತಂತ್ರಕ್ಕಾಗಿ ಹೋರಾಡಿದ್ದಾರೆ. ಸ್ವಾತಂತ್ರ್ಯ ಬಡಜನರ ತ್ಯಾಗ ಬಲಿದಾನದಿಂದ ಬಂದಿದೆ. ಆದರೆ ಇಂದು ದೇಶದಲ್ಲಿ ಭ್ರಷ್ಟಾಚಾರ, ಅನಾಚಾರ, ಜಾತಿವಾದ ತಾಂಡವವಾಡುತ್ತಿದೆ. ಒಳಜಗಳ, ಜಾತಿ ಜಗಳಾಗುತ್ತಿದೆ. ಮೂಲಭೂತ ಕರ್ತವ್ಯಗಳಲ್ಲಿ ಯಾವ ಉದ್ದೇಶದಿಂದ ಸ್ವಾತಂತ್ರ್ಯವನ್ನು ಗಳಿಸಿದೆವೋ ಅದೇ ಉದ್ದೇಶದಿಂದ ನಾವು ದೇಶವನ್ನು ಮನ್ನಡೆಸ ಬೇಕಾಗಿದೆ. ಆದ್ದರಿಂದ ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾವು ಕೇವಲ ನಮ್ಮ ಜಾತಿಯನ್ನಷ್ಟೇ ಅಲ್ಲದೇ ಎಲ್ಲಾ ಜಾತಿ ಸಮುದಾಯ ವನ್ನು ಒಗ್ಗೂಡಿಸಿಕೊಂಡು ಜಾತ್ಯತೀತ ವಾಗಿ ಕಾರ್ಯಕ್ರಮವನ್ನು ನಡೆಸಲಿದೆ ಎಂದರು.

ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ಉಪಾಧ್ಯಕ್ಷರಾದ ಶ್ರೀ ರಾಜೇಂದ್ರಪ್ರಸಾದ್ ಮಾತನಾಡಿ, ರಾಜ್ಯಾದ್ಯಂತ ಇರುವ ನಮ್ಮ ಸಮುದಾಯ ಸಹಸ್ರಾರು ಜನ ಪಾದಯಾತ್ರೆಯಲ್ಲಿ ಸೇರಲಿದ್ದು, ಕಾರ್ಯಕ್ರಮವನ್ನು ಯಶಸ್ವಿಯಾಗಿ ನಡೆಯಲು ಹೆಚ್ಚು ಹೆಚ್ಚು ಜನರಿಗೆ ಮಾಹಿತಿ ನೀಡಲು ಪ್ರಚಾರವಾಗಲು ಪ್ರತಿ ಜಿಲ್ಲಾ ಕೇಂದ್ರಗಳಲ್ಲಿರುವ ನಮ್ಮ ಸಮುದಾಯದ ಸಂಘಟನೆಗಳು ಪತ್ರಿಕಾಗೋಷ್ಠಿ ನಡೆಸಿ ವ್ಯಾಪಕ ಪ್ರಚಾರ ನೀಡುವಂತೆ ಮನವಿ ಮಾಡಲಾಗುವುದು. ಈ ನಿಟ್ಟಿನಲ್ಲಿ ಜನರ ಸಹಕಾರ ಅಗತ್ಯ ಎಂದರು.

ರಾಜ್ಯ ಸಂಘಟನಾ ಕಾರ್ಯದರ್ಶಿ ಶ್ರೀ ಬಿ.ಎಸ್. ರಾಘವೇಂದ್ರ ಭಟ್, ಸಹಕಾರ್ಯದರ್ಶಿ ಕಾರ್ತಿಕ್ ಎಸ್. ಬಾಪಟ್, ಮುರಳೀಧರ್, ಕೇಂದ್ರ ಕಾರ್ಯಕಾರಿ ಸಮಿತಿಯ ಸದಸ್ಯರಾದ ವಿಧಾನಸಭೆಯ ನರಸಿಂಹಮೂರ್ತಿ, ಶಿವಶಂಕರ್ ಎಂ.ಆರ್. ಪ್ರಕಾಶ್ ಪಿ.ಆರ್. ನಾಗಭೂಷಣರಾವ್ ಕೆ, ಜಯಸಿಂಹ, ರಮೇಶ್, ಪ್ರಕಾಶ್, ಎನ್.ವಿ.ರಾವ್ ಮತ್ತಿತರ ಮುಖಂಡರುಗಳು ಭಾಗವಹಿಸಿದ್ದರು.

**ಶ್ರೀ ತರಳಬಾಳು ಜಗದ್ಗುರು ಸಿರಿಗೆರೆ ಡಾ॥ ಶ್ರೀ ಶ್ರೀ ಶಿವಮೂರ್ತಿ ಶಿವಾಚಾರ್ಯ ಮಹಾಸ್ವಾಮಿಗಳು, ಶ್ರೀ ಯತಿರಾಜ ಮಠದ ಶ್ರೀ ನಾರಾಯಣ ಜೀಯರ್ ಮಹಾಸ್ವಾಮಿಗಳು, ಶ್ರೀ ಕಣ್ವಮಠದ ಶ್ರೀ ಶ್ರೀ ವಿದ್ಯಾವಿರಾಜ ತೀರ್ಥ ಮಹಾಸ್ವಾಮಿಗಳು ಈ ಬೃಹತ್ ಪಾದಯಾತ್ರೆಗೆ ಆಗಮಿಸಿ ಆಶೀರ್ವಸದಿಸಲಿದ್ದಾರೆ. ಕರ್ನಾಟಕ ರಾಜ್ಯದ ಮಂತ್ರಿಗಳು, ಸ್ಥಳಿಯ ಸಂಸದರು, ಶಾಸಕರುಗಳು, ಜನಪ್ರತಿನಿಧಿಗಳು ಪಾಲ್ಗೊಳ್ಳಲಿದ್ದಾರೆ.**



# ಬೆಂಗಳೂರಿನಲ್ಲಿ ಭವ್ಯ ವಾಣಿಜ್ಯ ಸಂಕೀರ್ಣ ಮತ್ತು ಸಾಂಸ್ಕೃತಿ ಭವನಕ್ಕೆ ಸಂಕಲ್ಪ

## ಫಲಪ್ರದ ಶಿವಮೊಗ್ಗ ಕಾರ್ಯಕಾರಿಣಿ ಸಭೆ




ದಿನಾಂಕ : 19/08/2022 ರಂದು ಶಿವಮೊಗ್ಗ ಬ್ರಾಹ್ಮಣ ಸಂಘದ ಆತಿಥ್ಯದಲ್ಲಿ ನಡೆದ ಮಹಾಸಭೆಯ 3ನೇ ರಾಜ್ಯ ಕಾರ್ಯಕಾರಿಣಿ ಸಭೆ ಅತ್ಯಂತ ಯಶಸ್ವಿಯಾಗಿ ನಡೆಯಿತು .101 ಸದಸ್ಯರು ಹಾಗೂ ಪದಾಧಿಕಾರಿಗಳು ಭಾಗವಹಿಸಿದ ಈ ಸಭೆಯಲ್ಲಿ ಮಹಾಸಭೆಯ ಇಲ್ಲಿಯವರೆಗಿನ ಕಾರ್ಯಚಟುವಟಿಕೆಗಳು ಹಾಗೂ ಮುಂದಿನ ಕಾರ್ಯಯೋಜನೆಗಳ ಕುರಿತು ಚರ್ಚಿಸಲಾಯಿತು.

ಮಹಾಸಭೆಯ ಉಪಾಧ್ಯಕ್ಷರು ಹಾಗೂ ಜಿಲ್ಲಾ ಬ್ರಾಹ್ಮಣ ಸಂಘದ ಅಧ್ಯಕ್ಷ ಶ್ರೀ. ನಟರಾಜ್ ಭಾಗವತ್ ಅವರು ಸ್ವಾಗತ ಮತ್ತು ಪ್ರಾಸ್ತಾವಿಕ ಭಾಷಣ ಮಾಡುತ್ತಾ, ಅಶೋಕ ಹಾರನಹಳ್ಳಿಯವರ ನಾಯಕತ್ವದಲ್ಲಿ ಮಹಾಸಭೆಯು ನೂತನ ಕಾರ್ಯಕ್ರಮಗಳಿಂದ ಮಹಾಸಭೆಯು ಪ್ರಗತಿಯ ಹೆಜ್ಜೆಯಲ್ಲಿ ಸಾಗುತ್ತಿರುವುದನ್ನು ಸ್ವಾಗತಿಸಿದರು. ಸಂಘಟನೆಯ ಬಲವರ್ಧನೆಗೆ ಹಾಗೂ ಎಲ್ಲಾ ಕ್ಷೇತ್ರಗಳಲ್ಲಿ ಪ್ರಗತಿಯನ್ನು ಹೊಂದಲು ಅಧ್ಯಕ್ಷರಿಂದ ನೇಮಕವಾದ ವಿವಿಧ ಸಮಿತಿಗಳು ಹಾಗೂ ಕಾರ್ಯಕಾರಿ ಸಮಿತಿಯ ಸದಸ್ಯರು ಹೆಚ್ಚಿನ ಉತ್ಸಾಹದಿಂದ ಕಾರ್ಯಪ್ರವೃತ್ತರಾಗಲು ಕರೆ ನೀಡಿದರು. ಸಭೆಯ ಆರಂಭದಲ್ಲಿ ಇತ್ತೀಚೆಗೆ ನಮ್ಮನ್ನಗಲಿದ ಪ್ರಸಿದ್ಧ ಸುಗಮ ಸಂಗೀತಗಾರರಾದ ಶ್ರೀ ಶಿವಮೊಗ್ಗ ಸುಬ್ಬಣ್ಣನವರಿಗೆ ಶ್ರದ್ಧಾಂಜಲಿಯನ್ನು ಅರ್ಪಿಸಲಾಯಿತು. ಮಹಾಸಭೆಯ ಕಾರ್ಯದರ್ಶಿ ಗಳಾದ ಶ್ರೀಧರಮೂರ್ತಿಯವರು ಶಿರಸಿಯಲ್ಲಿ ನಡೆದ ಕಾರ್ಯಕಾರಿಣಿ ಸಭೆಯ ನಡಾವಳಿಗಳನ್ನು ಓದಿ ಅನುಮೋದನೆ ಪಡೆದರು.

ನಂತರ ಸಭೆಯಲ್ಲಿ ಸಂಘಟನಾ ಕಾರ್ಯದರ್ಶಿಗಳು ಪದಾಧಿಕಾರಿಗಳು ವಿವಿಧ ಸಮಿತಿಗಳ ಸಂಚಾಲಕರು ಮಂಡಿಸಿದ ವರದಿಗಳಲ್ಲಿ ಬಿಂಬಿತವಾದ ಪ್ರಮುಖ ಅಂಶಗಳು ಇಂತಿವೆ.

- ಜನವರಿಯಿಂದ ಇಲ್ಲಿಯವರೆಗೆ ನೂತನವಾಗಿ 12,000 ಸದಸ್ಯರ ನೊಂದಾವಣೆ.
- ನವೀಕೃತ ಗಾಯತ್ರಿ ಭವನಕ್ಕೆ ಹೊಸ ಬಣ್ಣ ಹಾಗೂ ಹೆಚ್ಚಿನ ಮೂಲ ಸೌಕರ್ಯಗಳಿಂದ ಸದಸ್ಯರಿಗೆ ಮಂಗಲಕಾರ್ಯಗಳಿಗೆ ರಿಯಾಯಿತಿ ದರದಲ್ಲಿ ಬಾಡಿಗೆ ಲಭ್ಯ.
- ಪರಸ್ಥಳದಿಂದ ನಗರಕ್ಕೆ ಬಂದ ಸದಸ್ಯರ ಅನುಕೂಲಕ್ಕೆ ಸುಸಜ್ಜಿತ ವಿಶ್ರಾಂತಿ ಕೊಠಡಿಗಳು.
- ನಾಲ್ಕನೆ ಮಹಡಿಯಲ್ಲಿ ಸುಂದರವಾದ ಮಿನಿ ಸಭಾಂಗಣ.
- ಮಹಾಸಭೆಯ ಧ್ಯೇಯೋದ್ದೇಶ ಅನುಷ್ಠಾನಕ್ಕಾಗಿ 18 ಸಮಿತಿಗಳ ರಚನೆ.
- ಬೈಲಾ ತಿದ್ದುಪಡಿ ಕಾರ್ಯ ಅಂತಿಮ ಹಂತಕ್ಕೆ ಬಂದಿದ್ದು ಡಿಸೆಂಬರ್ ಹೊತ್ತಿಗೆ ಸಿದ್ಧ.
- ಆರೋಗ್ಯ ನೆರವು ಸಮಿತಿಯಿಂದ ಮಹಾಸಭೆಯ ಸದಸ್ಯರಿಗೆ ರಿಯಾಯಿತಿ ದರದಲ್ಲಿ ರೋಗಪರೀಕ್ಷೆ, ಚಿಕಿತ್ಸೆ ಹಾಗೂ ಶಸ್ತ್ರಚಿಕಿತ್ಸೆಗಾಗಿ ನಗರದ 10 ಕ್ಕೂ ಹೆಚ್ಚು ಪ್ರಸಿದ್ಧ ಆಸ್ಪತ್ರೆಗಳ ಜೊತೆ ಒಪ್ಪಂದ.
- ವಿದ್ಯಾನಿಧಿ ಹಾಗೂ ವಿದ್ಯಾರ್ಥಿ ಪ್ರೋತ್ಸಾಹಧನ ಸಮಿತಿಯಿಂದ 3 ಕೋಟಿ ಮೂಲಧನ ಸಂಗ್ರಹಿಸುವ ಗುರಿ. ಅರ್ಜಿಸಲ್ಲಿಸಿದ ಪ್ರತಿಯೊಬ್ಬರಿಗೂ 2000 ದಿಂದ 50,000 ರೂ.ಗಳವರೆಗೆ ವಿದ್ಯಾರ್ಥಿವೇತನ ನೀಡುವ ಬೃಹತ್ ಯೋಜನೆ.

  98% ಕ್ಕೂ ಹೆಚ್ಚು ಅಂಕಗಳಿಸಿದ 700 ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಪ್ರೋತ್ಸಾಹ ಧನ ನೀಡಲು ಅಕ್ಟೋಬರ್ ತಿಂಗಳಲ್ಲಿ ಪ್ರತಿಭಾ ಪುರಸ್ಕಾರ ಸಮಾರಂಭಕ್ಕೆ ಸಿದ್ಧತೆ.
- ಕಲೆ ಮತ್ತು ಸಾಂಸ್ಕೃತಿಕ ವೇದಿಕೆಯಿಂದ ಆಸಕ್ತ ಮಕ್ಕಳಿಗೆ ಸಂಗೀತ ನೃತ್ಯದಲ್ಲಿ ವಿಶೇಷ ತರಬೇತಿ ವ್ಯವಸ್ಥೆ ಹಾಗೂ ಹಬ್ಬ ಹರಿದಿನ ವಿಶೇಷ ದಿನಗಳಲ್ಲಿ ಕಾರ್ಯಕ್ರಮ ಆಯೋಜಿಸುವ ಮೂಲಕ ಉದಯೋನ್ಮುಖ ಕಲಾವಿದರಿಗೆ ವೇದಿಕೆ ಒದಗಿಸುವ ಯೋಜನೆ .
- ಕೈಗಾರಿಕ ಮತ್ತು ವಾಣಿಜ್ಯ ಸಮಿತಿ: ಸ್ವಂತ ಉದ್ಯೋಗ ಆರಂಭಿಸಲು ಸೂಕ್ತ ತರಬೇತಿ ನೀಡಲು ಸರ್ಕಾರಿ ಸಂಸ್ಥೆಗಳ ಜೊತೆ ಸಂಪರ್ಕ. ನವ ಉದ್ಯಮೆದಾರರಿಗೆ ಹಾಗೂ ಉತ್ಪಾದಕರಿಗೆ ಸೂಕ್ತ ಮಾರುಕಟ್ಟೆ ಕಲ್ಪಿಸಲು ರಾಜ್ಯಾದ್ಯಂತ ವಿಪ್ರ ಉದ್ಯಮಗಳ ಸಂಪರ್ಕಜಾಲ ನಿರ್ಮಾಣ.ಉದ್ಯಮ ಆರಂಭಕ್ಕೆ ಸೂಕ್ತ ಬಂಡವಾಳಕ್ಕೆ ಬ್ಯಾಂಕ್ ಹಾಗೂ ಸರ್ಕಾರಿ ಸಂಸ್ಥೆಗಳಿಂದ ನೆರವು ಪಡೆಯಲು ಮಾರ್ಗದರ್ಶನ. ಯೋಜನಾ ವರದಿ ತಯಾರಿಗೆ ನೆರವು.
- ಕಾನೂನು ನೆರವು ವೇದಿಕೆ : ಯುವ ವಕೀಲರಿಗೆ ತರಬೇತಿ ಮತ್ತು ಹಿರಿಯ ವಕೀಲರೊಂದಿಗೆ ಸಂಪರ್ಕ ವ್ಯವಸ್ಥೆ. ಜಿಲ್ಲಾ ತಾಲ್ಲೂಕು



ಮಟ್ಟದ ವಕೀಲರ ನೆರವಿನಿಂದ ರಾಜ್ಯಮಟ್ಟದ ವಿಪ್ರ ವಕೀಲರ ಸಮ್ಮೇಳನದ ಯೋಜನೆ. ಬಡವರು, ಹಿರಿಯ ನಾಗರೀಕರಿಗೆ ಉಚಿತ ಕಾನೂನಿನ ನೆರವು. ದಾಂಪತ್ಯ ಸಮಸ್ಯೆಗಳಿಗೆ ಉಚಿತ ಆಪ್ತ ಸಮಾಲೋಚನೆಗೆ ವ್ಯವಸ್ಥೆ.

- **ಮಾಧ್ಯಮ ಸಮಿತಿ :** ರಾಜ್ಯಾದ್ಯಂತ ವಿಪ್ರ ಸಂಘಟನೆಗಳ, ಸಂಸ್ಥೆಗಳ ಕಾರ್ಯಚಟುವಟಿಕೆಗಳ ಮಾಹಿತಿ ಪ್ರಸಾರಕ್ಕಾಗಿ 'ವಿಪ್ರ ವಾಹಿನಿ' ಯೂಟ್ಯೂಬ್ ಚಾನಲ್ ಅಕ್ಟೋಬರ್‌ನಲ್ಲಿ ಚಾಲನೆಗೆ ವ್ಯವಸ್ಥೆ.
- ಗ್ರಾಮಾಂತರ ಪ್ರದೇಶದ ಯುವಕರ ವಿವಾಹ ಸಮಸ್ಯೆ ಪರಿಹಾರಕ್ಕೆ ಉತ್ತರ ಭಾರತದ ವಧುಗಳನ್ನು ಸಂಪರ್ಕಿಸಲು ಯಲ್ಲಾಪುರದ ಶ್ರೀ ನಾರಾಯಣ ಭಟ್ಟರೊಂದಿಗೆ ಮಾಹಿತಿ ವಿನಿಮಯಕ್ಕೆ ನಿರ್ಧಾರ. ಶೀಘ್ರದಲ್ಲಿಯೇ ಮಹಾಸಭೆಯ ವಧೂ-ವರರ ಮಾಹಿತಿ ಕೇಂದ್ರದ ವಿವರವನ್ನು ಡಿಜಿಟಲಿ ಕರಣಕ್ಕೆ ವ್ಯವಸ್ಥೆ.
- ಬ್ರಾಹ್ಮಣರ ಆಡಳಿತದಲ್ಲಿರುವ ವಿದ್ಯಾಸಂಸ್ಥೆಗಳಲ್ಲಿ ಬಡ ಪ್ರತಿಭಾವಂತ ಮಕ್ಕಳಿಗೆ ರಿಯಾಯಿತಿ ಶುಲ್ಕದಲ್ಲಿ ಶಿಕ್ಷಣ ಸೌಲಭ್ಯಕ್ಕೆ ವ್ಯವಸ್ಥೆ.
- ರಾಜ್ಯ ಮಹಿಳಾ ವಿಭಾಗದಿಂದ ಮಹಿಳೆಯರಿಗೆ ಕೌಶಲ ಅಭಿವೃದ್ಧಿಗೆ ಸೂಕ್ತ ತರಬೇತಿ ಕಾರ್ಯಕ್ರಮಗಳು. ಜಿಲ್ಲಾವಾರು ಮಹಿಳಾ ಘಟಕಗಳ ಸ್ಥಾಪನೆ. ರಾಜ್ಯದ್ಯಂತ ವಿಪ್ರ ಮಹಿಳಾ ಸಂಘಟನೆಗೆ ಹಾಗೂ ಮುಂದಿನ 2023 ಫೆಬ್ರವರಿ ತಿಂಗಳಲ್ಲಿ ರಾಜ್ಯ ಮಹಿಳಾ ಸಮ್ಮೇಳನಕ್ಕೆ ಸಿದ್ಧತೆ. ಸ್ವಯಂ ಉದ್ಯೋಗ ಆರಂಭಿಸಲು ಮಹಿಳೆಯರಿಗೆ ಬಂಡವಾಳ ಹಾಗೂ ತಾಂತ್ರಿಕ ಮಾಹಿತಿಗೆ ಮಾರ್ಗದರ್ಶನ.
- 25 ಅಂಗವಿಕಲರು ಹಾಗೂ ಅಶಕ್ತ ವೃದ್ಧರಿಗೆ ಪ್ರತಿ ತಿಂಗಳು 500ರೂ. ಗಳ ಮಾಶಾಸನ ನೀಡಲು ಸೆಂಪ್ಟಂಬರ್ 2022 ತಿಂಗಳಿಂದ ಆರಂಭ.

  ತಿಂಗಳಿಗೆ 500/= ರೂ.ಗಳಂತೆ ವರ್ಷಕ್ಕೆ 6,000/= ರೂ. ಗಳ ದೇಣಿಗೆ ನೀಡಿ, ಈ ಯೋಜನೆಗೆ ಪ್ರಾಯೋಜಕರಾಗಲು ಮನವಿ.
- ವಿಪ್ರನುಡಿ ಕನ್ನಡ ಹಾಗೂ ಆಂಗ್ಲ ಆವೃತ್ತಿಗೆ ಕ್ರಮವಾಗಿ 500/= ಹಾಗೂ 1,000/= ರೂ. ನೀಡಿ ಚಂದಾದಾರರಾಗಲು ಸೂಚನೆ. ಪದಾಧಿಕಾರಿಗಳು ಹಾಗೂ ಸದಸ್ಯರು ವಿಪ್ರನುಡಿಗೆ ಜಾಹಿರಾತು ಸಂಗ್ರಹಕ್ಕೆ ವಿನಂತಿ.
- ರಾಜ್ಯ ಯುವ ಘಟಕದಿಂದ ಜಿಲ್ಲಾವಾರು ಘಟಕಗಳಿಗೆ ಪದಾಧಿಕಾರಿಗಳ ನೇಮಕಕ್ಕೆ ಚಾಲನೆ. ಇದೇ ಅಕ್ಟೋಬರ್ 1ನೇ ತಾರಿಖಿನಂದು 72 ಪದಾಧಿಕಾರಿಗಳ ಪದಗ್ರಹಣ ಸಮಾರಂಭ, ಮುಂದಿನ ವರ್ಷ ರಾಜ್ಯ ಯುವ ಸಮ್ಮೇಳನಕ್ಕೆ ಸಿದ್ಧತೆ.

ಕೊನೆಯಲ್ಲಿ ಮಹಾಸಭೆಯ ಖಜಾಂಚಿ ವೆಂಕಟೇಶ್‌ನಾಯಕ್ ರವರು ಮಾತನಾಡಿ ಅಧ್ಯಕ್ಷ ಶ್ರೀ ಅಶೋಕ ಹಾರನಹಳ್ಳಿಯವರು ಹಾಗೂ ಎಲ್ಲಾ ಪದಾಧಿಕಾರಿಗಳ ಸಹಕಾರದಿಂದ ಮಹಾಸಭೆಗೆ ಸಾಕಷ್ಟು ದೇಣಿಗೆ ಹರಿದು ಬರುತ್ತಿದ್ದು ಆರ್ಥಿಕ ಪರಿಸ್ಥಿತಿಯು ತೃಪ್ತಿದಾಯಕವಾಗಿದೆ ಎಂದು ತಿಳಿಸಿದರು. ಈ ಹಿಂದಿನ ಆಡಳಿತದ ಸಮಯದಲ್ಲಿ ಇದ್ದ ಎಲ್ಲ ಬಾಕಿ




ಇರುವ ಹಣವನ್ನು ಚುಕ್ತಾ ಮಾಡಲಾಗಿದ್ದು, ಗಮನಾರ್ಹ ಮೊತ್ತದ ಉಳಿತಾಯದ ಹಣವನ್ನು ರಾಷ್ಟ್ರೀಕೃತ ಬ್ಯಾಂಕುಗಳಲ್ಲಿ ಠೇವಣಿ ಇಡಲಾಗಿದೆ ಎಂದು ಸಭೆಗೆ ತಿಳಿಸಿದರು.

ಸಭೆಯ ಕೊನೆಯಲ್ಲಿ ಮಾತನಾಡಿದ ಅಧ್ಯಕ್ಷ ಶ್ರೀ ಅಶೋಕ ಹಾರನಹಳ್ಳಿಯವರು ಈಗ ಗಾಯತ್ರಿ ಭವನ ನವೀಕರಣ, ಸದಸ್ಯತ್ವ ನೋಂದಾವಣೆ, ವಿದ್ಯಾವಾಸಿನಿ ವಿಪ್ರ ಮಹಿಳಾ ವಸತಿ ನಿಲಯ ಮುಂತಾದವುಗಳಲ್ಲಿ ಪ್ರಗತಿಯನ್ನ ಪ್ರಸ್ತಾಪಿಸಿದರು. ಕೆಲವು ಸಮಿತಿಗಳು ಇನ್ನೂ ಹೆಚ್ಚಿನ ವೇಗದಲ್ಲಿ ಕೆಲಸ ಮಾಡಬೇಕಾಗಿದೆ ಎಂಬುದನ್ನು ಮನವರಿಕೆ ಮಾಡುತ್ತಾ ಸಂಪನ್ಮೂಲ ಕ್ರೋಢೀಕರಣಕ್ಕೆ ಹೆಚ್ಚಿನ ಆದ್ಯತೆ ನೀಡಬೇಕೆಂದು ಹೇಳಿದರು. ಮಹಾಸಭೆಗೆ ನಿಯಮಿತ ಆದಾಯಕ್ಕಾಗಿ ಸಪ್ತರ್ಷಿ ಟ್ರಸ್ಟ್‌ಗೆ ಸೇರಿದ ಜಾಗದಲ್ಲಿ ಭವ್ಯವಾದ ವಾಣಿಜ್ಯ ಸಂಕೀರ್ಣ, ಸಾಂಸ್ಕೃತಿಕ ಭವನ ನಿರ್ಮಾಣದ ಯೋಜನೆಯನ್ನು ಪ್ರಕಟಿಸಿದರು. ಮುಂದಿನ ಜನವರಿಯಲ್ಲಿ ಸಂಕ್ರಾಂತಿಯ ನಂತರ 25 ಕೋಟಿಗಳ ಬೃಹತ್ ಯೋಜನೆಗೆ ಅಡಿಗಲ್ಲು ಸಮಾರಂಭ ನಡೆಸವುದು ಖಂಡಿತವೆಂದು ಘೋಷಿಸಿದಾಗ ಸದಸ್ಯರು ಕರತಾಡನದ ಮೂಲಕ ಸ್ವಾಗತಿಸಿದರು. ಹಾಗೆಯೇ ಬ್ರಾಹ್ಮಣರು ಬ್ರಾಹ್ಮಣರಿಗಷ್ಟೇ ಸೀಮಿತವಾಗದೆ ಸಾಮಾನ್ಯ ರಲ್ಲಿ ಸಾಮಾನ್ಯರಿಗೆ ಸಹಾಯ ಮಾಡುವ ಲೋಕಕಲ್ಯಾಣದ ಕಾರ್ಯಕ್ರಮಗಳನ್ನು ಹಾಕಿಕೊಳ್ಳಬೇಕಾಗಿದೆ ಎಂದರು.

**ನಮ್ಮ ಸಮಾಜದ ಹಿರಿಯರು, ಬಡವ ಬಲ್ಲಿದನೆನ್ನದೆ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಭಾಗವಹಿಸಿ ತ್ಯಾಗ ಬಲಿದಾನವನ್ನು ಮಾಡಿದ್ದಾರೆ. ಅವರಿಗೆ ನಮ್ಮ ಗೌರವ ನಮನವನ್ನು ಸಲ್ಲಿಸಲು ಹಮ್ಮಿಕೊಂಡಿರುವ ವಿಧುರಾಶ್ವತ್ಥ ಸದ್ಭಾವನಾ ನಡೆ : ಬೃಹತ್ ಜಾತಾ ಕಾರ್ಯಕ್ರಮದಲ್ಲಿ ಎಲ್ಲರೂ ಭಾಗವಹಿಸಿ ಸಹಕರಿಸಬೇಕೆಂದು ವಿನಂತಿಸಿದರು.**

ಮುಂದಿನ ಕಾರ್ಯಕಾರಿಣಿ ಸಭೆಯು ಬೆಂಗಳೂರಿನ ಹೊರವಲಯ ದಲ್ಲಿ ನಡೆಸಲಾಗುವುದೆಂದು ಪ್ರಕಟಿಸಿದರು. ಶಾಂತಿ ಮಂತ್ರದೊಡನೆ ಸಭೆಯು ಮುಕ್ತಾಯವಾಯಿತು.

ಜಿಲ್ಲಾ ಬ್ರಾಹ್ಮಣ ಸಭಾದಿಂದ ವ್ಯವಸ್ಥೆಯಾದ ಹೋಳಿಗೆ ಊಟದ ಸತ್ಕಾರದಿಂದ ಸದಸ್ಯರೆಲ್ಲರೂ ಸಂತುಷ್ಟರಾದರು.

# ಸ್ವಾತಂತ್ರ್ಯ ಅಮೃತ ಮಹೋತ್ಸವ ಆಚರಣೆ

## ಮಹಾಸಭಾದಿಂದ ಬೈಕ್ ರ್‍ಯಾಲಿ





ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾದ ವತಿಯಿಂದ 75 ನೇ ಸ್ವಾತಂತ್ರ್ಯೋತ್ಸವದ ಅಂಗವಾಗಿ ದಿನಾಂಕ 13-08-2022 ರ ಶನಿವಾರ ಬೆಳಿಗ್ಗೆ 08-15 ಕ್ಕೆ ಬೃಹತ್ ಬೈಕ್ ಜಾಥಾ ನಡೆಯಿತು. ಶಂಕರಮಠದ ಬಳಿಯಿಂದ ರಾಮಕೃಷ್ಣ ಅಶ್ರಮ, ಗಾಂಧಿ ಬಜಾರ್, ಡಿ.ವಿ.ಜಿ. ರಸ್ತೆ, ಹನುಮಂತನಗರ, ಶ್ರೀನಿವಾಸನಗರ, ವಿದ್ಯಾಪೀಠ ಸರ್ಕಲ್, ಬನಶಂಕರಿ 1ನೇ ಹಂತದ ಮುಖಾಂತರ ಗಾಯತ್ರಿ ಭವನಕ್ಕೆ ಜಾಥಾವು ಯಶಸ್ವಿಯಾಗಿ ನಡೆದು, ದ್ವಿಚಕ್ರ ವಾಹನದಲ್ಲಿ ವಿಪ್ರ ಸಮುದಾಯದವರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿದ್ದರು, ಅಧ್ಯಕ್ಷರಾದ ಅಶೋಕ ಹಾರನಹಳ್ಳಿ, ಶಾಸಕರಾದ ರವಿಸುಬ್ರಹ್ಮಣ್ಯ, ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷರಾದ ಮಹೇಶ್ ಜೋಷಿ ಮಹಾಸಭಾದ ಹಲವು ಪದಾಧಿಕಾರಿಗಳು, ಕಾರ್ಯಕಾರಿಣಿ ಸದಸ್ಯರು ಸಕ್ರಿಯವಾಗಿ ಪಾಲ್ಗೊಂಡು ಕಾರ್ಯಕ್ರಮವನ್ನು ಯಶಸ್ವಿಯಾಗಿ ನಡೆಸಲಾಯಿತು.



**ಮಹಾಸಭೆಯ ಆವರಣೆದಲ್ಲಿ ಆಗಸ್ಟ್ 15ರಂದು ಅಧ್ಯಕ್ಷ ಶ್ರೀ ಅಶೋಕ ಹಾರನಹಳ್ಳಿಯವರ ನೇತ್ರತ್ವದಲ್ಲಿ ಧ್ವಜಾರೋಹನ ಕಾರ್ಯಕ್ರಮ ನೆರವೇರಿತು. ಈ ಸಂದರ್ಭದಲ್ಲಿ ಪದಾಧಿಕಾರಿಗಳಾದ ಶ್ರೀ ರಾಘವೇಂದ್ರ ಭಟ್, ರಾಜೇಂದ್ರ ಪ್ರಸಾದ್, ಡಾ॥ ಶುಭ ಮಂಗಳ, ಹಾಗೂ ನಾಗಲಕ್ಷ್ಮೀ ಕೆ. ರಾವ್ ಹಾಗೂ ಇನ್ನಿತರ ಕಾರ್ಯಕಾರಿಣಿ ಸದಸ್ಯರುಗಳು ಭಾಗವಹಿಸಿದ್ದರು.**

# ಹಾಸನ ಬ್ರಾಹ್ಮಣ ಸಂಘದಿಂದ ಉಚಿತ ಆರೋಗ್ಯ ಶಿಬಿರ ಹಾಗೂ ಅಧ್ಯಕ್ಷರಿಗೆ ಸನ್ಮಾನ



ದಿನಾಂಕ 07-08-2022 ರಂದು ಹಾಸನ ಜಿಲ್ಲಾ ಬ್ರಾಹ್ಮಣ ಸಭಾ ವತಿಯಿಂದ ಉಚಿತ ಆರೋಗ್ಯ ತಪಾಸಣಾ ಶಿಬಿರವನ್ನು ಹಾಸನ ನಗರದ ಶ್ರೀ ರಾಮಕೃಷ್ಣ ಶಾಲೆಯಲ್ಲಿ ಡಾ|ವಾಗೀಶ್ ಭಟ್ ಮತ್ತು ತಂಡದವರ ನೇತೃತ್ವದಲ್ಲಿ ಯಶಸ್ವಿಯಾಗಿ ನಡೆಸಲಾಯಿತು. ತಜ್ಞವೈದ್ಯರುಗಳು ಭಾಗವಹಿಸಿದ ಶಿಬಿರದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿದ ಶಿಬಿರಾರ್ಥಿಗಳಿಗೆ ಸೂಕ್ತ ಚಿಕಿತ್ಸೆ ಹಾಗೂ ಔಷಧಗಳನ್ನು ನೀಡಲಾಯಿತು.

**ಅದೇ ದಿನ ಮಹಾಸಭಾಧ್ಯಕ್ಷರಾದ ಶ್ರೀ ಅಶೋಕ ಹಾರನಹಳ್ಳಿ ಅವರಿಗೆ ಅಭಿನಂದನಾ ಸಮಾರಂಭ ಏರ್ಪಡಿಸಿ ಸನ್ಮಾನಿಸಲಾಯಿತು.** ಕಾರ್ಯಕ್ರಮದ ಅಧ್ಯಕ್ಷತೆಯನ್ನು ಹಾಸನ ಜಿಲ್ಲಾ ಬ್ರಾಹ್ಮಣ ಸಭಾದ ಅಧ್ಯಕ್ಷರಾದ ಶ್ರೀ ಹೆಚ್.ವಿ. ಶ್ರೀನಿವಾಸಮೂರ್ತಿ ಅವರು ವಹಿಸಿದ್ದರು.

ಈ ಸಂದರ್ಭದಲ್ಲಿ ಹಾಸನ ಶಂಕರ ಮಠದ ಧರ್ಮಾಧಿಕಾರಿ ಶ್ರೀಕಂಠಯ್ಯ ಅವರನ್ನು ಸನ್ಮಾನಿಸಲಾಯಿತು. ಕಾರ್ಯಕ್ರಮದಲ್ಲಿ ಹಾಸನ ಶಾಸಕ ಶ್ರೀ ಪ್ರೀತಂ ಜೆ ಗೌಡ, ಮಹಾಸಭಾದ ಉಪಾಧ್ಯಕ್ಷರಾದ ಶ್ರೀ ಸುರೇಶ್, ಸಂಘಟನಾ ಕಾರ್ಯದರ್ಶಿ ಡಾ.ರಾಘವೇಂದ್ರ ಭಟ್, ಜಂಟಿ ಕಾರ್ಯದರ್ಶಿ ಶ್ರೀ. ಕಾರ್ತಿಕ್ ಬಾಪಟ್, ವಲಯ ಉಪಾಧ್ಯಕ್ಷರಾದ ಶ್ರೀ ಟಿ.ಎಚ್.ಚಂದ್ರಶೇಖರ್ ಮತ್ತು ಕೇಂದ್ರ ಕಾರ್ಯಕಾರಿ ಸಮಿತಿ ಸದಸ್ಯರಾದ ಶ್ರೀ. ಗೋಪಾಲ್ ಎನ್.ಎಸ್, ನಿಖಿಲ್ ಭಾರದ್ವಾಜ್ ಉಪಸ್ಥಿತರಿದ್ದರು



### ಮಹಾಸಭೆ ಹಾಗೂ ಶಿವಮೊಗ್ಗ ಜಿಲ್ಲಾ ಬ್ರಾಹ್ಮಣ ಸಂಘಟನೆಗಳು ವಿಪ್ರಶ್ರೀ ಪ್ರಶಸ್ತಿ ಪ್ರದಾನ

# ಪಾಶ್ಚಿಮಾತ್ಯ ಸಂಸ್ಕೃತಿಯ ಗುಲಾಮಗಿರಿಯಿಂದ ಹೊರಬನ್ನಿ–ಅಶೋಕಹಾರನಹಳ್ಳಿ




ಶಿವಮೊಗ್ಗ: ಎಲ್ಲಾ ಸಂಸ್ಕೃತಿಯ ಮೇಲೆ ಪಾಶ್ಚಿಮಾತ್ಯ ಧರ್ಮದ ಪ್ರಭಾವವಿದೆ. ಇದರಿಂದ ಬ್ರಾಹ್ಮಣರು ಹೊರತಾಗಿಲ್ಲ. ಆದರೆ ಪಾಶ್ಚಾತ್ಯ ಸಂಸ್ಕೃತಿಯ ಹಿಡಿತದಿಂದ ನಮ್ಮ ಯುವಕರು ಹೊರಗೆ ಬರಬೇಕಿದೆ ಎಂದು ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾದ ರಾಜ್ಯಾಧ್ಯಕ್ಷ ಶ್ರೀ ಅಶೋಕ ಹಾರನಹಳ್ಳಿ ಕರೆ ನೀಡಿದರು.

ಶಿವಮೊಗ್ಗದ ಗಾಯತ್ರಿ ಮಾಂಗಲ್ಯ ಮಂದಿರದಲ್ಲಿ ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ, ಶಿವಮೊಗ್ಗ ಜಿಲ್ಲೆಯ ಎಲ್ಲ ಬ್ರಾಹ್ಮಣ ಸಂಘಟನೆಗಳಿಂದ ಹಮ್ಮಿಕೊಂಡಿದ್ದ ವಿಪ್ರಶ್ರೀ ಪ್ರಶಸ್ತಿ ಪ್ರದಾನ ಸಮಾರಂಭ ಉದ್ಘಾಟಿಸಿ ಮಾತನಾಡಿದರು.

ಇತರೆ ಸಂಘಟನೆಗಳಿಂದ ಹೋಲಿಸಿಕೊಂಡರೆ ಸಂಘಟನಾತ್ಮಕವಾಗಿ ನಮ್ಮ ವಿಪ್ರ ಸಂಘಟನೆ ಕುಂಠಿತವಾಗಿದೆ. ರಾಜಕೀಯ ಶಕ್ತಿಯಾಗಿ ಬ್ರಾಹ್ಮಣ ಮಹಾಸಭಾ ಹೊರಹೊಮ್ಮಿಲ್ಲ. ಬ್ರಾಹ್ಮಣರ ಸ್ವತಂತ್ರ ಮನೋಭಾವ ಹಾಗೂ ಸ್ವಾಭಿಮಾನವೇ ಇದಕ್ಕೆ ಕಾರಣವಾಗಿದೆ. ಸಾರ್ವಜನಿಕ ಹಿತಾಸಕ್ತಿ ಮತ್ತು ಸಾರ್ವಜನಿಕ ಅಭಿಪ್ರಾಯ ಒಟ್ಟಿಗೆ ಹೋಗುವುದಿಲ್ಲ. ನಮ್ಮ ಸಮಾಜದ ಪ್ರಜಾತಂತ್ರ ವ್ಯವಸ್ಥೆಯಲ್ಲಿ ಬಹುಮತದ ನಿರ್ಣಯವೇ ಅಂತಿಮವಾಗಿದೆ. ಹಾಗಾಗಿ, ಬ್ರಾಹ್ಮಣರಲ್ಲಿಯ ಸಮರ್ಥರಿಗೆ ಅವಕಾಶ ಇಲ್ಲದಂತಾಗಿದೆ ಎಂದು ಬೇಸರ ವ್ಯಕ್ತಪಡಿಸಿದರು.

ವೇದಿಕೆಯಲ್ಲಿ ಜಿಲ್ಲೆಯ ಸಾಧಕರಾದ ಪ್ರಾಚ್ಯವಸ್ತು ಶಾಸ್ತ್ರಜ್ಞರು, ಸಂಶೋಧಕರರಾದ ಡಾ। ಅ.ಸುಂದರ್, ಯೋಗಾಚಾರ್ಯ ಭ.ಮ. ಶ್ರೀಕಾಂತ, ಧಾರ್ಮಿಕ ಚಿಂತಕರು, ಗಣಪತಿ ದೇವಾಲಯದ ಪ್ರದಾನ ಅರ್ಚಕ ಅ.ಹ. ರಾಮಭಟ್ಟರು, ಆಯುರ್ವೇದ ವೈದ್ಯ ಡಾ. ಸುರೇಶ್ ಮತ್ತೂರು ಹಾಗೂ ಸೌಂದರ್ಯ ಲಹರಿ ಪ್ರಶಿಕ್ಷಕರಾದ ರಾಜಲಕ್ಷ್ಮೀ ಅವರಿಗೆ ವಿಪ್ರ ಪ್ರಶಸ್ತಿ ಪ್ರದಾನ ಮಾಡಿ ಗೌರವಿಸಲಾಯಿತು.

ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ಉಪಾಧ್ಯಕ್ಷ ನಟರಾಜ್ ಭಾಗವತ್ ಪ್ರಾಸ್ತಾವಿಕವಾಗಿ ಮಾತನಾಡಿದರು. ಸಂಘಟನೆಯ ಪ್ರಮುಖರಾದ ಸುರೇಶ್, ಎಂ.ಬಿ. ಭಾನುಪ್ರಕಾಶ್, ಎಸ್. ದತ್ತಾತ್ರಿ, ಛಾಯಾಪತಿ, ಪವಿತ್ರಾ ಉಪಸ್ಥಿತರಿದ್ದರು. ಎಂ.ಎಸ್. ಸೂರ್ಯನಾರಾಯಣ ಸ್ವಾಗತಿಸಿದರು.




## 'ಚಿಕ್ಕಪೇಟೆ ಬ್ರಾಹ್ಮಣ ಸಭಾದ' ಉದ್ಘಾಟನಾ ಕಾರ್ಯಕ್ರಮ



ಬೆಂಗಳೂರಿನ, ವಿ.ವಿ.ಪುರಂ ವಾರ್ಡನ ಆದಿರಾಮಯ್ಯ ಕಲ್ಯಾಣ ಮಂಟಪದಲ್ಲಿ "ಚಿಕ್ಕಪೇಟೆ ಬ್ರಾಹ್ಮಣ ಸಭಾದ" ಉದ್ಘಾಟನಾ ಕಾರ್ಯಕ್ರಮ ನಡೆಯಿತು ಈ ಕಾರ್ಯಕ್ರಮದಲ್ಲಿ ಚಿಕ್ಕಪೇಟೆ ಶಾಸಕರಾದ ಶ್ರೀ ಉದಯ್ ಗರುಡಾಚಾರ್ ನಿವೃತ್ತ ನ್ಯಾಯಮೂರ್ತಿ ಶ್ರೀ ಎನ್ ಕುಮಾರ್, ವಿಧಾನ ಪರಿಷತ್ ಸದಸ್ಯರಾದ ಶ್ರೀ ಯು.ಬಿ.ವೆಂಕಟೇಶ್, ಎ.ಕೆ.ಬಿ.ಎಂ.ಎಸ್ ರಾಜ್ಯ ಜಂಟಿ ಕಾರ್ಯದರ್ಶಿಗಳಾದ ಶ್ರೀ ಕಾರ್ತಿಕ್ ಬಾಪಟ್, ಬ್ರಾಹ್ಮಣ ಅಭಿವೃದ್ಧಿ ನಿಗಮದ ಅಧ್ಯಕ್ಷರಾದ ಶ್ರೀ ಸಚ್ಚಿದಾನಂದ ಮೂರ್ತಿ, ವಿಶ್ವವಿಪ್ರ ಪರಿಷತ್ ಅಧ್ಯಕ್ಷರಾದ ಶ್ರೀ ರಘುನಾಥ್, ಉತ್ತರಾದಿ ಮಠದ ಮುಖ್ಯಸ್ಥರಾದ ಶ್ರೀ ಸತ್ಯಧನ್ಯಾಚಾರ್ಯ ಕಟ್ಟಿ, ಆರ್ ಎಸ್ ಎಸ್ ಪ್ರಮುಖರಾದ ಶ್ರೀ ವಿ ಮಂಜುನಾಥ್, ಗರುಡ ಫೌಂಡೇಶನ್ ಮುಖ್ಯಸ್ಥೆ ಶ್ರೀಮತಿ ಮೇದಿನಿ ಉದಯ್ ಗರುಡಾಚಾರ್, ಚಿಕ್ಕಪೇಟೆ ಬ್ರಾಹ್ಮಣ ಸಭಾದ ಪದಾಧಿಕಾರಿಗಳಾದ ಶ್ರೀ ಎಸ್ ವೆಂಕಟೇಶ್, ಶ್ರೀ ವಿಶ್ವೇಶ್ವರ ಭಟ್, ಶ್ರೀ ರಘುನಾಥ್ ಶರ್ಮ, ಶ್ರೀ ಎಚ್.ಎಸ್ ಶ್ರೀಧರ್, ಶ್ರೀಮತಿ ಅನುಪಮಾ ಶ್ರೀಧರ್, ಶ್ರೀ ಭಾರ್ಗವ್ ರವಿಚಂದ್ರ, ಶ್ರೀಮತಿ ಗೀತ ಹಾಗೂ ಮತ್ತಿತರ ಗಣ್ಯರು ಉಪಸ್ಥಿತರಿದ್ದರು

# ಮಹಿಳಾ ವಿಭಾಗದಿಂದ ವೈಶಿಷ್ಟ್ಯಪೂರ್ಣ ವರಮಹಾಲಕ್ಷ್ಮಿ ಕಾರ್ಯಕ್ರಮ






ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾದ ರಾಜ್ಯ ಮಹಿಳಾ ವಿಭಾಗದ ವತಿಯಿಂದ ವರಮಹಾಲಕ್ಷ್ಮಿ ಹಬ್ಬದ ಪ್ರಯುಕ್ತ ಲಲಿತಾ ಸಹಸ್ರನಾಮ ಪಾರಾಯಣ, ಅರತಿ ತಟ್ಟೆ ಸ್ಪರ್ಧೆ ಹಾಗೂ ವೀಣಾವಾದನ ಕಾರ್ಯಕ್ರಮವು ಅತ್ಯಂತ ಯಶಸ್ವಿಯಾಗಿ ಹೆಚ್ಚು ಮಹಿಳೆಯರ ಭಾಗವಹಿಸುವಿಕೆಯಿಂದ ನಡೆಯಿತು, ಮಹಾಸಭಾ ಅಧ್ಯಕ್ಷರಾದ ಅಶೋಕ ಹಾರನಹಳ್ಳಿ ದಂಪತಿಗಳು ವರಮಹಾಲಕ್ಷ್ಮೀ ಪೂಜೆ ನೆರವೇರಿಸಿ ಸುಮಂಗಲೀಯರಿಗೆ ಬಾಗಿನ ನೀಡಿದರು. ಕೃಷ್ಣ ಫೌಂಡೇಶನ್ ತಂಡದವರಿಂದ ಅಷ್ಟಲಕ್ಷ್ಮೀಸ್ತೋತ್ರವ್ ಭರತನಾಟ್ಯವು ತುಂಬಾ ಸೊಗಸಾಗಿತ್ತು, ಇದರಲ್ಲಿ ಹಾಸ್ಟೆಲ್‌ನ ವಿದ್ಯಾರ್ಥಿನಿಯರು ಸಹ ಪಾಲ್ಗೊಂಡಿದ್ದರು. ಜ್ಯೋತಿ ಚೇತನ್ ಮತ್ತು ದೀಪ್ತಿ ಎನ್.ಪ್ರಸಾದ್ ಹಾಗೂ ತಂಡದವರು ವೀಣಾವಾದನ ನಡೆಸಿಕೊಟ್ಟರು, ಕಾರ್ಯಕ್ರಮ ದಲ್ಲಿ ಮೇದಿನಿ ಉದಯ್ ಗರುಡಾಚಾರ್, ಮಂಜುಳ ರವಿಸುಬ್ರಮಣ್ಯ, ಮಹಿಳಾ ವಿಭಾಗದ ರಾಜ್ಯ ಸಂಚಾಲಕರಾದ ಡಾ। ಶುಭಮಂಗಳ ಸುನೀಲ್, ಮಹಾಸಭಾದ ಪದಾಧಿಕಾರಿಗಳು ಹಾಗೂ ಮಹಿಳಾ ವಿಭಾಗದ ಸದಸ್ಯರು ಭಾಗವಹಿಸಿದ್ದರು, ಕಾರ್ಯಕ್ರಮ ಬಂದಂತಹ ಮಹಿಳೆಯರಿಗೆ ಬಾಗಿನವನ್ನು ಅಧ್ಯಕ್ಷರ ಕುಟುಂಬದವರು ನೀಡಿದರು,

## ವಸತಿ ನಿಲಯದ ವಿದ್ಯಾರ್ಥಿನಿಯರಿಗೆ ಮಹಾಸಭೆಯಿಂದ ಗೌರಿ ಬಾಗಿನ



ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ನಡೆಸುತ್ತಿರುವ ವಿದ್ಯಾವಾಸಿನಿ ವಿಪ್ರ ವಸತಿ ನಿಲಯದಲ್ಲಿ ಗೌರಿ ಹಬ್ಬದ ಹಿನ್ನೆಲೆಯಲ್ಲಿ ವಿದ್ಯಾರ್ಥಿನಿಯರಿಗೆ ಬಾಗಿನವನ್ನು ಕೊಡಲಾಯಿತು. ಮಹಿಳಾ ವಿಭಾಗದ ಸಂಚಾಲಕಿಯಾದ ಶ್ರೀಮತಿ ಶುಭಮಂಗಳ, ಶ್ರೀ ಕೃಷ್ಣಮೂರ್ತಿ ಸುಬ್ಬರಾವ್, ಶ್ರೀಮತಿ ಸಮುದ್ಯತ ಮತ್ತು ಶ್ರೀಮತಿ ವೀಣಾ ರಾಜೇಶ್ ಮತ್ತಿತರು ನಿಲಯದ ವಿದ್ಯಾರ್ಥಿನಿಯರಿಗೆ ಬಾಗಿನಗಳನ್ನು ನೀಡಿದರು.

## ಶ್ರೀರಾಮಚಂದ್ರಪುರ ಮಠದ ಶ್ರೀಗಳಿಗೆ ಪಾದಪೂಜೆ




ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾದ ಅಧ್ಯಕ್ಷರಾದ ಶ್ರೀ ಅಶೋಕ ಹಾರನಹಳ್ಳಿ ದಂಪತಿಗಳು ಶ್ರೀರಾಮಚಂದ್ರಪುರ ಮಠದ ಶ್ರೀ ರಾಘವೇಶ್ವರ ಸ್ವಾಮಿಗಳ ಗೋಕರ್ಣದ ಅಶೋಕೆಯ ಗುರುಕುಲ_ಚಾತುರ್ಮಾಸ್ಯದ ಸುಸಂದರ್ಭದಲ್ಲಿ ಪಾದಪೂಜೆಯನ್ನು ನೆರವೇರಿಸಿ, ಶ್ರೀ ಗಳಿಂದ ಆಶೀರ್ವಾದ ಪಡೆದರು.

# ರಾಯಚೂರಿನಲ್ಲಿ ಅದ್ದೂರಿ ಪ್ರತಿಭಾ ಪುರಸ್ಕಾರ






ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ರಾಯಚೂರು ಜಿಲ್ಲಾ ಸಮಿತಿ ವತಿಯಿಂದ ಪ್ರತಿಭಾ ಪುರಸ್ಕಾರ ಹಾಗೂ ವಿಪ್ರಶ್ರೀ ಪ್ರಧಾನ ಕಾರ್ಯಕ್ರಮ ರಾಯಚೂರಿನಲ್ಲಿ ಸಂಭ್ರಮದಿಂದ ಜರುಗಿತು.

ಬ್ರಾಹ್ಮಣ ಸಮಾಜದ ಅಭಿವೃದ್ಧಿಗೆ ತ್ರಿಮತಸ್ಥ ಬ್ರಾಹ್ಮಣ ಸಮುದಾಯದ ಒಗ್ಗಟ್ಟು ಅವಶ್ಯಕವಾಗಿದೆ ಎಂದು ಸಮಾರಂಭದ ಸಾನ್ನಿಧ್ಯ ವಹಿಸಿ, ಆಶೀರ್ವಚನ ನೀಡುತ್ತ ಸೋಸಲೆ ವ್ಯಾಸರಾಜ ಮಠದ ಶ್ರೀ ವಿದ್ಯಾವಿಜಯತೀರ್ಥ ಶ್ರೀಪಾದಂಗಳವರು ತಿಳಿಸಿದರು.

ಬ್ರಾಹ್ಮಣರು ಹೆದರಬೇಕಿಲ್ಲ. ತ್ರಿಮತಸ್ಥರು ಒಗ್ಗಟ್ಟಾಗಿದ್ದರೆ ಯಾರೂ ನಮ್ಮನ್ನು ಅಲುಗಾಡಿಸಲು ಸಾಧ್ಯವಿಲ್ಲ. ನಾವು ಯಾರ ತಂಟೆಗೂ ಹೋಗುವವರಲ್ಲ. ಎಲ್ಲ ಜನರಿಗೂ ಹಿತವನ್ನೇ ಬಯಸುತ್ತೇವೆ ಎಂದು ತಿಳಿಸಿದರು.

ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾದ ಅಧ್ಯಕ್ಷರಾದ ಶ್ರೀ ಅಶೋಕ ಹಾರನಹಳ್ಳಿ ಸಮಾರಂಭವನ್ನು ಉದ್ಘಾಟಿಸಿ ಮಾತನಾಡುತ್ತಾ ಬ್ರಾಹ್ಮಣರು ಸರ್ಕಾರದಿಂದ ಸೌಲಭ್ಯಗಳನ್ನು ಪಡೆದುಕೊಳ್ಳಲು ಶಕ್ತಿಶಾಲಿಯಾಗಿ ಸಂಘಟನೆಗೊಳ್ಳುವುದು ಅತ್ಯಂತ ಅಗತ್ಯವಾಗಿದೆ ಎಂದು ಹೇಳಿದರು.

ಬ್ರಾಹ್ಮಣರು ಎಲ್ಲರಿಗೂ ಒಳಿತನ್ನು ಬಯಸುವವರಾಗಿದ್ದಾರೆ. ನಮ್ಮ ಮಾತು ಕೇಳುವವರು, ಕಷ್ಟಗಳನ್ನು ಕೇಳುವವರು ಯಾರೂ ಇಲ್ಲ. ಬ್ರಾಹ್ಮಣರಿಗೆ ಏನಾದರೂ ನೀಡಿದರೆ ಎಲ್ಲರೂ ತಪ್ಪು ತಿಳಿಯುತ್ತಾರೆ ಎಂಬ ಭಾವನೆ ಸರ್ಕಾರದಲ್ಲಿದೆ. ಸರ್ಕಾರದಲ್ಲಿ ನಮ್ಮ ಬೇಡಿಕೆಗಳನ್ನು ಕೇಳುವುದಕ್ಕಾಗಿ ಬ್ರಾಹ್ಮಣರು ಸಂಘಟನೆಗೊಳ್ಳುವುದು ಅವಶ್ಯಕತೆ ಇದೆ ಎಂದ ಪ್ರತಿಪಾದಿಸಿದರು.

ಎಲ್ಲಾ ಸಮುದಾಯಗಳಲ್ಲೂ ಆರ್ಥಿಕವಾಗಿ ದುರ್ಬಲವಾಗಿರುವವರಿದ್ದಾರೆ. ಅವರ ನೆರವಿಗೆ ಸರ್ಕಾರಗಳು ಬರಬೇಕು. ಬ್ರಾಹ್ಮಣ ಸಮಾಜಕ್ಕೊಂದೇ ನೆರವು ನೀಡಬೇಕು ಎಂದು ನಾವು ಕೇಳುವುದಿಲ್ಲ ಎಂದರು. ಬ್ರಾಹ್ಮಣರು ಮೀಸಲಾತಿ ವಿರೋಧಿಗಳಲ್ಲ. ಅವರು ಮೀಸಲಾತಿಯನ್ನೂ ಕೇಳುವುದಿಲ್ಲ. ಆರ್ಥಿಕವಾಗಿ ದುರ್ಬಲರಾದ ಮೇಲ್ವರ್ಗದವರಿಗೆ ಕೇಂದ್ರ ಸರ್ಕಾರ ಶೇ.10ರಷ್ಟು ಮೀಸಲಾತಿ ಘೋಷಿಸಿ ಎರಡು ವರ್ಷಗಳು ಕಳೆದಿವೆ ಆದರೆ ಇಲ್ಲಿಯವರೆಗೆ ಶಿಕ್ಷಣ ಕ್ಷೇತ್ರದಲ್ಲಿ ಮೀಸಲಾತಿ ಜಾರಿಗೆ ಬಂದಿಲ್ಲ. ಇದನ್ನು ಶೀಘ್ರ ಕೊಡಿಸಲು ಜನಪ್ರತಿನಿಧಿಗಳು ಪ್ರಯತ್ನಿಸಬೇಕು ಎಂದ ಹೇಳಿದರು. ಇಂದು ಸಮಾಜದ ವ್ಯವಸ್ಥೆ ಕಲುಷಿತಗೊಂಡಿದೆ. ಜನರು ಬೇಸರಗೊಂಡಿರುವುದು ಕಂಡುಬರುತ್ತಿದೆ.

ದೇಶಕ್ಕಾಗಿ ವಿಪ್ರರು ತ್ಯಾಗಮಾಡಿದ್ದಾರೆ. ದೇಶ 75ನೇ ಸ್ವಾತಂತ್ರ್ಯದ ಅಮೃತ ಮಹೋತ್ಸವವನ್ನು ಆಚರಣೆ ಮಾಡುತ್ತಿದ್ದೇವೆ. ದೇಶದ ಸ್ವಾತಂತ್ರ್ಯ ಹೋರಾಟದಲ್ಲಿ ಅನೇಕ ವಿಪ್ರರು ಭಾಗಿಯಾಗಿದ್ದಾರೆ. ಎಷ್ಟೋ ಜನರು ಪ್ರಾಣ ತ್ಯಾಗಮಾಡಿದ್ದಾರೆ. ಅವರ ತ್ಯಾಗದ ಮೇಲೆ ಸ್ವಾತಂತ್ರ್ಯ ನಿಂತಿದೆ ಎಂಬುದನ್ನು ನಾವು ಮರೆತಿದ್ದೇವೆ ಎಂದು ವಿಷಾದಿಸಿದರು. ಅನೇಕ ವಿಪ್ರರು ಸ್ವಾತಂತ್ರ್ಯಕ್ಕಾಗಿ ತಮ್ಮ ಎಲ್ಲ ಆಸ್ತಿಯನ್ನೇ ಮಾರಾಟ ಮಾಡಿದ್ದಾರೆ. ಶೋಷಣೆಗೆ ಒಳಗಾದ ಸಮುದಾಯಗಳಿಗೆ ಮೀಸಲಾತಿ ಕಲ್ಪಿಸುವ ನಿಟ್ಟಿನಲ್ಲಿ ಹೋರಾಟ ಮಾಡಿದವರಲ್ಲಿ ವಿಪ್ರರು ಇದ್ದಾರೆ ಎಂದು ಹೇಳಿದರು.

ಕರ್ನಾಟಕದ ಜಲಿಯನ್ ವಾಲಾಬಾಗ್ ಎಂದೇ ಕರೆಯಲಾಗುವ ವಿಧುರಾಶ್ವತ್ಥ ದುರಂತ ಸ್ಥಳಕ್ಕೆ ಮಹಾಸಭಾದಿಂದ ಪಾದಯಾತ್ರೆ ಹಮ್ಮಿಕೊಳ್ಳಲಾಗಿದೆ. ಇದರಲ್ಲಿ ಭಾಗವಹಿಸುವಂತೆ ಅಶೋಕ ಹಾರನಹಳ್ಳಿಯವರು ಮನವಿ ಮಾಡಿದರು.

ಗ್ರಾಮೀಣ ಪ್ರದೇಶದಲ್ಲಿರುವ ಆರ್ಥಿಕವಾಗಿ ಹಿಂದುಳಿದ ಬ್ರಾಹ್ಮಣ



ವಿಪ್ರಶ್ರೀ ಪ್ರಶಸ್ತಿ ಪ್ರದಾನ

ಸಮುದಾಯದವರಿಗೆ ಪಿಂಚಣಿ ಸೇರಿದಂತೆ ಅನೇಕ ಯೋಜನೆಗಳನ್ನು ಮಹಾಸಭಾವು ರೂಪಿಸಿದೆ. ಜಿಲ್ಲೆಯಲ್ಲಿ ಸಮಾಜದ ಸಂಘಟನೆ ಉತ್ತಮವಾಗಿದೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

## ವಿಪ್ರಶ್ರೀ ಪ್ರದಾನ ಹಾಗೂ ಪ್ರತಿಭಾ ಪುರಸ್ಕಾರ :

ಅನೇಕ ಸಾಧಕರಿಗೆ ವಿಪ್ರಶ್ರೀ ಪ್ರಶಸ್ತಿ ನೀಡಿ, ಸನ್ಮಾನ ಮಾಡಲಾಯಿತು. ಎಸ್.ಎಸ್.ಎಲ್.ಸಿ. ಪಿ.ಯು.ಸಿ.ಯಲ್ಲಿ ಅತಿ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳಿಗೆ ಪ್ರತಿಭಾ ಪರಸ್ಕಾರ ನೀಡಲಾಯಿತು.

ಸಂಸದ ರಾಜ ಅಮರೇಶ್ವರ ನಾಯಕ, ಎನ್.ಎಸ್. ಭೋಸರಾಜು ಮಾಜಿ ಎಂ.ಎಲ್.ಸಿ. ಶಾಸಕರಾದ ಡಾ. ಶಿವರಾಜ ಪಾಟೀಲ್, ಬಸನಗೌಡ ದದ್ದಲ್, ಮಹಾಸಭೆಯ ರಾಜ್ಯ ಪರಿಷತ್ತಿನ ಹಿರಿಯ



ಸದಸ್ಯರ ನರಸಿಂಗರಾವ್ ದೇಶಪಾಂಡೆ, ಮಹಿಳಾ ಘಟಕದ ಪ್ರಧಾನ ಸಂಚಾಲಕರಾದ ಶುಭಮಂಗಳ ಸುನೀಲ್, ರಾಜ್ಯ ಉಪಾಧ್ಯಕ್ಷ ಆನಂದತೀರ್ಥ ಫಡ್ನೀಸ್, ರಾಜ್ಯ ಸಮಿತಿ ಸದಸ್ಯರಾದ ಅರವಿಂದ ಕುಲಕರ್ಣಿ, ಪ್ರಾಣೇಶ ಮುತಾಲಿಕ್, ರಾಘವೇಂದ್ರ ಚೂಡಾಮಣಿ, ಜಿಲ್ಲಾ ಪ್ರಧಾನ ಸಂಚಾಲಕ ಡಿ.ಕೆ. ಮುರಳೀಧರ, ಹಿರಿಯ ಮುಖಂಡ ಗಿರೀಶ್ ಕುಲಕರ್ಣಿ, ಮಹಿಳಾ ಘಟಕದ ಜಿಲ್ಲಾಧ್ಯಕ್ಷೆ ರೇಖಾ ಡಿ.ಕೆ., ನಗರ ಪ್ರಧಾನ



ಸಂಚಾಲಕ ವೇಣುಗೋಪಾಲ ಇನಾಂದಾರ, ಜಿಲ್ಲಾ ಹಿರಿಯ ಪರಿಷತ್ತಿನ ಸದಸ್ಯರಾದ ಶ್ಯಾಮರಾವ್ ಕುಲಕರ್ಣಿ ಹೇಮನೂರು, ರಾಘವೇಂದ್ರರಾವ್ ಕಲ್ಮಲಾ ವಕೀಲರು, ವಿವಿಧ ತಾಲೂಕು ಘಟಕಗಳ ಪ್ರಧಾನ ಸಂಚಾಲಕರಾದ ವೇ.ಮೂ.ಶ್ಯಾಮರಾವ್ ಗಾಣಧಾಳ, ಪ್ರಾಣೇಶ ಜೋಷಿ ಜಾವೂರು, ನರಸಿಂಹ ಕುಲಕರ್ಣಿ, ಗೋವಿಂದರಾವ್ ಕುಲಕರ್ಣಿ, ಹನುಮೇಶರಾವ್ ಕುಲಕರ್ಣಿ, ಸಹ ಸಂಚಾಲಕ ಪ್ರಹ್ಲಾದ ಕುಲಕರ್ಣಿ ಮತ್ತಿತರರು ಉಪಸ್ಥಿತರಿದ್ದರು. ಎ.ಸುಧೀರ್, ವಿಷ್ಣುತೀರ್ಥ ಸಿರವಾರ, ಪ್ರಸನ್ನ ಆಲಂಪಲ್ಲಿ, ಪ್ರಹ್ಲಾದರಾವ್ ಕಲ್ಮಲಾ ವಕೀಲರು, ಹನುಮೇಶ ಸರಾಫ್, ರಾಮರಾವ್ ಗಣೇಕಲ್, ಡಾ.ಶೀಲಾದಾಸ್, ಸುನೀತಾ ಕಕ್ಕೇರಿ ಇನ್ನಿತರರು ಭಾಗವಹಿಸಿದ್ದರು.

ಶ್ರೀ ಕೃಷ್ಣ ಸಂಗೀತ ವಿದ್ಯಾಲಯದ ವಿದ್ಯಾರ್ಥಿಗಳು ಪ್ರಾರ್ಥನೆ ಗೀತ ಹಾಡಿದರು. ಪಾಂಡುರಂಗ ಜೋಷಿ ಕುರ್ಡಿಕರ್ ಸ್ವಾಗತಿಸಿದರು. ರಾಜ್ಯ ಸಮಿತಿ ಸದಸ್ಯರಾದ ರಾಘವೇಂದ್ರ ಚೂಡಾಮಣಿ ಪ್ರಾಸ್ತಾವಿಕವಾಗಿ ಮಾತನಾಡಿದರು. ತಾರಾನಾಥ ಜೇಗರಕಲ್, ವೆಂಕಟೇಶ ನವಲಿ ಕಾರ್ಯಕ್ರಮ ನಿರೂಪಿಸಿದರು.






## ತೀರ್ಥಹಳ್ಳಿಯಲ್ಲಿ ಮಾನ್ಯ ಅಧ್ಯಕ್ಷರಿಗೆ ಸನ್ಮಾನ




ತೀರ್ಥಹಳ್ಳಿ ಬ್ರಾಹ್ಮಣ ಸಂಘದಲ್ಲಿ ಏರ್ಪಡಿಸಿದ್ದ ಅಭಿನಂದನಾ ಸಮಾರಂಭದಲ್ಲಿ ಗೃಹ ಸಚಿವರಾದ ಆರಗ ಜ್ಞಾನೇಂದ್ರ, ಕರ್ನಾಟಕ ಸೌಹಾರ್ದ ಸಂಯುಕ್ತ ಸಹಕಾರಿ ಸಂಘದ ಉಪಾಧ್ಯಕ್ಷರಾದ ಪ್ರಸನ್ನ ಕುಮಾರ್, ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭೆಯ ಉಪಾಧ್ಯಕ್ಷರಾದ ಶ್ರೀ ನಟರಾಜ ಭಾಗವತ್, ತೀರ್ಥಹಳ್ಳಿ ಬ್ರಾಹ್ಮಣ ಸಂಘದ ಅಧ್ಯಕ್ಷರಾದ ಶ್ರೀ ತುಂಬರಮನೆ ಚಂದ್ರಶೇಖರ್, ಶ್ರೀ ಗುಡ್ಡೆಕೊಪ್ಪ ನಾರಾಯಣರಾವ್ ಅವರು ಭಾಗವಹಿಸಿದ್ದರು. ಇದೇ ಸಂದರ್ಭದಲ್ಲಿ ಆರಗ ಜ್ಞಾನೇಂದ್ರ, AKBMS ಅಧ್ಯಕ್ಷರು, ನಟರಾಜ ಭಾಗವತ್ ಮತ್ತು ಪ್ರಸನ್ನಕುಮಾರ್ ಅವರನ್ನುಗೌರವಿಸಲಾಯಿತು.

# ಮಂತ್ರಾಲಯದಲ್ಲಿ ಮಧ್ಯಾರಾದನೆ ಮಹೋತ್ಸವ



ಶ್ರೀ ಗುರುರಾಯರಿಗೆ ತಿರುಪತಿಯ ಶ್ರೀ ವೆಂಕಟೇಶ ದೇವರ ಶೇಷವಸ್ತ್ರ ಸಮರ್ಪಣೆ ರಾಯಚೂರು, ಆಗಸ್ಟ್ 13– ಮಂತ್ರಾಲಯದಲ್ಲಿ ಶ್ರೀ ಗುರು ರಾಘವೇಂದ್ರ ಸ್ವಾಮಿಗಳ 351ನೇ ಮಧ್ಯಾರಾಧನೆ ಮಹೋತ್ಸವ ಸಹಸ್ರಾರು ಭಕ್ತಾದಿಗಳ ಮಧ್ಯೆ ವೈಭವಯುತವಾಗಿ ಜರುಗಿತು. ಮಧ್ಯಾರಾಧನೆ ಮಹೋತ್ಸವಕ್ಕೆ ತಿರುಪತಿಯ ಶ್ರೀ ವೆಂಕಟೇಶ್ವರ ದೇವಸ್ಥಾನದ ಅರ್ಚಕ ವೃಂದ ದವರು ರಾಯರಿಗೆ ತಂದ ಶೇಷವಸ್ತ್ರವನ್ನು ಶ್ರೀ ಮಠದ ಪೀಠಾಧಿಪತಿಗಳಾದ ಸುಬುಧೇಂದ್ರ ತೀರ್ಥ ಶ್ರೀಪಾದಂಗಳವರು ಸ್ವೀಕರಿಸಿದರು.

ಶೇಷವಸ್ತ್ರವನ್ನು ಹರಿವಾಣದಲ್ಲಿಟ್ಟು ತಲೆ ಮೇಲೆ ಹೊತ್ತು ಶ್ರೀಗಳು ಮೆರವಣಿಗೆ ಮೂಲಕ ರಾಯರಿಗೆ ಸಮರ್ಪಿಸಿದರು. ಈ



ಮೆರವಣಿಗೆಯಲ್ಲಿ ರಾಜ್ಯ ಗೃಹ ಸಚಿವ ಅರಗ ಜ್ಞಾನೇಂದ್ರ ಭಾಗವಹಿಸಿದ್ದರು. ಮಧ್ಯಾರಾದನೆ ಅಂಗವಾಗಿ ಬೆಳಿಗ್ಗೆಯಿಂದ ರಾಯರ ಮೂಲಬೃಂದಾವನಕ್ಕೆ ಪಂಚಾಮೃತ ಅಭಿಷೇಕ ಮತ್ತು ಮಠದ ಪ್ರಾಂಗಣದಲ್ಲಿ ರಥೋತ್ಸವ ಜರುಗಿತು. ಶ್ರೀ ಮನ್ಮೂಲರಾಮ ದೇವರ ಸಂಸ್ಥಾನ ಪೂಜೆ ನೆರವೇರಿತು.

ಮಂತ್ರಾಲಯಕ್ಕೆ ಸಹಸ್ರಾರು ಸಂಖ್ಯೆಯಲ್ಲಿ ಬಂದ ಭಕ್ತರು ಆರಾಧನಾ ಮಹೋತ್ಸವದಲ್ಲಿ ಪಾಲ್ಗೊಂಡು ಪುನೀತರಾದರು.

## ಹುಬ್ಬಳ್ಳಿಯಲ್ಲಿ ಸಂಘಟನಾ ಸಮಾಲೋಚನೆ



ಹುಬ್ಬಳ್ಳಿ ನಗರದ ಗೋಕುಲ್ ರಸ್ತೆ, ಶ್ರೀ ರಾಮ್ ಮಂದಿರ ಕೆಇಸಿ ಅಷ್ಟೋತ್ತರ ಮಂಡಳಿ ವತಿಯಿಂದ ಶ್ರೀ ಗುರು ರಾಘವೇಂದ್ರರ ಆರಾಧನೆ ಅದ್ದೂರಿಯಿಂದ ನಡೆದ ಸಂದರ್ಭದಲ್ಲಿ ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ಉಪಾಧ್ಯಕ್ಷರಾದ ಶ್ರೀ ಪ್ರಮೋದ್ ಮನೋಳಿ ಯವರನ್ನು ಆಶೀರ್ವದಿಸಿದರು. ಈ ಸಂದರ್ಭದಲ್ಲಿ ಅಷ್ಟೋತ್ತರ ಮಂಡಳಿಯ ಕಾರ್ಯದರ್ಶಿಗಳಾದ ಶ್ರೀ ಹನುಮಂತ್ ಬಿ ಅವರು ಬ್ರಾಹ್ಮಣ ಮಹಾಸಭಾ ಸದಸ್ಯತ್ವ ಅಭಿಯಾನವನ್ನು ಚಾಲನೆ ಗೊಳಿಸಿದರು. ಧನಕ್ ಶಿರೂರ್ ಗುರುರಾಜ್ ಕುಲಕರ್ಣಿ, ಮಧು ದೇಶಪಾಂಡೆ, ಯರಗುಪ್ಪಿ ಮನೋಹರ್ ಸ. ಬ್ಬನೀಸ್ ಗ್ರಾಮ ಪುರೋಹಿತ್ ಗುರುದತ್ ಅರುಣ್, ಮಧು ದೇಶಪಾಂಡೆ, ಚಿಮ್ಮಲಿಗಿ ಶ್ರೀ ಪ್ರಮೋದ್ ಹುಲಿಕವಿ ಹಾಗೂ ನೂರಾರು ಭಕ್ತರು ಈ ಸಂದರ್ಭದಲ್ಲಿ ಮಹಾಸಭೆಯ ಸಂಘಟನಾ ಕಾರ್ಯಚಟುವಟಿಕೆ ಕುರಿತು ಚರ್ಚೆ ನಡೆಸಿದರು.

## ಬ್ಯಾಡಗಿ ತಾಲ್ಲೂಕಿನ ನೂತನ ಪದಾಧಿಕಾರಿಗಳ ಪದಗ್ರಹಣ



ದಿನಾಂಕ 23ನೇ ಆಗಸ್ಟ್ 22.ರಂದು ಹಾವೇರಿ ಜಿಲ್ಲೆ, ಬ್ಯಾಡಗಿ ನಗರದಲ್ಲಿ ತಾಲೂಕಿನ ಪದಾಧಿಕಾರಿಗಳ ಅಧಿಕಾರ ಪದಗ್ರಹಣ ಹಾಗೂ ಸಂಘಟನಾತ್ಮಕ ಸಭೆ–ಸಮಾರಂಭ ನೆರವೇರಿತು. ಕಾರ್ಯಕ್ರಮ ಉದ್ಘಾಟಕರಾಗಿ ಮಾನ್ಯ ವಿರುಪಾಕ್ಷಪ್ಪ, ಬಳ್ಳಾರಿ ಶಾಸಕರು ಆಗಮಿಸಿದ್ದರು. ಮುಖ್ಯ ಅತಿಥಿಗಳಾಗಿ ವಿಜಯನಾಡ ಜೋಶಿ, ಸಹ ಕಾರ್ಯದರ್ಶಿ ಹಾಗೂ ಹಾವೇರಿ ಗದಗ ಜಿಲ್ಲಾ ಉಸ್ತುವಾರಿಗಳು ಆಗಮಿಸಿದ್ದರು. ಪುರಸಭೆಯ ಅಧ್ಯಕ್ಷರಾದ ಸರೋಜಾ ಉಳ್ಳಾಗಡ್ಡಿ, ಉಪಾಧ್ಯಕ್ಷರಾದ ಗಾಯತ್ರಿ ರಾಯ್ಕರ್, ಪ್ರಭಾಕರ ಮಂಗಳೂರು, ರಾಜ್ಯ ಕಾರ್ಯಕಾರಿಣಿ ವಿಶೇಷ ಆಮಂತ್ರಿತರು, ವಸಂತ್ ಮುಕ್ತಾಲಿ, ಹಾವೇರಿ ಜಿಲ್ಲಾಧ್ಯಕ್ಷರು, ದೀಪಾ ಪಾಟೀಲ್, ಹಾವೇರಿ ಜಿಲ್ಲಾ ಮಹಿಳಾ ಸಂಚಾಲಕಿ, ಜಿ.ಎಲ್. ನಾಡಿಗೇರ್, ಉಮೇಶ್ ವಿಶ್ವರೂಪ್ ಆಗಮಿಸಿದ್ದರು. ಕಾರ್ಯಕ್ರಮದಲ್ಲಿ ಶ್ರೀನಿವಾಸ್ ಶಿವಪೂಜಿ, ಕೆ.ಜಿ ಕುಲಕರ್ಣಿ, ಬಾಬುರಾವ್ ಉದ್ದಾರ್, ವಿನಾಯಕ್ ಹುದ್ದಾರ್ ಮುಂತಾದ ಗಣ್ಯರು ಸಭೆಯಲ್ಲಿ ಪಾಲ್ಗೊಂಡಿದ್ದು ಕಾರ್ಯಕ್ರಮವು ಯಶಸ್ವಿಯಾಗಿ ನೆರವೇರಿತು.

## ಹಾವೇರಿ ಜಿಲ್ಲಾ ಕಾರ್ಯಾಲಯ ಉದ್ಘಾಟನೆ

# ಪದಾಧಿಕಾರಿಗಳ ಪದಗ್ರಹಣ ಹಾಗೂ ಪ್ರತಿಭಾ ಪುರಸ್ಕಾರ ಸಮಾರಂಭ





ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ಅಡಿಯಲ್ಲಿ ಹಾವೇರಿ ಜಿಲ್ಲಾ ಬ್ರಾಹ್ಮಣ ಸಂಘದ ಕಾರ್ಯಾಲಯದ ಉದ್ಘಾಟನೆ ನಡೆಯಿತು. ಅದರ ಜೊತೆಗೆ ಜಿಲ್ಲಾ ಅಧ್ಯಕ್ಷ, ಪದಾಧಿಕಾರಿಗಳಿಗೆ ಮತ್ತು ಎಲ್ಲಾ ತಾಲೂಕು ಮಹಿಳಾ ಸಂಚಾಲಕಿ, ಸಹ ಸಂಚಾಲಕಿ ಇವರೆಲ್ಲರಿಗೂ ಪ್ರತಿಜ್ಞಾವಿಧಿ ಸ್ವೀಕಾರದೊಂದಿಗೆ ಪದಗ್ರಹಣ ಸಮಾರಂಭ. ಮತ್ತು ವಿದ್ಯಾರ್ಥಿ ವಿದ್ಯಾರ್ಥಿನಿಯರಿಗೆ ಪ್ರತಿಭಾ ಪುರಸ್ಕಾರ ಕಾರ್ಯಕ್ರಮ ನಡೆಯಿತು. ಈ ಸಮಾರಂಭದ ಘನ ಅಧ್ಯಕ್ಷತೆಯನ್ನು. ಹಿರಿಯರಾದ ಪ್ರಭಾಕರ್, ಮಂಗಳೂರು ವಹಿಸಿದ್ದರು. ಉದ್ಘಾಟಕರಾಗಿ. ಶ್ರೀಹರಿ ಗೋಳಸಂಗಿ. ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾದ ಉಪಾಧ್ಯಕ್ಷರು ಮತ್ತು ವಿಜಯಪುರ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರು. ಹಾಗೂ ವಿಜಯನಾಡ ಜೋಶಿ ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ. ಸಹ ಕಾರ್ಯದರ್ಶಿ ಬೆಂಗಳೂರು ಹುಬ್ಬಳ್ಳಿ. ಹಾವೇರಿ ಗದಗ್ ಜಿಲ್ಲಾ ಉಸ್ತುವಾರಿಗಳು ಆಗಮಿಸಿದ್ದರು. ನೂತನ ಜಿಲ್ಲಾಧ್ಯಕ್ಷರಾದ ವಸಂತ್ ಮುಕ್ತಾಲಿ ಮತ್ತು ಎಲ್ಲ ಪದಾಧಿಕಾರಿಗಳು ಪ್ರಮಾಣವಚನ ಸ್ವೀಕಾರದೊಂದಿಗೆ ಅಧಿಕಾರ ಸ್ವೀಕರಿಸಿದರು. ವೇದಿಕೆಯಲ್ಲಿ ಮಹದೇವ್ ಪಾಟೀಲ್, ಜೆಎಲ್ ನಾಡಿಗೆ. ಉಮೇಶ್ ವಿಶ್ವರೂಪ ಪಾರ್ವತಿ ಕಾಶಿಕರ್. ಲಲಿತಾ ದೇಸಾಯಿ. ದೀಪಾ ಪಾಟೀಲ್ ಜಿಲ್ಲಾ ಮಹಿಳಾ ಸಂಚಾಲಕಿ ಉಪಸ್ಥಿತರಿದ್ದರು. ಪ್ರಾಸ್ತಾವಿಕವಾಗಿ ಪ್ರಭಾಕರ ಮಂಗಳೂರು ಮಾತನಾಡಿದರು ವಂದನಾರ್ಪಣೆಯನ್ನು ಉದಯ್ ಕುಲಕರ್ಣಿ ನೆರವೇರಿಸಿದರು. ಎಲ್ಲ ತಾಲೂಕುಗಳಿಂದ ವಿಪ್ರಬಾಂಧವರು ಒಟ್ಟಾಗಿ ಭಾಗವಹಿಸಿರುವುದು ಈ ಭಾಗದ ವಿಪ್ರ ಸಮುದಯದ ಉತ್ಸಾಹ ಸಂಭ್ರಮಕ್ಕೆ ಸಾಕ್ಷಿಯಾಯಿತು.

## ಉದಾರ ದೇಣಿಗೆ ನೀಡಲು ಮನವಿ

ಸನ್ಮಾನ್ಯ ಅಧ್ಯಕ್ಷರಾದ ಶ್ರೀ ಅಶೋಕ ಹಾರನಹಳ್ಳಿಯವರ ಸಮರ್ಥ ಮಾರ್ಗದರ್ಶನದಲ್ಲಿ ಗಾಯತ್ರೀ ಭವನ ಮತ್ತು ವಿದ್ಯಾವಾಸಿನಿ ಮಹಿಳಾ ವಿದ್ಯಾರ್ಥಿನಿಲಯದ ನವೀಕರಣವನ್ನು ಹಮ್ಮಿಕೊಳ್ಳಲಾಗುತ್ತಿದೆ. ಈ ಕಾಮಗಾರಿಗೆ ಸಾಕಷ್ಟು ಧನ ಸಂಪನ್ಮೂಲದ ಅಗತ್ಯವಿದೆ. ಈ ದಿಶೆಯಲ್ಲಿ ತಮ್ಮ ಸಹಾಯವನ್ನು ನಿರೀಕ್ಷಿಸುತ್ತೇವೆ. ಮಹಾಸಭಾದ ಅಂಗಸಂಸ್ಥೆ ಯಾದ ಸಪ್ತರ್ಷಿ ಫೌಂಡೇಷನ್ ಹೆಸರಿನಲ್ಲಿ ತಾವು ಚೆಕ್ ಅನ್ನು ನೀಡಬಹುದು. ತಾವು ಉದಾರವಾಗಿ ನೀಡಿದ ಹಣಕ್ಕೆ 80ಜಿ ತೆರಿಗೆ ವಿನಾಯಿತಿ ಇದೆ. ತಾವು ನಮ್ಮೊಂದಿಗೆ ಈ ಕಾರ್ಯದಲ್ಲಿ ಕೈಜೋಡಿಸ ಬೇಕಾಗಿ ಸವಿನಯ ಕೋರಿಕೆ.

**ಬ್ಯಾಂಕ್ ವಿವರ**

| | | |
|---|---|---|
| ಬ್ಯಾಂಕ್ | : | ಕರ್ನಾಟಕ ಬ್ಯಾಂಕ್ |
| ಖಾತಾ ಹೆಸರು | : | ಸಪ್ತರ್ಷಿ ಫೌಂಡೇಷನ್ |
| ಖಾತಾ ಸಂಖ್ಯೆ | : | 1072500102061001 |
| ಐಎಫ್‌ಎಸ್‌ಸಿ | : | KARB0000107 |
| ಶಾಖೆ | : | ಬನಶಂಕರಿ ಎರಡನೇ ಹಂತ, ಬೆಂಗಳೂರು |

– ಪ್ರದಾನ ಕಾರ್ಯದರ್ಶಿ

## ವಿಪ್ರನುಡಿಗೆ ಚಂದಾದಾರರಾಗಲು ಮನವಿ

ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭೆಯ ಮುಖವಾಣಿಯಾದ 'ವಿಪ್ರನುಡಿ' ಹೊಸ ವಿನ್ಯಾಸದೊಂದಿಗೆ ಪ್ರಕಟವಾಗುತ್ತಿದೆ. ಸಂಚಿಕೆ ಇನ್ನಷ್ಟು ಚೆನ್ನಾಗಿ ಮೂಡಿಬರಲು ತಮ್ಮ ಸಲಹೆಗೆ ಸ್ವಾಗತ. ಮುದ್ರಣ ದುಬಾರಿಯಾಗಿರುವ ಈ ಕಾಲದಲ್ಲಿ ಪತ್ರಿಕೆಯನ್ನು ಎಲ್ಲರಿಗೂ ಉಚಿತವಾಗಿ ತಲುಪಿಸಲು ಕಷ್ಟಸಾಧ್ಯ. ಆದ್ದರಿಂದ ತಾವು 'ವಿಪ್ರನುಡಿ'ಗೆ ಚಂದಾದಾರರಾಗಬೇಕೆಂದು ಸಂಪಾದಕ ಮಂಡಳಿಯ ವಿನಂತಿ. ಮೂರು ವರ್ಷಕ್ಕೆ 500/= ರೂ.ಗಳನ್ನು ನೀಡಿ ವಿಪ್ರನುಡಿ ಚಂದಾದಾರರಾಗಲು ವಿನಂತಿಸುತ್ತೇವೆ. ಈ ವಿಪ್ರನುಡಿ ಚಂದಾ ಹಣವನ್ನು ಪ್ರತ್ಯೇಕವಾಗಿ ತೆಗೆದಿಡ ಲಾಗುತ್ತದೆ. ದಯವಿಟ್ಟು ತಾವು ಹಾಗೂ ತಮ್ಮ ಬಂಧುಗಳು ಶೀಘ್ರವೇ ಚಂದಾದಾರರಾಗಬೇಕೆಂದು ಸಂಪಾದಕ ಮಂಡಲಿ ವಿನಂತಿಸುತ್ತದೆ.

## ಕಲ್ಬುರ್ಗಿಯಲ್ಲಿ ಸಂಘಟನಾ ಸಭೆ



ಕಲಬುರ್ಗಿಯಲ್ಲಿ ಜಂಟಿ ಕಾರ್ಯದರ್ಶಿಯಾದ ಶ್ರೀ ರಾಘವೇಂದ್ರ ಕುಲಕರ್ಣಿ, ಬ್ರಾಹ್ಮಣ ಮುಖಂಡರಾದ ಶ್ರೀ ನರಹರಿ ಪಾಟೀಲ್, ಪ್ರಶಾಂತ್ ಕೊರಲ್ಲಿ ಮತ್ತಿತರ ಗಣ್ಯರು ಅಧ್ಯಕ್ಷರನ್ನು ಅತ್ಯಂತ ಉತ್ಸಾಹದಿಂದ ಬರಮಾಡಿಕೊಂಡರು, ತದನಂತರ ಅಧ್ಯಕ್ಷರು ಸ್ಥಳೀಯ ಮುಖಂಡರೊಂದಿಗೆ ಮಹಾಸಭೆಯ ಸಂಘಟನೆ, ಸದಸ್ಯತ್ವ ನೋಂದಾವಣೆ ಕುರಿತು ಚರ್ಚಿಸಿದರು.

## ನಿಡ್ಲೆ ಕುದ್ರಾಯ 'ವಿಪ್ರ ಸಂಗಮ' ಸಂಘದ ಉದ್ಘಾಟನೆ



ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ಇದರ ರಾಜ್ಯ ಉಪಾಧ್ಯಕ್ಷರಾದ ಶ್ರೀಯುತ ಮಹೇಶ್ ಕಜೆಯವರು ಬೆಳ್ತಂಗಡಿ ತಾಲೂಕು ನಿಡ್ಲೆ ಕುದ್ರಾಯದಲ್ಲಿ 'ಪಂಚವಟಿ' ಸಭಾಂಗಣದಲ್ಲಿ ನೂತನ ವಿಪ್ರ ಸಂಗಮ ಸಂಘದ ಉದ್ಘಾಟನಾ ಕಾರ್ಯಕ್ರಮದಲ್ಲಿ ಭಾಗವಹಿಸಿ ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾದ ಧ್ಯೇಯೋದ್ದೇಶ, ಸದಸ್ಯತ್ವ ಅಭಿಯಾನ, ಮತ್ತು ಸಂಘಟನೆಯ ಅವಶ್ಯಕತೆಯ ಬಗ್ಗೆ ಸಭೆಯನ್ನು ಉದ್ದೇಶಿಸಿ ಮಾತನಾಡಿದರು. ಈ ಸಂದರ್ಭದಲ್ಲಿ ವೇದಿಕೆಯಲ್ಲಿ ಉಡುಪಿ ಶೀರೂರು ಮಠದ ದಿವಾಣರಾದ ಶ್ರೀಯುತ ಡಾ॥ ಉದಯಕುಮಾರ್ ಸರಳತ್ತಾಯ, ಅಖಿಲ ಕರ್ನಾಟಕ ತ್ರಿಮತಸ್ಥ ಅರ್ಚಕ ಪುರೋಹಿತ ಪರಿಷತ್ತು ಬೆಳ್ತಂಗಡಿ ಇದರ ಅಧ್ಯಕ್ಷರಾದ ಶ್ರೀಯುತ ರವಿಕುಮಾರ ಪಜಿರಡ್ಕ, ಸಂಘದ ಪದಾಧಿಕಾರಿಗಳು ಮುಂತಾದ ಗಣ್ಯರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.





ಆನಂದಾಸ್ ಸೇವಾ ಸದನ ಟ್ರಸ್ಟ್ (ರಿ)

Ananda's Seva Sadana Trust ®

'Home Nursing Care & Old Age Home'

# 40, 4th Main Road, 3rd Stage,BEML Layout,
Rajarajeshwari Nagar, Bengaluru-560 098

Reg No:BK-IV 152/19-20



OLD AGE HOME EXCLUSIVE FOR BRAHMIN

Senior Citizen Old Age/ Geriatric Home and Rehabilitation Centre



- Geriatric/Oldage Care
- Pure Veg Brahmin food
- Emergency Oxygen Facility
- BIPAP/CPAP Care
- Blood Investigation
- RT/PEG Feed
- 24/7 Nursing Care
- Doctor/Nurses/ Physiotherapists
- Ambulance Facility
- Wheel Chair, walkmate
- Television, WiFi, CCTV Surveillance

Daily activities, Bhajans, Meditation

We believe if you want Happiness in Life, Never be a Owner of Love, Always be Donor of Love !!

080-4211 5786 76762 89023 63625 43616 70906 95002

Anandas Brahmin | anandassevasadana@gmail.com | www.anandassevasadana.com

ಜಾಹಿರಾತು

### ಮಹಾಸಭೆಯ ನಿಯೋಗದಿಂದ
## ಸಂಸದ ರಾಘವೇಂದ್ರ ಹಾಗೂ ಕೆ.ಎಸ್.ಈಶ್ವರಪ್ಪನವರ ಭೇಟಿ



ದಿನಾಂಕ 27.08.2022ರಂದು ಶಿವಮೊಗ್ಗದಲ್ಲಿ ಲೋಕಸಭಾ ಸದಸ್ಯರಾದ ಶ್ರೀ ರಾಘವೇಂದ್ರ ಮತ್ತು ಹಿರಿಯ ಬಿಜೆಪಿ ಮುಖಂಡರಾದ ಶ್ರೀ ಈಶ್ವರಪ್ಪನವರಿಗೆ ಮಹಾಸಭಾದ ಅಧ್ಯಕ್ಷರಾದ ಅಶೋಕ ಹಾರನಹಳ್ಳಿ ಹಾಗೂ ಮಹಾಸಭಾ ನಿಯೋಗ ಭೇಟಿ ಮಾಡಿ ಈ ಹಿಂದೆ ಮನವಿ ಮಾಡಿದಂತೆ ಅಖಿಲ ಕರ್ನಾಟಕ ಬ್ರಾಹ್ಮಣ ಸಭಾಗೆ ಹೆಚ್ಚಿನ ಅನುದಾನ ವನ್ನು ಶೀಘ್ರವಾಗಿ ನೀಡಬೇಕೆಂದು ಮತ್ತು ಈ ಬಗ್ಗೆ ಮುಖ್ಯಮಂತ್ರಿಗಳಿಗೆ ಮನವರಿಕೆ ಮಾಡಿಕೊಡಬೇಕು ಎಂದು ಮನವಿ ಮಾಡಲಾಯಿತು. ಈ ಸಂದರ್ಭದಲ್ಲಿ ದತ್ತಾತ್ರಿ, ಮಹಾಸಭಾ ಖಜಾಂಚಿ ವಿ. ಎಸ್. ನಾಯಕ್, ರವಿಕುಮಾರ್, ಹಿರಿಯ ಬಿ.ಜೆ.ಪಿ. ಮುಖಂಡರಾದ ಭಾನುಪ್ರಕಾಶ್ ಹಾಗೂ ಎನ್.ಎನ್. ವಿಶ್ವನಾಥ್ ನಿಯೋಗದಲ್ಲಿದ್ದರು.



**ಮಾನ್ಯ ಅಧ್ಯಕ್ಷರು ಶರಾವತಿ ನದಿ ಮೂಲ ಅಂಬುತೀರ್ಥ ಕ್ಷೇತ್ರಕ್ಕೆ ಭೇಟಿ ನೀಡಿ ಅಲ್ಲಿನ ಪುನರ್ ನಿರ್ಮಾಣ ಕಾರ್ಯಗಳನ್ನು ವೀಕ್ಷಿಸಿದರು**

## 'ಬೆಳ್ತಂಗಡಿಯಲ್ಲಿ ಕುಟುಂಬ ಮಿಲನ' ಕಾರ್ಯಕ್ರಮ




ಅಖಿಲ ಕರ್ನಾಟಕ ಬ್ರಾಹ್ಮಣ ಅರ್ಚಕರ ಮತ್ತು ಪುರೋಹಿತರ ಪರಿಷತ್ತು (ತ್ರಿಮತಸ್ಥ) ಬೆಂಗಳೂರು(ರಿ), ದ.ಕ.,ಬೆಳ್ತಂಗಡಿ ತಾಲೂಕು ಇವರ ವತಿಯಿಂದ ತಾರೀಖು 28 /08/2022 ರ ರವಿವಾರ ಬೆಳ್ತಂಗಡಿ ಲಾಯಿಲ 'ಶ್ರೀ ಗುರು ರಾಘವೇಂದ್ರ ಮಠ' ದಲ್ಲಿ ನಡೆದ "ಕುಟುಂಬ ಮಿಲನ" ಕಾರ್ಯಕ್ರಮದಲ್ಲಿ 12 ಮಂದಿ ಅಧ್ಯಾಪಕರಿಗೆ 'ಗೌರವಾಭಿನಂದನಾ' ಕಾರ್ಯಕ್ರಮ ಮತ್ತು 28 ವಿದ್ಯಾರ್ಥಿಗಳಿಗೆ 'ಪ್ರತಿಭಾ ಪುರಸ್ಕಾರ' ಕಾರ್ಯಕ್ರಮ ಹಮ್ಮಿಕೊಂಡದ್ದು ಇದರಲ್ಲಿ ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ಇದರ ರಾಜ್ಯ ಉಪಾಧ್ಯಕ್ಷರಾದ ಶ್ರೀಯುತ ಮಹೇಶ್ ಕಜೆಯವರು ಅತಿಥಿಗಳಾಗಿ ಭಾಗವಹಿಸಿ ಸಂಘಟನೆಯ ಆರಂಭ ಕುಟುಂಬದಿಂದ ಪ್ರಾರಂಭವಾಗಿ ಗ್ರಾಮವನ್ನು, ತಾಲೂಕನ್ನು, ಜಿಲ್ಲೆಯನ್ನು, ರಾಜ್ಯವನ್ನು ಮತ್ತು ದೇಶವನ್ನು ಗುರಿಯಾಗಿ ವಿಸ್ತರಿಸಬೇಕು ಎಂದು ಕರೆ ನೀಡಿದರು. ಮಾತ್ರವಲ್ಲದೆ ಗುರು ಸ್ಮರಣೀಯ ಮಹತ್ವ ಪ್ರತಿಭೆಗಳ ಗುರುತಿಸುವಿಕೆಯ ಅವಶ್ಯಕತೆ ಇವುಗಳ ಬಗ್ಗೆ ಸಭೆಯನ್ನು ಉದ್ದೇಶಿಸಿ ಮಾತನಾಡಿದರು. ಸಮಾಜದ ಎಲ್ಲ ಬಂಧುಗಳು ಒಂದೇ ಛತ್ರದ ಅಡಿಯಲ್ಲಿ ಬರುವ ವಿಶಿಷ್ಟ ಉದ್ದೇಶದಿಂದ ಸ್ಥಾಪಿತವಾದ ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾದ ಪ್ರಾಮುಖ್ಯತೆಯನ್ನು ವಿವರಿಸಿದರು. ವೇದಿಕೆಯಲ್ಲಿ ಅರ್ಚಕ ಪುರೋಹಿತ ಪರಿಷತ್ತಿನ ಅಧ್ಯಕ್ಷರಾದ ರವಿಕುಮಾರ ಪದ್ಯಾಣ, ರಾಘವೇಂದ್ರ ಭಟ್, ಕಾರ್ಯದರ್ಶಿ ಕೃಷ್ಣಕುಮಾರ್, ಶ್ರೀರಂಗ ಭಟ್, ಶಿವಕುಮಾರ್ ಬಾರಿತ್ತಾಯ ಹಾಗೂ ಜಿಲ್ಲಾ ಧಾರ್ಮಿಕ ಪರಿಷತ್ತಿನ ಮತ್ತು ಮಹಾಸಭಾ ರಾಜ್ಯ ಕಾರ್ಯಕಾರಿಣಿಯ ಸದಸ್ಯರಾದ ಪೊಳಲಿ ಗಿರಿ ಪ್ರಕಾಶ ತಂತ್ರಿ, ಅಧ್ಯಾಪಕರಾದ ರಾಮಕೃಷ್ಣ ಬೆಲಾಲ್ ಮುಂತಾದ ಗಣ್ಯರು ಉಪಸ್ಥಿತರಿದ್ದರು.

**ವಿಪ್ರನುಡಿ ಪತ್ರಿಕೆಗೆ ವರದಿ, ಲೇಖನಗಳನ್ನು ಕಳುಹಿಸುವವರು ಬರಹ, ನುಡಿಯಲ್ಲಿ ಟೈಪ್‌ಮಾಡಿ ಈ ಮೇಲ್ ಮುಖಾಂತರವೇ ಕಳುಹಿಸತಕ್ಕದ್ದು.**
**ಲೇಖನ ವರದಿಗಳನ್ನು ಕಳುಹಿಸಬೇಕಾದ**
**ಇ–ಮೇಲ್ : e mail : vipranudi@gmail.com**

**ವಿಪ್ರನುಡಿ ಮಾಸಪತ್ರಿಕೆಗೆ ರೂ. 500/- ಸಂದಾಯಮಾಡಿ ಚಂದಾದಾರರಾಗಿ**

## ಮಹಾಸಭೆಯ ಅಧ್ಯಕ್ಷರ ಪ್ರಯತ್ನದ ಫಲ ಶ್ರೀಮಠಗಳಿಗೆ ಸರ್ಕಾರದಿಂದ ಒಂದು ಕೋಟಿ ಅನುದಾನ








ಸೋಸಲೆ ವ್ಯಾಸರಾಜ ಮಠ, ಟಿ. ನರಸೀಪುರ, ಮೈಸೂರು ಜಿಲ್ಲೆ. | ಶೃಂಗೇರಿ ಶಿವಂಗಾ ಮಠ ಶಾರದಾ ಪೀಠ | ಎಡತೊರೆ ಶ್ರೀ ಯೋಗಾನಂದೇಶ್ವರ ಮಠ

ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾಧ್ಯಕ್ಷರಾದ ಶ್ರೀ ಅಶೋಕ ಹಾರನಹಳ್ಳಿಯವರು ರಾಜ್ಯದ ಘನತೆವೆತ್ತ ಮುಖ್ಯಮಂತ್ರಿಗಳಾದ ಶ್ರೀ ಬಸವರಾಜ ಬೊಮ್ಮಾಯಿಯವರಲ್ಲಿ ನಮ್ಮ ನಾಡಿನ ಮೂರು ಶ್ರೀ ಮಠಗಳು ಹಾಗೂ ಮೈಸೂರಿನ ಭಾರತೀಯ ಯೋಗಧಾಮ ಸಂಸ್ಥೆಗೆ ಅನುದಾನವನ್ನು ಸರ್ಕಾರದ ವತಿಯಿಂದ ನೀಡಬೇಕೆಂದು ಕೋರಿಕೆ ಸಲ್ಲಿಸಿದ್ದ ಮೇರೆಗೆ ಒಂದು ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿರುತ್ತಾರೆ. ಇದಕ್ಕಾಗಿ ಮುಖ್ಯಮಂತ್ರಿಗಳಿಗೆ ಮಹಾಸಭೆಯು ಅನಂತ ಕೃತಜ್ಞತೆಗಳು.

## ಮಂಗಳೂರಿನಲ್ಲಿ ವಿಪ್ರ ಸಮಾಗಮ ವೇದಿಕೆ ಕಾರ್ಯಕ್ರಮ




ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ಬೆಂಗಳೂರು ಇದರ ರಾಜ್ಯ ಉಪಾಧ್ಯಕ್ಷರಾದ ಶ್ರೀಯುತ ಮಹೇಶ್ ಕಜೆಯವರು ಮಹಾಸಭೆಯ ಸಂಘಟನೆ ಹಾಗೂ ಸದಸ್ಯರ ನೋಂದಾವಣೆಯ ಅಭಿಯಾನದ ಅಂಗವಾಗಿ ಮಂಗಳೂರು ಎಸ್ ಕೆ ಡಿ ಬಿ ಕ್ಯಾಂಪಸ್ ನಲ್ಲಿ ನಡೆದ ವಿಪ್ರ ಸಮಾಗಮ ವೇದಿಕೆಯ ಕಾರ್ಯಕ್ರಮದಲ್ಲಿ ಭಾಗವಹಿಸಿ ಸಂಘದ ಧ್ಯೇಯೋದ್ದೇಶವನ್ನು, ಆಶಯಗಳನ್ನು ಸವಿವರವಾಗಿ ಪ್ರಸ್ತಾಪಿಸಿ ಸರ್ವ ವಿಪ್ರ ಸಮುದಾಯದ ಸಹಕಾರವನ್ನು ಕೋರಿದರು. ಮಾತ್ರವಲ್ಲದೆ ಗೌರವಾನ್ವಿತ ಅಧ್ಯಕ್ಷರಾದ ಶ್ರೀ ಅಶೋಕ್ ಹಾರನಹಳ್ಳಿ ಅವರ ವಿಶೇಷ ದೃಷ್ಟಿಕೋನವನ್ನು ಪ್ರಸ್ತಾಪಿಸುತ್ತಾ ಶಾರದಾ ವಿದ್ಯಾಲಯವನ್ನು ಕೂಡ ಅಧ್ಯಕ್ಷರ ಆಶಯದಂತೆ ಮಹಾಸಭಾ ಒಡಂಬಡಿಕೆಗೆ ಒಳಪಡುವಂತೆ ಕೋರಿಕೆ ಸಲ್ಲಿಸಿದರು. ಈ ಸಂದರ್ಭ ವೇದಿಕೆಯಲ್ಲಿ ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾದ ರಾಜ್ಯ ಕಾರ್ಯಕಾರಿಣಿಯ ಸದಸ್ಯರು ಹಾಗೂ ಜಿಲ್ಲಾ ಧಾರ್ಮಿಕ ಪರಿಷತ್ತಿನ ಸದಸ್ಯರಾದ ಪೊಳಲಿ ಶ್ರೀ ಗಿರಿಪ್ರಕಾಶ ತಂತ್ರಿಯವರು, ಶಾರದಾ ವಿದ್ಯಾಲಯದ ಕರೆಸ್ಪಾಂಡೆಂಟ್ ಆಗಿರತಕ್ಕಂತಹ ಹಿಂದೂ ಸಮಾಜದ ಮುಖಂಡ ಪ್ರೊ.ಎಂ.ಬಿ ಪುರಾಣಿಕ್, ಮಹಿಳಾ ಸಂಘಟನೆಯ ಸಂಚಾಲಕಿ ಚೇತನ ದತ್ತಾತ್ರೇಯ, ಸಹ ಸಂಚಾಲಕಿ ನ್ಯಾಯವಾದಿಗಳಾದ ಉಮಾ ಸೋಮಯಾಜಿ ಮತ್ತು ವಿಪ್ರಸಮಾಗಮ ವೇದಿಕೆಯ ಅಧ್ಯಕ್ಷರಾದ ರಾಮಕೃಷ್ಣ ರಾವ್ ಮತ್ತಿತರರು ಹಾಜರಿದ್ದರು.


**ವಿಪ್ರ ಅಂಗವಿಕಲರು ಹಾಗೂ ವೃದ್ಧರಿಗೆ**

## ಮಾಸಾಶನ ಯೋಜನೆಗೆ ಪ್ರಾಯೋಜಕತ್ವಕ್ಕಾಗಿ ಮನವಿ

ಸಂಕಷ್ಟದಲ್ಲಿರುವ ಅರ್ಹ ವಿಪ್ರ ಅಂಗವಿಕಲರು ಹಾಗೂ ವೃದ್ಧರಿಗೆ ಮುಂದಿನ ದಿನಗಳಲ್ಲಿ ಮಾಸಿಕ ಸಹಾಯ ಧನವಾಗಿ 'ಮಾಸಾಶನ' ನೀಡಲು ಯೋಜಿಸಲಾಗಿದೆ. ಸಮಾಜದ ಉಳ್ಳವರು, ಮತ್ತು ಸಬಲರು ಈ ಯೋಜನೆಗೆ ಪ್ರಾಯೋಜಕರಾಗಿ ಮುಂದೆ ಬಂದು ಅಪೂರ್ವವಾದ ಯೋಜನೆಗೆ ಕಾರ್ಯ ರೂಪಕ್ಕೆ ಬರುವಂತೆ ನೆರವಾಗಬೇಕೆಂದು ಮಹಾಸಭೆಯ ಅಧ್ಯಕ್ಷರು ವಿನಂತಿಸಿಕೊಂಡಿದ್ದಾರೆ. ಒಂದು ವರ್ಷಕ್ಕೆ 6000ರೂಗಳ್ನು ನೀಡಿ ಪ್ರಾಯೋಜಕರಾದಲ್ಲಿ ಅವರದೆ ಹೆಸರಿನಲ್ಲಿ ಈ ಹಣದಿಂದ ಒಬ್ಬರಿಗೆ 12 ತಿಂಗಳು 500ರೂಗಳಂತೆ ತಿಂಗಳಿಗೆ ಸಹಾಯಧನ ರೂಪದಲ್ಲಿ ಮಾಸಾಶನ ನೀಡಲು ಯೋಜಿಸಿದೆ. ಆದ್ದರಿಂದ ಕನಿಷ್ಠ 6,000 ರೂಗಳನ್ನು ನೀಡಿ ಪ್ರಾಯೋಜಕರಾಗಲು ಕೋರಿದೆ. ಪ್ರಾಯೋಜಕರ ಹೆಸರನ್ನು ಮಹಾಸಭೆಯ ಜಾಲತಾಣ ಹಾಗೂ ವಿಪ್ರನುಡಿಯಲ್ಲಿ ಪ್ರಕಟಿಸಲಾಗುವುದು.

–ಪ್ರಧಾನ ಕಾರ್ಯದರ್ಶಿಗಳು

## ಗುರುಸೇವಾ ಭಕ್ತ ಎಂ.ಟಿ. ಪರಮೇಶ್ವರರವರಿಗೆ ಶ್ರದ್ಧಾಂಜಲಿ



ಶ್ರೀ ಶ್ರೀಧರ ಸೇವಾ ಮಹಾಮಂಡಲ (ರಿ.) ಶ್ರೀ ಶ್ರೀಧರಾಶ್ರಮ ಶ್ರೀಕ್ಷೇತ್ರ ವರದಪುರದ ಅಧ್ಯಕ್ಷರಾದ ಶ್ರೀಯುತ ಎಂ ಟಿ ಪರಮೇಶ್ವರ ಮಂಚಾಲೆ ಇವರು ಇತ್ತೀಚೆಗೆ ತಮ್ಮ 83ನೇ ವಯಸ್ಸಿನಲ್ಲಿ ಪಾರ್ಥಿವ ಶರೀರವನ್ನು ತ್ಯಜಿಸಿದರು. ಶ್ರೀಯುತರು ಅನನ್ಯ ಗುರುಭಕ್ತರಾಗಿದ್ದು ಮೂರು ತಲೆಮಾರು ಗಳಿಂದ ಅಖಂಡವಾಗಿ ಶ್ರೀ ಗುರುಸೇವೆ ಯನ್ನು ಮಾಡುತ್ತಾ ಬಂದಿರುತ್ತಾರೆ. ಶ್ರೀ ಭಗವಾನರ ಸೇವೆಯನ್ನು ಶ್ರೀಯುತರು ತಮ್ಮ ಬಾಲ್ಯ ಕಾಲದಿಂದಲೂ ಸಣ್ಣ ಅಥವಾ ದೊಡ್ಡ ಸೇವೆಯ ಭೇದಭಾವವಿಲ್ಲದೇ ಸಲ್ಲಿಸಿರುತ್ತಾರೆ. ಶ್ರೀ ಮಹಾಮಂಡಲದ ಸದಸ್ಯರಾಗಿ ಹಾಗೂ ಅಧ್ಯಕ್ಷರಾಗಿ ಸೇವೆಯನ್ನು ಈವರೆಗೆ ಸಲ್ಲಿಸಿರುತ್ತಾರೆ. ಶ್ರೀ ಪರಮಾನಂದ ಮಠ ಶೀಗೆಹಳ್ಳಿ, ಶ್ರೀ ಕಮಲೇಶ್ವರ ದೇವಸ್ಥಾನ ಚಿಕ್ಕಬಿಲ ಗುಂಜಿ ಅಲ್ಲದೇ ಹಲವಾರು ಸಂಸ್ಥೆಗಳಲ್ಲಿ ತ್ರಿಕರಣಪೂರ್ವಕವಾಗಿ ಸೇವೆ ಸಲ್ಲಿಸಿರುತ್ತಾರೆ. ನಮ್ಮ ಮಲೆನಾಡು ಪ್ರಾಂತ್ಯದಲ್ಲಿ ಒಬ್ಬ ಮಹಾದಾನಿ ಗಳಾಗಿ ಗುರುತಿಸಿಕೊಂಡಿರುತ್ತಾರೆ. ಬಡವ ಬಲ್ಲಿದನೆನ್ನದೆ ಎಲ್ಲರನ್ನೂ ಪ್ರೀತಿಯಿಂದ ನೋಡುವುದು ಯಾರನ್ನೂ ನೋಯಿಸದಿರುವುದು ಇದನ್ನು ವ್ರತವಾಗಿ ನಡೆಸಿಕೊಂಡು ಬಂದಿರುತ್ತಾರೆ. ಶ್ರೀಯುತರ ಆತ್ಮಕ್ಕೆ ಭಗವಾನ್ ಸದ್ಗುರು ಶ್ರೀ ಶ್ರೀಧರ ಸ್ವಾಮಿಗಳವರು ಚಿರಶಾಂತಿಯನ್ನು ಅನುಗ್ರಹಿಸಲೆಂದು ಮತ್ತು ಇವರ ಕುಟುಂಬ ವರ್ಗದವರಿಗೆ ಇವರ ಅಗಲಿಕೆಯ ದುಃಖವನ್ನು ಭರಿಸುವ ಶಕ್ತಿಯನ್ನು ನೀಡಲೆಂದು ಶ್ರೀ ಭಗವಾನರ ಪಾದಪದ್ಮಗಳಲ್ಲಿ ಮಹಾಸಭೆಯು ಪ್ರಾರ್ಥಿಸುತ್ತದೆ.

## ಶಿವಮೊಗ್ಗ ಸುಬ್ಬಣ್ಣ–ಅಶ್ರುತರ್ಪಣ



ಶ್ರೀ ಗಣೇಶ್‌ರಾವ್ ಹಾಗೂ ಶ್ರೀಮತಿ ರಂಗನಾಯಕಮ್ಮನವರ ಪುತ್ರನಾಗಿ ಶಿವಮೊಗ್ಗ ಜಿಲ್ಲೆಯ ನಗರ ಗ್ರಾಮದಲ್ಲಿ 1938ರಲ್ಲಿ ಜನಿಸಿದವರು ಸುಬ್ಬಣ್ಣನವರು. ಇವರ ತಾತ ಶಾಮಣ್ಣನವರು ಸಂಗೀತದಲ್ಲಿ ಘನ ವಿದ್ವಾಂಸರು. ಮೊದಲಿನಿಂದಲೂ ವ್ಯಾಸಂಗದ ಕಡೆ ಗಮನಹರಿಸಿದ ಸುಬ್ಬಣ್ಣ ಬಿ.ಎ. ಬಿ.ಕಾಂ. ಎಲ್.ಎಲ್.ಬಿ. ಪದವೀಧರರು. ವಕೀಲರಾಗಿ ವೃತ್ತಿ ಬದುಕು ಆರಂಭಿಸಿದರು. ಬಳಿಕ ನೋಟರಿಯಾಗಿ ನೇಮಕಗೊಂಡರು. 1963ರಲ್ಲಿ ಆಕಾಶವಾಣಿಯ ಗಾಯಕರಾಗಿ ಆಯ್ಕೆಯಾದರು. ಶ್ರೀ ಚಂದ್ರಶೇಖರ ಕಂಬಾರರ 'ಕರಿಮಾಯಿ' ಮೂಲಕ 1978ರಲ್ಲಿ ಕಾಡು ಕುದುರೆ ಚಿತ್ರದ "ಕಾಡು ಕುದುರೆ ಓಡಿ ಬಂದಿತ್ತಾ" ಹಾಡಿಗಾಗಿ ಅತ್ಯುತ್ತಮ ಹಿನ್ನೆಲೆ ಗಾಯಕ ರಜತ ಕಮಲ "ರಾಷ್ಟ್ರ ಪ್ರಶಸ್ತಿ" ಪಡೆದರು. ಆಕಾಶವಾಣಿಯ ಜನಪ್ರಿಯ ಕಾರ್ಯಕ್ರಮದಲ್ಲಿ "ಕೋಡಗನ ಕೋಳಿ ನುಂಗಿತ್ತಾ" ಆಳಬೇಡ ತಂಗಿ ಅಳಬೇಡ " 'ಬಿದ್ದೀಯಬ್ಬೆ ಮುದುಕಿ.." ಮೊದಲಾದ ಶಿಶುನಾಳ ಷರೀಫರ ಗೀತೆಗಳನ್ನು ಹಾಡಿದ ಸುಬ್ಬಣ್ಣ ಮನೆ ಮಾತಾದರು.

ನಾಡಿನ ಹೆಮ್ಮೆಯ ಗಾಯಕ ಶಿವಮೊಗ್ಗ ಸುಬ್ಬಣ್ಣ ಇನ್ನಿಲ್ಲ. ಸುಗಮ ಸಂಗೀತಕ್ಷೇತ್ರಕ್ಕೆ ಒಂದು ಘನತೆಯನ್ನು ತಂದ ಮೇರು ಕಲಾವಿದರು ಇವರು. ಹೂವಿನಂಥ ಮನಸು, ನಿಷ್ಕಲ್ಮಶ ಹೃದಯದ ಸುಬ್ಬಣ್ಣ ಅವರ ಆತ್ಮಕ್ಕೆ ಸದ್ಗತಿ ದೊರೆಯಲಿ, ಅವರ ಕುಟುಂಬಕ್ಕೆ ದುಃಖ ಭರಿಸುವ ಶಕ್ತಿ ನೀಡಲೆಂದು ಭಗವಂತನಲ್ಲಿ ಮಹಾಸಭೆಯು ಪ್ರಾರ್ಥಿಸುತ್ತದೆ.

## ಶಂಕರ ಶಾಸ್ತ್ರಿ ಟ್ರಸ್ಟ್, ಬೆಂಗಳೂರು

## ವಿಪ್ರ ವಿದ್ಯಾರ್ಥಿಗಳಿಗೆ ಸಹಾಯಧನಕ್ಕೆ ಅರ್ಜಿ ಆಹ್ವಾನ

ಆರ್ಥಿಕವಾಗಿ ಹಿಂದುಳಿದ ಮತ್ತು ಉತ್ತಮ ದರ್ಜೆಯಲ್ಲಿ ಉತ್ತೀರ್ಣರಾಗಿರುವ ಮೊದಲನೇ ಬಿ.ಎ./ಬಿ.ಎಸ್ಸಿ./ಬಿ.ಕಾಂ. ತರಗತಿಯಲ್ಲಿ ವ್ಯಾಸಂಗ ಮಾಡುತ್ತಿರುವ ವಿಪ್ರ ವಿದ್ಯಾರ್ಥಿಗಳಿಗೆ ಸಹಾಯಧನವನ್ನು ನೀಡಲು ಅರ್ಜಿಗಳನ್ನು ಹಿಂದಿನ ಪರೀಕ್ಷೆಗಳಲ್ಲಿ 90% ಮತ್ತು ಹೆಚ್ಚು ಅಂಕ ಗಳಿಸಿರುವ ವಿದ್ಯಾರ್ಥಿಗಳು ಅರ್ಜಿಯನ್ನು ಪಿ.ಯು.ಸಿ. ಅಂತಿಮ ಅಂಕಪಟ್ಟಿಯೊಡನೆ ದಿನಾಂಕ 30.09.2022ರ ಒಳಗೆ ಕೆಳಗಿನ ವಿಳಾಸಕ್ಕೆ ಕಳುಹಿಸಬೇಕು.

ಸಂಪರ್ಕಿಸಬೇಕಾದ ವಿಳಾಸ : ಶ್ರೀಮತಿ ಗಾಯತ್ರಿ ಭಾಸ್ಕರ್, ನಂ.21, 6ನೆ ಅಡ್ಡರಸ್ತೆ, 2ನೇ ಮುಖ್ಯರಸ್ತೆ, **ಶಂಕರ ಶಾಸ್ತ್ರಿ ಟ್ರಸ್ಟ್,** ಅರಕೆರೆ ಮೈಕೊ ಲೇಔಟ್, 2ನೇ ಹಂತ, ಬೆಂಗಳೂರು–560086. ಸಂಪರ್ಕಿಸಲು : 9036610459 (ಮಧ್ಯಾಹ್ನ 3.00 ರಿಂದ ಸಾಯಂಕಾಲ 5.00ರೊಳಗೆ)

## ಬಿ.ಕೆ.ಮರಿಯಪ್ಪ ಧರ್ಮ ಸಂಸ್ಥೆಯಿಂದ

## ಉಚಿತ ವಿದ್ಯಾರ್ಥಿ ನಿಲಯಕ್ಕೆ ಅರ್ಜಿ ಆಹ್ವಾನ

**ಬೆಂಗಳೂರಿನಲ್ಲಿ ಈ ಕೆಳಕಂಡ ಕೋರ್ಸ್‌ಗಳಲ್ಲಿ ಓದುತ್ತಿರುವ ಹಾಗೂ ಓದ ಬಯಸುವ ಬ್ರಾಹ್ಮಣ ಸಮಾಜದ ವಿದ್ಯಾರ್ಥಿನಿಯರಿಗೆ ಉಚಿತ ಊಟ ಹಾಗೂ ವಸತಿ ಸೌಕರ್ಯಗಳಿಗೆ ಮೇಲ್ಕಂಡ ಧರ್ಮಸಂಸ್ಥೆಗೆ ಅರ್ಜಿ ಸಲ್ಲಿಸಲು ಕೋರಲಾಗಿದೆ.**

**1.ಬಿ.ಇ. ಎಂ.ಬಿ.ಬಿ.ಎಸ್. ಬಿ.ಎ, ಬಿ.ಕಾಂ., ಎಲ್.ಎಲ್.ಬಿ., ಬಿ.ಎಸ್ಸಿ ವೆಟರ್‌ನರಿ, ಬಿ.ಎಸ್ಸಿ ನರ್ಸಿಂಗ್, ಬಿ.ಎಸ್ಸಿ (ಅಗ್ರಿಕಲ್ಚರ್), ಬಿ.ಎಡ್ ಮತ್ಯಾವುದಾದರೂ ಪದವಿ ಕೋರ್ಸ್‌ಗಳು**


**2. ಡಿಪ್ಲೋಮಾ ಕೋರ್ಸ್‌ಗಳು**

**3.ಸ್ನಾತಕೋತ್ತರ ಪದವಿ ಕೋರ್ಸ್‌ಗಳು (ಎಂ.ಎ. ಎಂ.ಕಾಂ. ಎಂ.ಟೆಕ್, ಎಂ.ಸಿ.ಸಿ. ಇತ್ಯಾದಿ**

**ಸಿ.ಇ.ಟಿ. ಅಥವಾ ಇನ್ಯಾವುದಾದರೂ ಫಲಿತಾಂಶ ನಿರೀಕ್ಷಿಸುತ್ತಿರು ವವರೂ ಸಹ ಅರ್ಜಿ ಸಲ್ಲಿಸಬಹುದಾಗಿದೆ. ವಿ.ಸೂ. ಪಿ.ಯು.ಸಿ. ಓದುವ ವಿದ್ಯಾರ್ಥಿಗಳಿಗೆ ಅವಕಾಶವಿಲ್ಲ.**

**ವ್ಯವಸ್ಥಾಪಕ ಧರ್ಮದರ್ಶಿ. ಬಿ.ಕೆ.ಮರಿಯಪ್ಪ ಧರ್ಮಸಂಸ್ಥೆ**

**3ನೇ ಮುಖ್ಯರಸ್ತೆ, (ಶ್ರೀ ರಾಮೇಶ್ವರಸ್ವಾಮಿ ದೇವಸ್ಥಾನದ ಎದುರು) ಚಾಮರಾಜಪೇಟೆ, ಬೆಂಗಳೂರು–560018.**



# ಜಿ.ಪಿ.ರಾಜರತ್ನಂ

**ಸುರೇಶ್ ಮೂನಾ**

ಕನ್ನಡ ಸಾರಸ್ವತ ಲೋಕದ ಪ್ರಮುಖ ಧ್ರುವತಾರೆಗಳಲ್ಲಿ ಒಬ್ಬರು, ಜಿ.ಪಿ.ರಾಜರತ್ನಂ. ತಮ್ಮ ಅಮೂಲ್ಯ ಸಂಶೋಧನಾ ಕೃತಿಗಳು, ವಿಶಿಷ್ಟ ಪದಗಳು, ವಿಚಾರ ಪೂರಿತ ಉಪನ್ಯಾಸ ಗಳು, ಚಿಂತನೆಗಳು, ಕನ್ನಡ ಪರಿಚಾರಿಕೆ ಮುಂತಾದುವು ಗಳಿಂದಾಗಿ ಈ ನಾಡಿನಲ್ಲಿ ತಮ್ಮದೇ ಆದ ಛಾಪನ್ನು ಮೂಡಿಸಿರುವ ಜಿ.ಪಿ.ರಾಜರತ್ನಂ ಜನಿಸಿದ್ದು 1908ರ ಡಿಸೆಂಬರ್ 5 ರಂದು.

ಬೆಳೆಯ ಸಿರಿ ಮೊಳಕೆಯಲ್ಲಿಯೇ ತಿಳಿಯುತ್ತದೆ ಎನ್ನುವ ಹಾಗೆ ಬಾಲ್ಯ ಜೀವನದಲ್ಲಿಯೇ ಇವರ ಅಸಾಧಾರಣ ಪ್ರತಿಭೆಯನ್ನು ಕಾಣಬಹುದಾಗಿದೆ. ಇವರು ಹುಟ್ಟಿದ್ದು ಕ್ಲೋಸ್‌ಪೇಟೆ ಅಥವ ರಾಮನಗರದಲ್ಲಿ. ಇವರ ತಂದೆ ಜಿ.ಪಿ.ಗೋಪಾಲಕೃಷ್ಣ ಅಯ್ಯಂಗಾರ್. ತಾಯಿ ಕೊಳ್ಳೆಗಾಲದವರು. ಚಿಕ್ಕಂದಿನಲ್ಲಿಯೇ ಮಾತೃ ವಿಯೋಗವನ್ನು ಅನುಭವಿಸಿದ ಇವರ ಬಾಲ್ಯ ಅಜ್ಜಿಯ ಆಸರೆಯಲ್ಲಿ ಕಳೆಯಿತು. ತಂದೆ ಮಗನಿಗೆ ರಾಜಯ್ಯಂಗಾರ್ ಎಂದು ಹೆಸರಿಟ್ಟು, ಪ್ರೀತಿಯಿಂದ ರಾಜ ಎಂದು ಕರೆಯುತ್ತಿದ್ದರು. ಅಜ್ಜಿ ಮೊಮ್ಮಗನನ್ನು ಅಕ್ಕರೆಯಿಂದ ಬೆಳೆಸಿ ಮೈಸೂರಿನಲ್ಲಿ ವಿದ್ಯಾಭ್ಯಾಸಕ್ಕೆಂದು ಕರೆತಂದರು. ತಂದೆ, ಆಗ ಬನುಮಯ್ಯ ಪ್ರೌಢ ಶಾಲೆಯಲ್ಲಿ ಅಧ್ಯಾಪಕರಾಗಿದ್ದರು. ತಮ್ಮ ಮಗನ ಶಿಕ್ಷಣದ ಬಗ್ಗೆಯೂ ಹೆಚ್ಚು ಆಸಕ್ತಿ ವಹಿಸಿದ ಇವರು ತಮ್ಮ ಶಾಲೆಯಲ್ಲಿಯೇ ತಾವು ಹೋಗುವ ಎಲ್ಲಾ ತರಗತಿಗಳಿಗೂ ಕರೆದುಕೊಂಡು ಹೋಗಿ ಪಕ್ಕದಲ್ಲೇ ಕೂರಿಸಿಕೊಳ್ಳುತ್ತಿದ್ದರು. ಹೀಗಾಗಿ ಈ ವಯಸ್ಸಿಗೆ ತರಗತಿಯ ವಾತಾವರಣ ಬಾಲಕನ ಮನಸ್ಸಿಗೆ ಹಿಡಿಸಿತು. ಅಲ್ಲದೆ ತಾವೇ ಸ್ವತಃ ಸರ್ವಜ್ಞನ ವಚನಗಳು, ನಾಗಚಂದ್ರನ ಪದ್ಯ, ಸೋಮೇಶ್ವರ ಶತಕ, ಚೂಡಾರತ್ನ ಮೊದಲಾದ ಕೃತಿಗಳಿಂದ ಆಯ್ದ ಭಾಗಗಳನ್ನು ಕ್ರಮಬದ್ಧವಾಗಿ ಹಾಡುವುದನ್ನು ಮಗನಿಗೆ ಕಲಿಸಿಕೊಟ್ಟರು. ಅಮರಕೋಶವನ್ನು ಬಾಯಿಪಾಠ ಮಾಡಿಸಿದರು. ಹೀಗಾಗಿ ರಾಜ ಕ್ಲಿಷ್ಟ ಪದಗಳ ಸ್ಪಷ್ಟ ಉಚ್ಚಾರಣೆಯನ್ನು, ಕಾವ್ಯವನ್ನು ಸುಶ್ರಾವ್ಯವಾಗಿ ಹಾಡುವುದನ್ನು ಕಲಿಯಲು ಸಾಧ್ಯವಾಯಿತು.

ಹೀಗೆ, ಮನೆಯೇ ಮೊದಲ ಪಾಠಶಾಲೆಯಾಗಿ, ತಂದೆಯನ್ನೇ ಮೊದಲ ಗುರುವಾಗಿ ಪಡೆದ ರಾಜ ಸೂಕ್ಷ್ಮಮತಿಯು, ಬುದ್ಧಿವಂತನೂ ಆಗಿದ್ದರಿಂದ ಇಂಗ್ಲಿಷ್ ಭಾಷೆಯೂ ಸೇರಿದಂತೆ ಎಲ್ಲ ವಿಷಯಗಳನ್ನು ಚೆನ್ನಾಗಿಯೇ ತಿಳಿದುಕೊಂಡಿದ್ದ. ಇದರಿಂದಾಗಿ ರಾಜನನ್ನು ತಂದೆ ನೇರವಾಗಿ ಲೋಯರ್ ಸೆಕೆಂಡರಿ ತರಗತಿಗೇ ಸೇರಿಸಿದರು. ಇಲ್ಲಿ ಬೇರೆ ಬೇರೆ ಗುರುಗಳು, ಹೆಚ್ಚಿನ ಪಠ್ಯ ವಿಷಯ, ಜೊತೆಯಲ್ಲಿ ಗೆಳೆಯರು, ಹೀಗೆ ಬಾಲಕ ರಾಜನ ತಿಳುವಳಿಕೆಯ ವ್ಯಾಪ್ತಿ ವಿಶಾಲವಾಯಿತು. ಆ ವೇಳೆಗಾಗಲೇ ಇತರ ಸಾಮಾನ್ಯ ವಿದ್ಯಾರ್ಥಿಗಳಿಗಿಂತ ಹೆಚ್ಚು ಜ್ಞಾನವನ್ನು ಪಡೆದಿದ್ದರಿಂದ ಸಹಜವಾಗಿಯೇ ಎಲ್ಲ ಉಪಾಧ್ಯಾಯರ ಗಮನವನ್ನು ಸೆಳೆದ.

ಇಂಗ್ಲಿಷ್ ಉಪಾಧ್ಯಾಯರು ರಾಜ ಮತ್ತು ಆತನ ಸಂಗಡಿಗರನ್ನು ಮೆಚ್ಚಿಕೊಂಡಿದ್ದರೂ ಒಮ್ಮೆ **ಆಹಾ! ರತ್ನಗಳು, ಮುಂಡೇವು ರತ್ನಗಳು..!!** ಎಂದು ವ್ಯಂಗ್ಯವಾಗಿ ನುಡಿದರಂತೆ. ಇದು ರಾಜನ ಮನಸ್ಸಿಗೆ ನಾಟಿ, ಥಟ್ಟನೆ ವಿಚಾರವೊಂದು ಹೊಳೆದು, ಶಾಲೆಯ ಗುಮಾಸ್ತರ ಬಳಿಗೆ ನಡೆದ. ಅವರಿಗೂ ರಾಜನ ಬಗ್ಗೆ ಗೊತ್ತಿತ್ತು. ಅವರನ್ನು ಹಾಜರಾತಿ ಪುಸ್ತಕದಲ್ಲಿ ಜಿ.ಪಿರಾಜಯ್ಯಂಗಾರ್ ಎಂದಿರುವ ತನ್ನ ಹೆಸರನ್ನು ಜಿ.ಪಿ.ರಾಜರತ್ನಂ ಅಯ್ಯಂಗಾರ್ ಎಂದು ಬದಲಿಸಿಕೊಡುವಂತೆ ವಿನಂತಿಸಿಕೊಂಡ. ಅವರೂ ಅದಕೊಪ್ಪಿದರು.

ಇವರನ್ನು ರತ್ನಗಳು ಎಂದು ಕರೆದಿದ್ದ ಮಾಸ್ತರು, ಹೆಸರುಗಳನ್ನು ಕೂಗುವಾಗ ವಾಡಿಕೆಯಂತೆ ರಾಜಯ್ಯಂಗಾರ್ ಎಂದರೂ ಉತ್ತರ ಬಾರದಿದ್ದಾಗ ತರಗತಿಯಲ್ಲಿ ಕುಳಿತಿದ್ದರೂ ಪ್ರತಿಕ್ರಿಯೆ ನೀಡದ ರಾಜನನ್ನು ಗದರಿದರು. ಆಗ ರಾಜ **"ನನ್ನ ಹೆಸರು ಜಿ.ಪಿ.ರಾಜರತ್ನಂ ಅಯ್ಯಂಗಾರ್"** ಎಂದಾಗ ವಿದ್ಯಾರ್ಥಿಗಳೆಲ್ಲಾ ನಕ್ಕುಬಿಟ್ಟರು. ಪರಿಸ್ಥಿತಿಯನ್ನು ಹೇಗೋ ನಿಭಾಯಿಸಿದ ಉಪಾಧ್ಯಾಯರು, ಮುಖ್ಯೋಪಾಧ್ಯಾಯರಲ್ಲಿ ಈ ವಿಷಯವನ್ನು ತಿಳಿಸಿದರು. ಅವರು ಬಂದು ಒಂದೆರಡು ಏಟು ಹಾಕಿದರಾದರೂ ಹೆಸರನ್ನೇನು ಬದಲಿಸಲು ಹೇಳಲಿಲ್ಲ. ಮುಂದೆ ಬಂದ ಇನ್ನೊಬ್ಬ ಆಂಗ್ಲ ಉಪಾಧ್ಯಾಯರು ರಾಜನ ಹೆಸರು ಉದ್ದವಾಯಿತೆಂದು ಅದನ್ನು ಮೊಟಕು ಮಾಡಿ **ಜಿ.ಪಿ.ರಾಜರತ್ನಂ** ಎಂದು ಕೂಗತೊಡಗಿದರು. ಆ ಹೆಸರೇ ಮುಂದೆ ಕನ್ನಡ ನಾಡಿನ ಮನೆ ಮನೆಗಳಲ್ಲಿ ಚಿರಪರಿಚಿತವಾಯಿತು.

ತಮ್ಮ ಶಿಕ್ಷಣದ ಈ ಹಂತದಲ್ಲಿರುವಾಗಲೇ ರಾಜರತ್ನಂ ನಾಟಕದ ಹಾಡುಗಳನ್ನು ಸುಶ್ರಾವ್ಯವಾಗಿ ಹಾಡುವುದನ್ನು ಕಲಿತಿದ್ದರು. ಇದನ್ನು ಗಮನಿಸಿದ ಇವರ ತಂದೆಯ ಮಿತ್ರರೊಬ್ಬರು ತಂದೆ ಮಗ ಇಬ್ಬರನ್ನೂ, ಆಗ ಪ್ರಸಿದ್ಧರಾಗಿದ್ದ ವರದಾಚಾರ್ಯರ ಬಳಿಗೆ ಕರೆದುಕೊಂಡು ಹೋಗಿ ರಾಜರತ್ನಂ ಅವರ ಪ್ರತಿಭೆಯ ಬಗ್ಗೆ ತಿಳಿಸಿ, ತಮ್ಮ ಕಂಪನಿಗೆ ಸೇರಿಸಿಕೊಳ್ಳುವಂತೆ ತಿಳಿಸಿದರು. ವರದಾಚಾರ್ಯರು ಬಾಲಕನು ಹಾಡಿದ ಹಾಡನ್ನು ಕೇಳಿ ಸಂತೋಷಪಟ್ಟರಾದರೂ ಈಗಲೇ ನಾಟಕದ ಕಂಪನಿಗೆ ಸೇರಿದರೆ ಬುದ್ಧಿವಂತನಾಗಿರುವ ಈತನ ವಿದ್ಯಾಭ್ಯಾಸಕ್ಕೆ ತೊಂದರೆಯಾಗುತ್ತದೆ. ಶಿಕ್ಷಣವನ್ನು ಮುಂದುವರೆಸಲಿ. ಶಾಲೆಯ ನಾಟಕಗಳಲ್ಲಿ ಹೆಚ್ಚಾಗಿ ಭಾಗವಹಿಸಲಿ, ತಮ್ಮ ನಾಟಕಗಳನ್ನು ನೋಡಲು ಉಚಿತ ಅವಕಾಶ ನೀಡುತ್ತೇನೆ ಎಂದು ತಿಳಿಸಿದರು. ಅದರಂತೆ ರಾಜರತ್ನಂ ಮುಂದೆ ತಮ್ಮ ಶಾಲಾ ಕಾಲೇಜು ದಿನಗಳಲ್ಲಿ ಅಂತಹ ಕಾರ್ಯಕ್ರಮಗಳಲ್ಲಿ ಹೆಚ್ಚಾಗಿ ಪಾಲ್ಗೊಂಡು ಎಲ್ಲರಿಗೂ ತಮ್ಮ ಅಸಾಧಾರಣ ಪ್ರತಿಭೆಯಿಂದಾಗಿ ಅಚ್ಚುಮೆಚ್ಚಿನವರಾಗಿದ್ದರು.

ಹೀಗೆ, ಜೀವನದ ಉದ್ದಕ್ಕೂ **ಏಳು ಬೀಳು** ಗಳನ್ನು ಸಮಚಿತ್ತರಾಗಿ ಸ್ವೀಕರಿಸುತ್ತಾ ಸಾಹಿತ್ಯ ವಲಯದಲ್ಲೂ ತಮ್ಮ ಛಾಪು ಮೂಡಿ ಸುತ್ತ ಎಪ್ಪತ್ತು ವರ್ಷಗಳ ತುಂಬು ಜೀವನವನ್ನು ನಡೆಸಿ **ಜಿ.ಪಿ.ರಾಜರತ್ನಂ** 1979ರಲ್ಲಿ ದೈವಾಧೀನರಾದರು.

**ಮುನ್ನುಡಿ :**

# ತತ್ತ್ವಬೋಧಃ

ಸ್ವಾಮಿ ಶಿವಪ್ರಕಾಶಾನಂದ ಸರಸ್ವತಿ

**ಉಪರತಿಃ ಕಾ? ಪ್ರಪಂಚೇಭ್ಯ ಉಪರಮಣಮ್।**

**ಅನುವಾದ: ಉಪರತಿ ಎಂದರೇನು? ಪ್ರಪಂಚದಿಂದ ವಿಮುಖನಾಗುವುದು.**

**ವಿವರಣೆ:** ಉಪರತಿ ಅಥವಾ ಉಪರಮ ಎಂದರೆ ಪ್ರಪಂಚ ದಿಂದ ವಿಮುಖನಾಗಿರುವುದು. ಪ್ರಾಪಂಚಿಕ ವ್ಯವಹಾರಗಳಲ್ಲಿ ತೊಡಗಿದವನಿಗೆ ವೇದಾಂತ ಚಿಂತನೆಯಲ್ಲಿ ಮನಸ್ಸನ್ನಿರಿಸುವುದು ಕಷ್ಟಕರವಾಗುತ್ತದೆ. ಹಾಗಾಗಿ ವೇದಾಂತದ ಜಿಜ್ಞಾಸುವು ಬಾಹ್ಯ ವ್ಯವಹಾರಗಳಿಂದ ಹಾಗೂ ಬಾಹ್ಯ ವಿಷಯಗಳ ಚಿಂತೆಯಿಂದ ಆದಷ್ಟು ವಿಮುಖನಾಗಿದ್ದು ಮೋಕ್ಷಸಾಧನೆಯಲ್ಲಿ ತನ್ನನ್ನು ನಿರಂತರವಾಗಿ ತೊಡಗಿಸುವಂತಿರಬೇಕು. ಆಗಲೇ ಸಫಲವಾದ ವೇದಾಂತವಿಚಾರವು ಸಾಧ್ಯವಾಗುತ್ತದೆ.

**'ಉಪರತಿಃ ಕಾ'** ಎನ್ನುವುದರ ಬದಲಾಗಿ ಕೆಲವು ಕಡೆ ಕಾಣಸಿಗುವ **'ಉಪರಮಃ ಕಃ'** ಎನ್ನುವ ಪಾಠವೂ ಸರಿ. **'ಪ್ರಪಂಚೇಭ್ಯ ಉಪರಮಣಮ್'** ಎನ್ನುವುದರ ಬದಲಾಗಿ **'ಸ್ವಧರ್ಮಾನುಷ್ಠಾನಮೇವ'** ಎನ್ನುವ ಪಾಠವು ಕೆಲವೆಡೆ ಸಿಗುತ್ತದೆ. ಉಪರತಿ ಎಂದರೆ ಸ್ವಧರ್ಮದ ಅನುಷ್ಠಾನ ಎಂದು ಕೆಲವರ ಮತ ವಿರಬಹುದು. ಆದರೆ ಸ್ವಧರ್ಮದ ಅನುಷ್ಠಾನವೇ ಸಾಧನ ಚತುಷ್ಟಯರೂಪವಾದ ಅಧಿಕಾರಿತ್ವದ ಪ್ರಾಪ್ತಿಗೆ ಕಾರಣ ವಾಗಿರುತ್ತದೆ. ಹಾಗಾಗಿ ಸ್ವಧರ್ಮಾನುಷ್ಠಾನವನ್ನು ಸಾಧನ ಚತುಷ್ಟಯದಲ್ಲಿ ಒಂದಾದ ಶಮಾದಿಗಳಲ್ಲಿ ಪರಿಗಣಿಸುವುದು ಅಷ್ಟು ಸೂಕ್ತವಲ್ಲ ಎಂದು ತಿಳಿಯಬಹುದಾದ್ದರಿಂದ ಇಲ್ಲಿ ಆ ಪಾಠವನ್ನು ತೆಗೆದುಕೊಳ್ಳಲಿಲ್ಲ.

**ತಿತಿಕ್ಷಾ ಕಾ? ಶೀತೋಷ್ಣಸುಖದುಃಖಾದಿಸಹಿಷ್ಣುತ್ವಮ್।**

**ಅನುವಾದ: ತಿತಿಕ್ಷೆ ಏನು? ಶೀತ, ಉಷ್ಣ, ಸುಖ, ದುಃಖ ಇತ್ಯಾದಿಗಳನ್ನು ಸಹಿಸುವುದು.**

**ವಿವರಣೆ:** ತಿತಿಕ್ಷೆ ಎಂದರೆ ಸಹನೆ. ಜೀವನದಲ್ಲಿ ಹಲವಾರು ಕಷ್ಟಗಳು ಬರುತ್ತಲೇ ಇರುತ್ತವೆ. ಈ ಎಲ್ಲ ಕಷ್ಟಗಳಿಗೆ ಪರಿಹಾರ ಗಳನ್ನು ಹುಡುಕುತ್ತಲೇ ಇದ್ದರೆ ಜೀವನದಲ್ಲಿ ಬೇರೆ ಏನನ್ನೂ ಸಾಧಿಸಲು ಸಾಧ್ಯವಿಲ್ಲ. ಹಾಗಾಗಿ ಸಾಧಕನು ಶೀತೋಷ್ಣಾದಿಗಳನ್ನು ಸಹಿಸಿಕೊಳ್ಳಲು ಕಲಿತುಕೊಳ್ಳಬೇಕು. ಶೀತೋಷ್ಣಾದಿ ಸಮಸ್ಯೆಗಳಿಂದ ಕೂಡಲೇ ವ್ಯಾಕುಲನಾಗುವವನು ವೇದಾಂತ ವಿಚಾರದಲ್ಲಿ ತೊಡಗುವುದು ಕಷ್ಟ. ಶೀತ–ಉಷ್ಣ, ಮಾನ–ಅಪಮಾನ, ನಿಂದೆ–ಸ್ತುತಿ, ಗೆಲುವು–ಸೋಲು ಇತ್ಯಾದಿ ದ್ವಂದ್ವಗಳನ್ನು ಮಾನಸಿಕ ವ್ಯಥೆಯಿಲ್ಲದೆ ಸಹಿಸಿಕೊಳ್ಳುವ ಸಾಧಕನೇ ಮೋಕ್ಷಸಾಧನೆಗೆ ಯೋಗ್ಯನು.

**ಶ್ರದ್ಧಾ ಕೀದೃಶೀ? ಗುರುವೇದಾಂತವಾಕ್ಯೇಷು ವಿಶ್ವಾಸಃ ಶ್ರದ್ಧಾ।**

**ಅನುವಾದ : ಶ್ರದ್ಧೆ ಎಂತಹದು? ಗುರುವೇದಾಂತವಾಕ್ಯಗಳಲ್ಲಿ ವಿಶ್ವಾಸವು ಶ್ರದ್ಧೆ.**

**ವಿವರಣೆ :** ಯಾವುದೇ ಒಂದು ವಸ್ತುವನ್ನು ತಿಳಿಯಲು ಸೂಕ್ತವಾದ ಪ್ರಮಾಣವು ಆವಶ್ಯಕ. ಉದಾಹರಣೆಗೆ ಒಂದು ಹೂವಿನ ಬಣ್ಣವನ್ನು ತಿಳಿಯಲು ಕಣ್ಣು ಅಥವಾ ಚಕ್ಷುರಿಂದ್ರಿಯ ಪ್ರಮಾಣ. ಕಣ್ಣಿಲ್ಲದವನು ಬಣ್ಣವನ್ನು ತಿಳಿಯಲು ಸಾಧ್ಯವಿಲ್ಲ. ಅದೇ ರೀತಿ ಆ ಹೂವಿನ ಪರಿಮಳವನ್ನು ತಿಳಿಯಲು ಘ್ರಾಣೇಂದ್ರಿಯ ಪ್ರಮಾಣ. ಅದೇ ರೀತಿ ಪರಮಾತ್ಮನನ್ನು ತಿಳಿಯಲು ವೇದಾಂತ ವಾಕ್ಯವೇ ಪ್ರಮಾಣವಾಗಿದೆ. ಹಾಗಾಗಿ ವೇದಾಂತವಾಕ್ಯಗಳು ಪ್ರಮಾಣ ಎನ್ನುವ ವಿಶ್ವಾಸವೇ ಶ್ರದ್ಧೆ. ಈ ವೇದಾಂತ ವಾಕ್ಯಗಳನ್ನು ಸ್ವತಃ ಓದಿ ತಿಳಿಯುವುದು ಸಾಧ್ಯವಿಲ್ಲ. ಗುರುವಿನ ಉಪದೇಶದಿಂದಲೇ ವೇದಾಂತದ ರಹಸ್ಯವನ್ನು ತಿಳಿಯಬಹುದು. ಹಾಗಾಗಿ ಮುಮುಕ್ಷುವು ಯೋಗ್ಯನಾದ ಗುರು ಉಪದೇಶಿಸುವ ವೇದಾಂತ ವಾಕ್ಯಗಳಲ್ಲಿ ಶ್ರದ್ಧೆಯನ್ನು ಹೊಂದಿರಬೇಕು.

**ಸಮಾಧಾನಂ ಕಿಮ್? ಚಿತ್ತೈಕಾಗ್ರತಾ।**

**ಅನುವಾದ: ಸಮಾಧಾನ ಏನು? ಚಿತ್ತದ ಏಕಾಗ್ರತೆ.**

**ವಿವರಣೆ:** ಯಾವುದೇ ಒಂದು ಕಾರ್ಯವನ್ನು ಅಚ್ಚುಕಟ್ಟಾಗಿ ನೆರವೇರಿಸಬೇಕಿದ್ದರೆ ಮನಸ್ಸಿನ ಏಕಾಗ್ರತೆ ಅತ್ಯಾವಶ್ಯಕ. ಬಾಹ್ಯವಸ್ತುಗಳಲ್ಲಿ ಮನಸ್ಸನ್ನು ಏಕಾಗ್ರಗೊಳಿಸವುದು ಸುಲಭ. ಆದರೆ ಸೂಕ್ಷ್ಮವಾದ ಆಧ್ಯಾತ್ಮಿಕ ವಿಷಯಗಳಲ್ಲಿ ಚಿತ್ತವನ್ನು ಏಕಾಗ್ರ ಗೊಳಿಸುವುದು ಅಷ್ಟು ಸುಲಭವಲ್ಲ. ಅಂತಹ ಏಕಾಗ್ರತೆಯನ್ನು ವಿಶಿಷ್ಟವಾದ ಸಾಧನೆಗಳನ್ನು ಮಾಡಿ ಪಡೆದುಕೊಳ್ಳಬೇಕು.

ಚಿತ್ತ ಅಥವಾ ಮನಸ್ಸು ಎಂದರೆ ಅಂತಃಕರಣ. ನಮ್ಮ ಎಲ್ಲಾ ಯೋಚನೆಗಳು, ಭಾವನೆಗಳು ಹಾಗೂ ತಿಳುವಳಿಕೆಗಳು ಅಂತಃಕರಣದಲ್ಲಿ ಉಂಟಾಗುವ ವೃತ್ತಿಗಳೇ ಆಗಿರುತ್ತವೆ. ಸಮುದ್ರದಲ್ಲಿನ ಅಲೆಗಳಂತೆ ಅಂತಃಕರಣದಲ್ಲಿ ನಿರಂತರವಾಗಿ ವೃತ್ತಿಗಳು ಉಂಟಾಗಿ ಲಯವಾಗುತ್ತಿರುತ್ತವೆ. ಸಾಮಾನ್ಯವಾಗಿ ಒಂದು ಅಂತಃಕರಣದಲ್ಲಿ ಏಕರೂಪವಾದ ವೃತ್ತಿಗಳು ಹೆಚ್ಚು ಹೊತ್ತು ಇರುವುದಿಲ್ಲ. ಆದರೆ ಒಂದು ಏಕಾಗ್ರವಾದ ಅಂತಃಕರಣದಲ್ಲಿ ಏಕರೂಪವಾದ ವೃತ್ತಿಗಳು ದೀರ್ಘಕಾಲದವರೆಗೆ ಉಂಟಾಗುತ್ತಿರುತ್ತವೆ. ಉದಾಹರಣೆಗೆ ಮುಂದಿರುವ ಪರ್ವತದಲ್ಲಿ ಅಂತಃಕರಣವನ್ನ ಏಕಾಗ್ರಗೊಳಿಸಿದರೆ ಪರ್ವತಕ್ಕೆ ಸಂಬಂಧಿಸಿದ ವೃತ್ತಿಗಳೇ ನಿರಂತರವಾಗಿ ಹರಿಯುತ್ತಿರುತ್ತವೆ. ಇದು ಅಂತಃಕರಣದ ಏಕಾಗ್ರತೆ. ಇಂತಹ ಏಕಾಗ್ರವಾದ ಮನಸ್ಸುಳ್ಳವನು ಮಾತ್ರ ಸೂಕ್ಷ್ಮವಾದ ವಸ್ತುಗಳನ್ನು ಸರಿಯಾಗಿ ತಿಳಿಯಬಲ್ಲನು. ಈ ಏಕಾಗ್ರತೆಯನ್ನ ಧ್ಯಾನಾದಿ ಸಾಧನೆಗಳ ಮೂಲಕ ಬೆಳೆಸಿಕೊಳ್ಳ

ಬಹುದು. ಏಕಾಗ್ರವಾದ ಅಂತಃಕರಣವು ಆತ್ಮಜ್ಞಾನಕ್ಕೆ ಸಾಧನವಾಗಿರುತ್ತದೆ.

**ಮುಮುಕ್ಷುತ್ವಂ ಕಿಮ್? ಮೋಕ್ಷೋ ಮೇ ಭೂಯಾದಿತೀಚ್ಛಾ।**

**ಅನುವಾದ : ಮುಮುಕ್ಷುತ್ವ ಏನು? ನನಗೆ ಮೋಕ್ಷವಾಗಲಿ ಎನ್ನುವ ಇಚ್ಛೆ।**

**ವಿವರಣೆ :** ಧರ್ಮ, ಅರ್ಥ, ಕಾಮ ಹಾಗೂ ಮೋಕ್ಷ ಎನ್ನುವ ನಾಲ್ಕು ಪುರುಷಾರ್ಥಗಳಲ್ಲಿ ಮೋಕ್ಷವೇ ಪರಮ ಪುರುಷಾರ್ಥವು. ಸಾಮಾನ್ಯವಾಗಿ ಎಲ್ಲರೂ ಅರ್ಥ ಹಾಗೂ ಕಾಮ ಪುರುಷಾರ್ಥ ಗಳನ್ನು ಬಯಸುವವರೇ ಆಗಿರುತ್ತಾರೆ. ಆಸ್ತಿಕರಾದ ಕೆಲವರು ನಾನು ಯಜ್ಞ, ದಾನ, ತಪಸ್ಸು ಇತ್ಯಾದಿಗಳನ್ನು ಮಾಡಿ ಪುಣ್ಯ ಗಳಿಸಬೇಕು ಎನ್ನುತ್ತಾರೆ. ಇದು ಧರ್ಮ ಪುರುಷಾರ್ಥ. ಧರ್ಮವು ಅರ್ಥ ಹಾಗೂ ಕಾಮ ಪುರುಷಾರ್ಥಗಳಿಂದ ಶ್ರೇಷ್ಠವಾಗಿದೆ. ಯಾಕೆಂದರೆ ಧರ್ಮವು ಮನುಷ್ಯನನ್ನು ಪಶುಗಳಿಂದ ವಿಶಿಷ್ಟ ರನ್ನಾಗಿಸುತ್ತದೆ ಹಾಗೂ ಇಹಲೋಕ ಹಾಗೂ ಪರಲೋಕಗಳಲ್ಲಿ ಸುಖಕ್ಕೆ ಕಾರಣವಾಗುತ್ತದೆ. ಮೋಕ್ಷವು ಶಾಶ್ವತ ಸುಖಪ್ರಾಪ್ತಿ ಹಾಗೂ ಶಾಂತಿಯ ರೂಪವಾದ್ದರಿಂದ ಅದು ಉಳಿದ ಮೂರೂ ಪುರುಷಾರ್ಥಗಳಿಂದ ಶ್ರೇಷ್ಠವೆನಿಸಿಕೊಳ್ಳುತ್ತದೆ. ಇಂತಹ ಮೋಕ್ಷವನ್ನು ಪಡೆದುಕೊಳ್ಳಬೇಕು ಎನ್ನುವ ಇಚ್ಛೆಯನ್ನು ಮುಮುಕ್ಷುತ್ವ ಎನ್ನುವರು.

**ಏತತ್ ಸಾಧನಚತುಷ್ಟಯಮ್। ತತಸ್ತತ್ತ್ವವಿವೇಕಸ್ಯಾಧಿಕಾರಿಣೋ ಭವನ್ತಿ।**

**ಅನುವಾದ : ಇದು ಸಾಧನಚತುಷ್ಟಯ. ಅದರಿಂದ ತತ್ತ್ವವಿವೇಕದ ಅಧಿಕಾರಿಗಳಾಗುತ್ತಾರೆ.**

**ವಿವರಣೆ :** ಸಾಧನಚತುಷ್ಟಯವುಳ್ಳವನು ತತ್ತ್ವವಿವೇಕಕ್ಕೆ ಅಧಿಕಾರಿ ಯಾಗುತ್ತಾನೆ. ಅಧಿಕಾರಿಯಲ್ಲದವನು ತತ್ತ್ವಜ್ಞಾನವನ್ನು ಪಡೆಯಲು ಪ್ರಯತ್ನಿಸಿದರೂ ಅದರಲ್ಲಿ ಸಫಲನಾಗಲಾರನು. ಹೇಗೆ ಫಲವತ್ತಾದ ಭೂಮಿಯಲ್ಲಿ ಬಿತ್ತಿದ ಬೀಜವು ಬೆಳೆದು ಉತ್ತಮ ಫಲವನ್ನು ಕೊಡುವುದೋ, ಹಾಗೆಯೇ ಅಧಿಕಾರಿಯಾದವನು ಮಾಡಿದ ವೇದಾಂತವಿಚಾರವು ಮಾತ್ರ ಮೋಕ್ಷಫಲವನ್ನು ಕೊಡಬಲ್ಲದು. ಹಾಗಾಗಿ ಸಂಸಾರದಿಂದ ಮುಕ್ತಿಯನ್ನು ಬಯಸುವವನು ಪ್ರಪ್ರಥಮ ವಾಗಿ ಸಾಧನಚತುಷ್ಟಯವನ್ನು ಬೆಳೆಸಿಕೊಂಡು ತತ್ತ್ವಜ್ಞಾನದ ಅಧಿಕಾರಿಯಗಲು ಪ್ರಯತ್ನಿಸಬೇಕು.

ಸಾಧನಚತುಷ್ಟಯಗಳನ್ನು ಹೇಗೆ ಗಳಿಸಿಕೊಳ್ಳಬೇಕು ಎಂಬುದನ್ನು ಈ ಗ್ರಂಥದಲ್ಲಿ ತಿಳಿಸಲಿಲ್ಲ. ಅದನ್ನು ಬೇರೆ ಗ್ರಂಥ ಗಳಿಂದ ತಿಳಿದುಕೊಳ್ಳಬಹುದು. ಈಶ್ವರಾರ್ಪಣಬುದ್ಧಿಯಿಂದ ಯಜ್ಞ ದಾನ ಹಾಗೂ ತಪಸ್ಸು ಇತ್ಯಾದಿ ಸ್ವಧರ್ಮಗಳ ಅನುಷ್ಠಾನ ಮಾಡುವುದು ಚಿತ್ತಶುದ್ಧಿಯ ಸಾಧನ ಎಂಬುದನ್ನು ಭಗವದ್ಗೀತೆ ಇತ್ಯಾದಿ ಗ್ರಂಥಗಳು ಸಾರುತ್ತವೆ. ಚಿತ್ತವು ಶುದ್ಧವಾದಾಗ ವಿವೇಕ, ವೈರಾಗ್ಯ ಇತ್ಯಾದಿಗಳು ಮನಸ್ಸಿನಲ್ಲಿ ಮೂಡಿಕೊಳ್ಳುತ್ತವೆ.

ಜಾಹಿರಾತು

## ಶ್ರೀ ವಾದಿರಾಜ ವಿಜಯ ಧಾರ್ಮಿಕ ಮಂದಿರ

**# 124, 2ನೇ ಮುಖ್ಯರಸ್ತೆ, ಶ್ರೀ ಮಂಜುನಾಥ ದೇವಸ್ಥಾನದ ಎದುರು, ಸೀತಾ ಸರ್ಕಲ್, ಬ್ಯಾಂಕ್ ಕಾಲೋನಿ, ಬೆಂಗಳೂರು–560 050.**

## ಸ್ಥಳದ ಬಾಡಿಗೆ ಇರುವುದಿಲ್ಲ

**ಉಪನಯನ, ಸೀಮಂತ, ನಾಮಕರಣ, ಹುಟ್ಟುಹಬ್ಬ, ಹೋಮಹವನ, ಸತ್ಯನಾರಾಯಣ ಪೂಜೆ, ಇನ್ನಿತರ ದೇವತಾ ಕಾರ್ಯಗಳು, ವೈಕುಂಠ ಸಮಾರಾಧನೆ ಪ್ರಯುಕ್ತ ಅನ್ನದಾನಾದಿಗಳನ್ನು ಹಾಗೂ ಸಂಜೆ ಕಾರ್ಯಕ್ರಮಗಳನ್ನು ಇತರ ಶುಭ ಧಾರ್ಮಿಕ ಕಾರ್ಯಕ್ರಮಗಳನ್ನು ಮಾಡಬಹುದಾಗಿದೆ.**

**ಅಡಿಗೆಯನ್ನು ಮಡಿಯಲ್ಲಿ ಮಾಡಲಾಗುವುದು.**

**ವಿವರಗಳಿಗೆ ಕಾರ್ಯಾಲಯವನ್ನು ಸಂಪರ್ಕಿಸಿ :**


**ದೂರವಾಣಿ : 080–26793054 ಮೊಬೈಲ್ 8277433666**

## ತತ್ತ್ವಮಸಿ ಸಂಸ್ಥೆ – ವೇದ ಕಲಿಕೆಗೆ ಸದವಕಾಶ

ವೇದ, ಉಪನಿಷತ್ತುಗಳು, ಭಗವದ್ಗೀತೆ ಮೊದಲಾದ ಆರ್ಷಜ್ಞಾನರಾಶಿಯನ್ನು ಗುರುಕುಲಪದ್ಧತಿಯಲ್ಲಿ ಸಾಮಾನ್ಯ ಜನರಿಗೆ ತಲುಪಿಸುತ್ತಿರುವ ಸಂಸ್ಥೆ ತತ್ತ್ವಮಸಿ. ಕಳೆದ 10 ವರ್ಷಗಳಿಂದ ಬೆಂಗಳೂರು ಮತ್ತು ಇತರ 12 ದೇಶಗಳಲ್ಲಿ ಪಾಠ ಪ್ರವಚನವನ್ನು ನಡೆಸಲಾಗುತ್ತಿದೆ. ಅಂತರ್ಜಾಲ ಮಾಧ್ಯಮದ ಮೂಲಕ 1400 ಕ್ಕೂ ಹೆಚ್ಚಿನ ಜಿಜ್ಞಾಸುಗಳಿಗೆ ಭಾರತೀಯ ಜ್ಞಾನರಾಶಿಯನ್ನು ಪಸರಿಸುವಲ್ಲಿ ಯಶಸ್ವಿಯಾಗಿದೆ ತತ್ತ್ವಮಸಿ ಸಂಸ್ಥೆ.

* ಬಾಲ್ಯದಲ್ಲಿ ವೇದಗಳನ್ನು ಸಂಸ್ಕೃತವನ್ನು ಕಲಿಯಲು ಸಾಧ್ಯವಾಗದಿರುವ ಆಸಕ್ತರು ತಮ್ಮ ವಯೋಮಾನವಕ್ಕೆ ಅನುಸಾರವಾಗಿ ಸರಳವಾಗಿ ಪಾಠ ಪ್ರವಚನಗಳನ್ನು ಪಡೆಯಬಹುದಾಗಿದೆ.







* ನಮ್ಮ ಮಕ್ಕಳಿಗೆ ಭಾರತೀಯ ಸಂಸ್ಕೃತಿಯ ಶಿಕ್ಷಣಕ್ಕಾಗಿ ಆಶ್ರಮ ಅಥವಾ ದೂರದ ಪಾಠಶಾಲೆಗಳಿಗೆ ಕಳಿಹಿಸುವ ಬದಲಾಗಿ ಆಧುನಿಕ ಕಲಿಕೆಯ ಜೊತೆಜೊತೆಗೆ ಆರ್ಷ ಸಾಹಿತ್ಯಗಳಾದ ರಾಮಾಯಣ, ಮಹಾಭಾರತ, ಭಗವದ್ಗೀತೆ, ಸ್ತೋತ್ರ ಸಾಹಿತ್ಯ, ಯೋಗ, ವೇದಗಣಿತ, ಭಾರತೀಯ ಕೃಷಿ, ಗೋಸೇವೆ ಇನ್ನಿತರ ವಿಷಯಗಳನ್ನು ಒಳಗೊಂಡಿರುವ ಬಾಲಬೋಧಿನೀ ತರಗತಿಗಳು ಲಭ್ಯವಿದೆ. ಮನೆಯಲ್ಲಿಯೇ ಕುಳಿತು ಗುರುಕುಲ ಶಿಕ್ಷಣವನ್ನು( ಸಂಧ್ಯಾ ಗುರುಕುಲ) ಪಡೆಯಬಹುದಾಗಿದೆ..

* ಋಗ್ವೇದ, ಯಜುರ್ವೇದ, ಸಂಸ್ಕೃತ ಭಾಷಾ ಕಲಿಕೆ, ಸಂಸ್ಕೃತ ಸಾಹಿತ್ಯ, ವೇದಾಂತ, ಯೋಗಶಾಸ್ತ್ರ ಮೊದಲಾದ ವಿಷಯಗಳ ಬಗೆಗೆ ಪಾಠ ನಡೆಯುತ್ತದೆ. ಜೊತೆಗೆ ನಿತ್ಯಸ್ತುತಿ, ಶತಾಯು, ಜ್ಯೋತಿಷ್ಮತೀ, ವೇದಶಿಕ್ಷಾ, ಬ್ರಾಹ್ಮ ಚಿಂತನ ಮುಂತಾದ ವಿಶೇಷ ಅರೆಕಾಲಿಕ (**Short term**) ತರಗತಿಗಳೂ ಕೂಡ ಲಭ್ಯವಿದೆ.

* ತತ್ತ್ವಮಸಿಯ ಪಾಠ್ಯಕ್ರಮದಲ್ಲಿ ಪಾರಾಯಣ, ಅರ್ಥ ಅನುಸಂಧಾನ, ಅಭ್ಯಾಸ ತರಗತಿಗಳು, ಸಾಧನಾನುಕೂಲ ತತ್ತ್ವಚಿಂತನೆ ಮತ್ತು ಇಂದಿನ ಕಾಲಮಾನಕ್ಕೆ ವೈದಿಕ ಸಾಹಿತ್ಯಗಳ ಪ್ರಸ್ತುತತೆಯ ಬಗೆಗೆ ವಿಚಾರ ವಿನಿಮಯ, ವಾರಾಂತ್ಯದ ತರಗತಿಗಳು ಹೀಗೆ ಹತ್ತು ಹಲವರು ಆಯಾಮಗಳು ಅಡಕವಾಗಿದೆ.

ಈ ಅಮೂಲ್ಯವಾದ ವೇದರಾಶಿಯನ್ನು ಕಲಿಯಲು ಇಚ್ಛಿಸುವವರು ಸಂಪರ್ಕಿಸಿ.. 9880793423 / 7411667275

ನಾವು ಧರ್ಮವನ್ನು ಉಳಿಸಿದರೆ ಧರ್ಮವು ನಮ್ಮನ್ನು ರಕ್ಷಿಸುತ್ತದೆ..

ಜಾಹಿರಾತು

## ಗುರುಕುಲಕ್ಕಾಗಿ ನಿವೇಶನ ಬೇಕಾಗಿದೆ

ತತ್ವಮಸಿ ಸಂಸ್ಥೆಯು ಬೆಂಗಳೂರು ನಗರದಲ್ಲಿ ಕಳೆದ 10 ವರ್ಷಗಳಿಂದ ವೇದ, ಉಪನಿಷತ್ತುಗಳು, ಭಗವದ್ಗೀತೆ ಮೊದಲಾದ ಆರ್ಷಜ್ಞಾನರಾಶಿಯನ್ನು ಗುರುಕುಲ ಪದ್ಧತಿಯಲ್ಲಿ ಸಾಮಾನ್ಯ ಜನರಿಗೆ ತಲುಪಿಸುತ್ತಿದೆ. ಸಂಸ್ಥೆಯ ಅಧ್ಯಯನ, ಅನುಷ್ಠಾನಗಳಿಗೆ ಅನುಕೂಲಕರವಾದ ಕೇಂದ್ರವೊಂದನ್ನು ನಿರ್ಮಿಸಲು ಸೂಕ್ತ ಸ್ಥಳಾವಕಾಶದ ಅವಶ್ಯಕತೆಯಿದೆ. ವೇದಾಸಕ್ತರು ಸಂಸ್ಥೆಗೆ ನಿವೇಶನವನ್ನು ದಾನ ಮಾಡಲು ಅಥವಾ ಮಾರಲು ಇಚ್ಛಿಸುವವರು ಈ ಕೆಳಗಿನ ಸಂಖ್ಯೆಗೆ ಸಂಪರ್ಕಿಸಬೇಕಾಗಿ ವಿನಂತಿ.

**7411667275 / 9880793423**

# ಋಷಿ ವಾಣಿ

ಎಸ್. ಶ್ರೀಧರಮೂರ್ತಿ

ಉಪನಿಷತ್ತುಗಳಲ್ಲಿ ಕಠೋಪನಿಷತ್ತು ಅತ್ಯಂತ ಪ್ರಸಿದ್ಧವೂ ಆದರಣೀಯವೂ ಆಗಿದೆ. ಇದು ಕೃಷ್ಣಯಜುರ್ವೇದದ ಕಾಠಕ ಶಾಖೆಗೆ ಸೇರಿದೆ.

ನಚಿಕೇತನು ಯಮಲೋಕಕ್ಕೆ ಹೋಗಿ ಯಮನಿಂದ ಆತ್ಮಜ್ಞಾನವನ್ನು ಹೊಂದಿದ ಆಖ್ಯಾಯಿಕೆ ಅತ್ಯಂತ ಪುರಾತನವಾಗಿರುತ್ತದೆ.

**ಪ್ರಥಮ ವಲ್ಲೀ** : ನಚಿಕೇತನು ತಂದೆಯ ಆಜ್ಞೇಯ ಪ್ರಕಾರ ಯಮನ ಸಮೀಪಕ್ಕೆ ಹೋದನು. ಯಮನು ಎಲ್ಲಿಯೋ ಹೋಗಿದ್ದುದರಿಂದ ನಚಿಕೇತನು ಯಮನು ಹಿಂತಿರುಗುವವರೆಗೆ ಉಪವಾಸ ಮಾಡುತ್ತ ಮೂರು ದಿನಗಳನ್ನು ಕಳೆದನು. ನಮಸ್ಕಾರಾರ್ಹನಾದ ಅತಿಥಿಯು ತನ್ನ ಮನೆಯಲ್ಲಿ ಮೂರು ದಿನಗಳು ಊಟಮಾಡದೆ ಇದ್ದುದರಿಂದ ಆ ದೋಷ ಪರಿಹಾರಕ್ಕಾಗಿ ಯಮನು ನಚಿಕೇತನಿಗೆ ಮೂರು ವರಗಳನ್ನು ಅನುಗ್ರಹಿಸಿದನು. ತನ್ನ ತಂದೆಯು ತನ್ನ ವಿಷಯದಲ್ಲಿ ಪ್ರಸನ್ನನಾಗಿರ ಬೇಕೆಂದು ಮೊದಲನೆಯ ವರವನ್ನು ನಚಿಕೇತನು ಕೇಳಿದನು. ಎರಡನೆಯ ವರವು ಸ್ವರ್ಗಕ್ಕೆ ಸಾಧನವಾದ ಅಗ್ನಿವಿದ್ಯೆ. ಮೂರನೆಯ ವರವು ಆತ್ಮತತ್ತ್ವಕ್ಕೆ ಸಂಬಂಧಪಟ್ಟಿದ್ದು. ದೇಹಾವಸಾನವಾದ ಮೇಲೆ ಆತ್ಮನು ಇದ್ದಾನೆಯೆ ಅಥವಾ ಇಲ್ಲವೆ ಎಂಬುದು ಪ್ರಶ್ನೆ. ಅಥವಾ ರಂಗರಾಮಾನುಜರು ಹೇಳುವ ಹಾಗೆ ಮೋಕ್ಷಕ್ಕೆ ಅಧಿಕಾರಿಯಾದ ಮನುಷ್ಯನು ಸತ್ತು ಸರ್ವಬಂಧನಗಳಿಂದ ಮುಕ್ತನಾದ ಮೇಲೆ ಇದ್ದಾನೆಯೋ ಇಲ್ಲವೊ ಎಂಬುದು ಪ್ರಶ್ನೆ. ನಚಿಕೇತನು ಆತ್ಮತತ್ತ್ವವನ್ನು ತಿಳಿದುಕೊಳ್ಳಲು ತಕ್ಕವನೊ ಅಲ್ಲವೊ ಎಂಬುದನ್ನು ಪರೀಕ್ಷಿಸುವುದಕ್ಕಾಗಿ ಯಮನು ಇವನನ್ನು ನಾನ ವಿಧವಾದ ಭೋಗದ ಆಶೆಗಳಿಂದ ಪ್ರಲೋಭನಗೊಳಿಸಲು ಪ್ರಯತ್ನಿಸಿದನು. ಆದರೆ ನಚಿಕೇತನು ಇಂದ್ರಿಯಗಳನ್ನು ಕ್ಷೀಣಗೊಳಿಸುವ ಯಾವ ಸುಖವನ್ನೂ ಬಯಸಲಿಲ್ಲ.

**ಎರಡನೆಯ ವಲ್ಲೀ** : ನಚಿಕೇತನು ಬ್ರಹ್ಮವಿದ್ಯೆಗೆ ಅಧಿಕಾರಿ ಎಂದು ಅರಿತು ಯಮನು ಅವನಿಗೆ ಹೀಗೆ ಉಪದೇಶ ಮಾಡಿದನು. ಶ್ರೇಯಸ್ಸು ಬೇರೆ, ಪ್ರೇಯಸ್ಸು ಬೇರೆ. ಅವಿವೇಕಿಯು ಯೋಗಕ್ಷೇಮವನ್ನೇ ಬಯಸುತ್ತ ಪ್ರೇಯಸ್ಸನ್ನು ಆರಿಸಿಕೊಂಡು ಪುರುಷಾರ್ಥದಿಂದ ಚ್ಯುತನಾಗುತ್ತಾನೆ. ಧೀಮಂತನು ಶ್ರೇಯಸ್ಸನ್ನೇ ಆರಿಸಿಕೊಳ್ಳುತ್ತಾನೆ. ಆತ್ಮತತ್ತ್ವವನ್ನು ಶ್ರವಣ ಮಾಡಿದರೂ ತಿಳಿದುಕೊಳ್ಳುವುದು ಕಷ್ಟ. ಇದನ್ನು ಉಪದೇಶ ಮಾಡುವ ಗುರುವೂ ತಿಳಿದುಕೊಳ್ಳುವ ಶಿಷ್ಯನೂ ಅದ್ಭುತವಾದ ವ್ಯಕ್ತಿಗಳು. ಸೂಕ್ಷ್ಮವಾಗಿರುವ ಆತ್ಮತತ್ತ್ವವನ್ನು ಸಾಮಾನ್ಯ ಜನರಿಂದ ತಿಳಿದುಕೊಳ್ಳಲು ಸಾಧ್ಯವಾಗುವುದಿಲ್ಲ. ಉತ್ತಮನಾದ ಆಚಾರ್ಯನಿಂದಲೇ ತಿಳಿದು ಕೊಳ್ಳಬೇಕು. ಈ ವಲ್ಲಿಯ ಹತ್ತನೆಯ ಮಂತ್ರವು ಅರ್ಥಗರ್ಭಿತವಾಗಿದೆ. ಅನಿತ್ಯವಾದ ದ್ರವ್ಯಗಳಿಂದ ನಿತ್ಯವನ್ನು ಪಡೆದಿರುವೆನೆಂದು ಯಮನು ಹೇಳುತ್ತಾನೆ. ಇದು ಅಪೇಕ್ಷಿಕವಾದ ನಿತ್ಯವೆಂದು ಶಂಕರಾಚಾರ್ಯರು ಹೇಳಿರುತ್ತಾರೆ. ಮೊದಲಿನಿಂದಲೂ ಸ್ವರ್ಗಪದಕ್ಕೆ ಪರಮಪದವೆಂಬ ಅರ್ಥವನ್ನು ಹೇಳಿರುವ ರಂಗರಾಮಾನುಜರು ನಿತ್ಯ-ಪದಕ್ಕೆ **"ನಿತ್ಯಫಲಕ್ಕೆ ಸಾಧನವಾದ ಜ್ಞಾನ"** ಎಂದು ಅರ್ಥವನ್ನು ಹೇಳಿರುತ್ತಾರೆ. ಅನಂತರ ಬ್ರಹ್ಮದ ವಾಚಕವೂ ಪ್ರತೀಕವೂ ಆದ ಪ್ರಣವದ ಮೂಲಕ ಬ್ರಹ್ಮದ ಸ್ವರೂಪವನ್ನು ಯಮನು ಉಪದೇಶ ಮಾಡುತ್ತಾನೆ. ಈ ವಲ್ಲಿಯಲ್ಲಿ ಇಪ್ಪತ್ತನೆಯ ಮತ್ತು ಇಪ್ಪತ್ತಮೂರನೆಯ ಮಂತ್ರಗಳು ಮುಖ್ಯವಾದವು ಗಳೆಂದು ಅನೇಕರ ಮತ. 'ಧಾತುಪ್ರಸಾದಾತ್' ಎಂಬಲ್ಲಿ (30ನೇ ಮಂತ್ರ) 'ಧಾತು' ಎಂಬ ಶಬ್ದಕ್ಕೆ ಶಂಕರಾಚಾರ್ಯರು 'ಮನಸ್ಸೇ ಮೊದಲಾದ ಇಂದ್ರಿಯಗಳು, ಎಂದು ಅರ್ಥವನ್ನು ಹೇಳಿರುತ್ತಾರೆ. ಧಾತುಗಳು ಪ್ರಸನ್ನವಾದರೆ ಆತ್ಮತತ್ತ್ವವು ಮನಸ್ಸಿನಲ್ಲಿ ಹೊಳೆಯುತ್ತದೆ ಎಂದು ಭಾವ. 'ಧಾತುಪ್ರಸಾದಾತ್' ಎಂಬುದಕ್ಕೆ 'ಧಾತೋಃ ಧಾರಕಸ್ಯ ಪರಮಾತ್ಮ ನಃ ಪ್ರಸಾದಾತ್' ಎಂದರೆ 'ಧಾರಕನಾದ ಪರಮಾತ್ಮನ ಅನುಗ್ರಹದಿಂದ' ಎಂದು ರಂಗರಾಮಾನುಜರು ಹೇಳಿರುತ್ತಾರೆ. ನಿಷ್ಕಾಮರಾಗಿ ಆತ್ಮನನ್ನೇ ಬಯಸುವವರಿಗೆ ಆತ್ಮನಿಂದಲೇ ಆತ್ಮನು ಲಭಿಸುತ್ತಾನೆ; ಎಂದರೆ ಈ ಆತ್ಮನು ಸ್ವಯಾಥಾತ್ಮ್ಯವನ್ನು (ತನೂಂ ಸ್ವಾಂ) ಆತ್ಮ ಕಾಮನಿಗೆ ತೋರಿಸುತ್ತಾನೆಂದು ಶಂಕರಾಚಾರ್ಯರು ಇಪ್ಪತ್ತಮೂರನೆಯ ಮಂತ್ರವನ್ನು ವಿವರಿಸಿರುತ್ತಾರೆ. ಯಾವನು ಪರಮಾತ್ಮನ ಪ್ರಿಯತಮನೋ ಅವನನ್ನೇ ಪರಮಾತ್ಮನು ಆರಿಸುತ್ತಾನೆ. ಯಾವನು ಭಗವಂತನಲ್ಲಿ ಪ್ರೀತಿಯುಳ್ಳವನಾಗಿರುವನೊ ಅವನೇ ಭಗವಂತನಿಗೆ ಪ್ರಿಯತಮನಾಗುತ್ತಾನೆ. ಆದುದರಿಂದ ಉಪಾಸಕನಿಗೆ ಭಗವಂತನಲ್ಲಿರುವ ಪ್ರೀತಿಯು ಭಗವಂತನಿಗೆ ಅವನಲ್ಲಿ ಪ್ರೀತಿಯನ್ನುಂಟು ಮಾಡಿ ಪರಮಾತ್ಮ ಪ್ರಾಪ್ತಿಗೆ ಕಾರಣವಾಗುತ್ತದೆ ಎಂದು ರಂಗರಾಮಾನುಜರು ವಿವರಣೆ ಮಾಡಿರುತ್ತಾರೆ. ಸದಾಚಾರ ಮತ್ತು ಇಂದ್ರಿಯ ನಿಗ್ರಹ ಇವು ಆತ್ಮಪ್ರಾಪ್ತಿಗೆ ಅತ್ಯಂತ ಅವಶ್ಯಕವೆಂಬ ಉಪದೇಶದೊಂದಿಗೆ ಈ ವಲ್ಲಿಯು ಸಮಾಪ್ತ ವಾಗುತ್ತದೆ.

**ಮೂರನೆಯ ವಲ್ಲೀ** : ಈ ವಲ್ಲಿಯ ಮುಖ್ಯ ವಿಷಯ ರಥರೂಪಕ ಕಲ್ಪನೆ. ಶರೀರವು ರಥ,ಆತ್ಮನೇ ರಥದ ಒಡೆಯ ಎಂದರೆ ರಥಿ, ಬುದ್ಧಿಯು ಸಾರಥಿ, ಮನಸ್ಸು ಕಡಿವಾಣ, ಇಂದ್ರಿಯಗಳು ಕುದುರೆಗಳು, ಶಬ್ದಾದಿ ವಿಷಯಗಳು ಆ ಕುದುರೆಗಳು ಹೋಗುವ ರಸ್ತೆಗಳು, ಯಾವನು ವಿವೇಕಿಯೋ ಅವನ ಇಂದ್ರಿಯಗಳು ತುಂಟ ಕುದುರೆಗಳಂತೆ ವಶವಾಗದೆ ಇರುವುವು. ಅವನು ಪರಮಪದವನ್ನು ಮುಟ್ಟುತ್ತಾನೆ. ಬ್ರಾಹ್ಮಣಸದಸ್ಸಿನಲ್ಲಾಗಲಿ, ಶ್ರಾದ್ಧಕಾಲದಲ್ಲಾಗಲಿ ಈ ಉಪನಿಷತ್ತಿನ ಶ್ರವಣ ಮಾಡಿಸಿದರೆ ಅನಂತಫಲ ಉಂಟಾಗುವುದೆಂಬ ಉಪದೇಶದೊಂದಿಗೆ ಈ ವಲ್ಲಿಯು ಸಮಾಪ್ತವಾಗುತ್ತದೆ.

ಈ ಸೂಕ್ತಕ್ಕೆ ಯಮನೇ ದೇವತೆ ಹಾಗೂ ಕುಮಾರನೇ ಋಷಿ. ಇದರಲ್ಲಿ ಉಲ್ಲೇಖಿತನಾಗಿರುವ ಕುಮಾರನೇ ನಚಿಕೇತನೆಂದು ಹೇಳಲಾಗಿದೆ.

**ಓಂ ಶಾಂತಿಃ ಶಾಂತಿಃ ಶಾಂತಿಃ**

**ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ (ರಿ.)**

**ವಧು-ವರ ಮಾಹಿತಿ ಕೇಂದ್ರ, ಬೆಂಗಳೂರು**

**ಸ್ಥಳ : ಗಾಯತ್ರಿ ಭವನ**

ನಂ.3070, 14ನೇ ಅಡ್ಡರಸ್ತೆ, 9ನೇ ಮುಖ್ಯರಸ್ತೆ,
ಬನಶಂಕರಿ 2ನೆ ಹಂತ, ಬೆಂಗಳೂರು-70.
ದೂರವಾಣಿ : 080-26770066/26771695
ಸಮಯ : ಸಂಜೆ 5.00 ರಿಂದ 7.00 ರವರೆಗೆ
ಮಂಗಳವಾರ ಮತ್ತು ಶನಿವಾರ

**ನಿಯಮಗಳು :**

1. ವರ/ವಧು ಅಥವಾ ತಾಯಿ ತಂದೆ ಯಾರಾದರು ಒಬ್ಬರು ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭೆಯ ಸದಸ್ಯರಾಗಿರಬೇಕು.
2. ವಧು/ವರರ ಪೋಸ್ಟ್ ಕಾರ್ಡ್ ಫೋಟೋ ಮತ್ತು ವಿವರ ತರಬೇಕು.
3. ಶುಲ್ಕ ರೂ. 500/=

**ಸಂಚಾಲಕರು** : ಶ್ರೀಮತಿ ಜಯಲತಾ ಸತ್ಯನಾರಾಯಣ್
ಮೊ. : 9916325902

**ಸದಸ್ಯರು**

ಶ್ರೀಮತಿ ನಳಿನಿ ನಟರಾಜ್, ಮೊ. : 9481788495
ಶ್ರೀಮತಿ ಗಾಯತ್ರಿ ರಾವ್, ಮೊ>9980481245

**ಭಟ್ ಟ್ರಾವೆಲ್ & ಟೂರ್ಸ್**

**ರಿಯಾಯಿತಿ ದರದಲ್ಲಿ ವಿದೇಶಿ ಪ್ರವಾಸ**

- 7 ದಿನಗಳ ಸಿಂಗಾಪುರ ಮಲೇಶಿಯಾ
- 5 ದಿನಗಳ ಬಾಲಿ
- 9 ದಿನಗಳ ವಿಯೆಟ್ನಾಂ
- 6 ದಿನಗಳ ಅಂಡಮಾನ್
- 4 ದಿನಗಳ ಮಾಲ್ಡೀವ್ಸ್
- 6 ದಿನಗಳ ದುಬೈ , ಅಬುಧಾಬಿ

**ಪಾಸ್ ಪೋರ್ಟ್ ಮಾಡಿಕೊಡಲಾಗುತ್ತದೆ**

ನಂ. 24 /3 ಮೊದಲನೇ ಮಹಡಿ, 3ನೇ ಕ್ರಾಸ್, 4ನೇ ಮುಖ್ಯರಸ್ತೆ,
ಚಾಮರಾಜಪೇಟೆ, ಬೆಂಗಳೂರು-560018,
ಮೊಬೈಲ್: 98441 66555, 98440 37295,
ಫೋನ್: 080-2667 2555
E-mail: bhattravelandtours@gmail.com

**ಪೂರ್ಣಪ್ರಜ್ಞ ಗೃಹ ನಿರ್ಮಾಣ ಸಹಕಾರ ಸಂಘ ನಿಯಮಿತ**

**ಶುಭಾಶಯಗಳೊಂದಿಗೆ**



ನಂ. 552, 'ಪೂರ್ಣಪ್ರಜ್ಞ ಸುವರ್ಣಭವನ',
ಉತ್ತರಹಳ್ಳಿ-ಕೆಂಗೇರಿ ಮುಖ್ಯರಸ್ತೆ
ಪೂರ್ಣಪ್ರಜ್ಞನಗರ, ಬೆಂಗಳೂರು-560 061.
ದೂ. ಸಂ. 080-26731335, 26731336

**ಬಡಾವಣೆ ವಿವರಗಳು :**

1. ಪೂರ್ಣಪ್ರಜ್ಞ ಬಡಾವಣೆ, ಕತ್ರಿಗುಪ್ಪೆ,
ಬನಶಂಕರಿ 3ನೇ ಹಂತ, ಬೆಂಗಳೂರು-560 085
2. ಪೂರ್ಣ ಪ್ರಜ್ಞನಗರ, ಉತ್ತರಹಳ್ಳಿ,
ಸುಬ್ರಮಣ್ಯಪುರ ಪೋಸ್ಟ್, ಬೆಂಗಳೂರು-560 061

**ಸಂಘದ ಆಡಳಿತ ಮಂಡಳಿ ಸದಸ್ಯರು**

| | | | | | |
|---|---|---|---|---|---|
| ಹಯಗ್ರೀವಾಚಾರ್ | ಅಧ್ಯಕ್ಷರು | ಕೃಷ್ಣಮೂರ್ತಿ ಕೆ.ಎನ್. | ನಿರ್ದೇಶಕರು | ವೆಂಕಟೇಶ್ ಎಸ್.ವಿ. | ನಿರ್ದೇಶಕರು |
| ಅನಂತಸ್ವಾಮಿ ಎಸ್. | ಉಪಾಧ್ಯಕ್ಷರು | ವಿಶ್ವನಾಥ್ ಜಿ. | ನಿರ್ದೇಶಕರು | ರಾಮಯ್ಯ ಎಸ್.ಟಿ. | ನಿರ್ದೇಶಕರು |
| ಸುಧೀಂದ್ರ ಎಸ್.ಕೆ. | ನಿರ್ದೇಶಕರು | ಈಶ್ವರಿ ಜೆ.ಸಿ. | ನಿರ್ದೇಶಕರು | ಸಂಜೀವ್ ಕುಮಾರ್ ಎಸ್ | ನಿರ್ದೇಶಕರು |
| ಮೊಕಾಶಿ ಡಿ.ಎಚ್. | ನಿರ್ದೇಶಕರು | ರಾಧಮಣಿ ವಿ.ಕೆ. | ನಿರ್ದೇಶಕರು | | |

### ಸ್ವರ್ಣವಲ್ಲಿ ಮಠ

ಶ್ರೀ ಸೋಂದಾ ಸ್ವರ್ಣವಲ್ಲಿ ಮಠದ ಪೀಠಾಧಿಪತಿಗಳಾದ ಶ್ರೀ ಶ್ರೀ ಗಂಗಾಧರೇಂದ್ರ ಸರಸ್ವತಿ ಮಹಾಸ್ವಾಮಿಗಳಿಗೆ ಮಹಾಸಭೆಯ ಸಂಘಟನಾ ಕಾರ್ಯದರ್ಶಿ ಡಾ। ರಾಘವೇಂದ್ರ ಭಟ್ ಬಿ.ಎಸ್. ಉಪಾಧ್ಯಕ್ಷ ಶಶಿಭೂಷಣ ಹೆಗಡೆ ಮತ್ತು ಧಾರ್ಮಿಕ ಸಮಿತಿ ಸಂಚಾಲಕರು ಶ್ರೀ ಭಾನುಪ್ರಕಾಶ್ ಶರ್ಮ ಹಾಗೂ ರಾಜ್ಯ ಕಾರ್ಯಕಾರಣಿ ಸದಸ್ಯರಾದ ಶ್ರೀ ಶ್ರೀ ಪಾದ ರಾಯಸದ. ನಾರಾಯಣ ಹೆಗಡೆ ಇವರುಗಳಿಂದ ಗೌರವ ಫಲಕದೊಂದಿಗೆ ಭಿಕ್ಷಾ ಸಮರ್ಪಣೆ.





### ಶ್ರೀ ಕೂಡಲಿ ಆರ್ಯ ಅಕ್ಷೋಭ್ಯ ಮಠ

ಹಾವೇರಿಯ ಶ್ರೀ ಕೂಡಲಿ ಆರ್ಯ ಅಕ್ಷೋಭ್ಯ ಮಹಾ ಸಂಸ್ಥಾನದ ಶ್ರೀ ರಘು ವಿಜಯ ತೀರ್ಥ ಶ್ರೀಪಾದಂಗಳವರಿಗೆ ಉಪಾಧ್ಯಕ್ಷರಾದ ಪ್ರಮೋದ್ ಮನೋಳಿ, ವೆಂಕಟೇಶ್, ದಿಲೀಪ್, ಸಾತ್ವಿಕ್, ಡಾ. ವೆಂಕಟ ರಮಣ, ಸೊರಬ ತಾಲೂಕಿನ ಅರ್ಚಕ ಸಂಘದ ಅಧ್ಯಕ್ಷ ಸಂಜೀವ್ ಭಟ್, ತಿಳವಳ್ಳಿಯ ಸಮೀರ್, ಇವರುಗಳು ಗೌರವ ಫಲಕದೊಂದಿಗೆ ಭಿಕ್ಷಾ ಸಮರ್ಪಣೆ ಸಲ್ಲಿಸಿ ಆಶೀರ್ವಾದ ಪಡೆದರು.

### ಶ್ರೀ ಚಿಂತಾಮಣಿ ಮಠ, ಹೊಸಪೇಟೆ

ಹೊಸಪೇಟೆ ನಗರದಲ್ಲಿ ಶ್ರೀ ಚಿಂತಾಮಣಿ ಮಠದ ಶ್ರೀ ಶ್ರೀ ಅಂಜನಾನಂದ ಸ್ವಾಮೀಜಿ ಅವರಿಗೆ ಮಹಾಸಭಾದ ಉಪಾಧ್ಯಕ್ಷರಾದ ಶ್ರೀ ಪ್ರಮೋದ್ ಮನೋಳಿ ಅವರು ಬ್ರಾಹ್ಮಣ ಸಂಘದ ಅಧ್ಯಕ್ಷರಾದ ಶ್ರೀ ದಿವಾಕರ, ಶ್ರೀ ರಮೇಶ್, ಸಾತ್ವಿಕ್ ಮನೋಳಿ, ದಿಲೀಪ್ ಇವರುಗಳು ಗೌರವ ಫಲಕದೊಂದಿಗೆ ಭಿಕ್ಷಾ ಸಮರ್ಪಣೆ ಸಲ್ಲಿಸಿ ಆಶೀರ್ವಾದ ಪಡೆದರು.





### ಯಡತೊರೆ ಮಠ

ಕೆ.ಆರ್.ನಗರದ ಅದ್ವೈತ ಪೀಠ, ಶ್ರೀ ಯಡತೊರೆ ಯೋಗಾನಂದೇಶ್ವರ ಮಠದ ಶ್ರೀ ಶಂಕರಭಾರತೀ ಮಹಾಸ್ವಾಮಿಗಳು ಹಾಗೂ ತತ್ಕರಕಮಲ ಸಂಜಾತರಾದ ಶ್ರೀ ಬ್ರಹ್ಮಾನಂದ ಭಾರತೀ ಸ್ವಾಮಿಗಳವರಿಗೆ ಮಹಾಸಭೆಯ ಅಧ್ಯಕ್ಷರಾದ ಶ್ರೀ ಅಶೋಕ ಹಾರನಹಳ್ಳಿ, ಸಂಘಟನಾ ಕಾರ್ಯದರ್ಶಿ ಡಾ. ಬಿ.ಎಸ್. ರಾಘವೇಂದ್ರ ಭಟ್ಟ ಬಿ.ಎಸ್. ಜಯಸಿಂಹ ಶತ್ರುಘ್ನ ಇವರುಗಳು ಗೌರವ ಫಲಕದೊಂದಿಗೆ ಭಿಕ್ಷಾ ಸಮರ್ಪಣೆ ಸಲ್ಲಿಸಿ ಆಶೀರ್ವಾದ ಪಡೆದರು.

### ಶ್ರೀ ಅವನಿ ಶಂಕರ ಮಠ

ಶ್ರೀ ಅವನಿ ಶಂಕರಮಠ ಮಹಾಸಂಸ್ಥಾನದ ಪೀಠಾಧಿಪತಿಗಳಾದ ಶ್ರೀ ಶ್ರೀ ಶಾಂತಾನಂದ ಭಾರತಿ ಮಹಾಸ್ವಾಮಿಗಳಿಗೆ ಉಪಾಧ್ಯಕ್ಷ ಶ್ರೀ ಡಿ.ವಿ. ರಾಜೇಂದ್ರಪ್ರಸಾದ್, ಸಂಘಟನಾ ಕಾರ್ಯದರ್ಶಿ ಡಾ। ಬಿ.ಎಸ್. ರಾಘವೇಂದ್ರ ಭಟ್ ಮತ್ತು ವಿದ್ವಾನ್ ವೇ॥ಬ್ರ॥ ಡಾ.ಭಾನುಪ್ರಕಾಶ್ ಶರ್ಮಾ. ಇವರುಗಳಿಂದ ಗೌರವ ಫಲಕದೊಂದಿಗೆ ಭಿಕ್ಷಾ ಸಮರ್ಪಣೆ ಸಲ್ಲಿಸಿದರು.




### ಸೋದೆ ಮಠ



ಶ್ರೀ ಸೋದೆ ಮಠದ ಪೀಠಾಧಿಪತಿಗಳಾದ ಶ್ರೀ ವಿಶ್ವವಲ್ಲಭತೀರ್ಥ ಸ್ವಾಮೀಜಿಯವರನ್ನು ಶಶಿಭೂಷಣ ಹೆಗಡೆ ಉಪಾಧ್ಯಕ್ಷರು ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ಹಾಗೂ ರಾಜ್ಯ ಸಂಘಟನಾ ಕಾರ್ಯದರ್ಶಿ ಬಿಎಸ್ ರಾಘವೇಂದ್ರ ಭಟ್ ಮತ್ತು ಧಾರ್ಮಿಕ ಸಮಿತಿ ಸಂಚಾಲಕರು ಶ್ರೀ ಭಾನುಪ್ರಕಾಶ್ ಶರ್ಮ ಹಾಗೂ ರಾಜ್ಯ ಕಾರ್ಯಕಾರಣಿ ಸದಸ್ಯರಾದ ಶ್ರೀ ಶ್ರೀಪಾದ ರಾಯಸದ. ನಾರಾಯಣ ಹೆಗಡೆ ಇವರುಗಳಿಂದ ಗೌರವ ಫಲಕದೊಂದಿಗೆ ಭಿಕ್ಷಾ ಸಮರ್ಪಣೆ.



### ಕೃಷ್ಣಾಪುರ ಮಠ



ಶ್ರೀ ಕೃಷ್ಣಾಪುರ ಮಠದ ಪರ್ಯಾಯ ಪೀಠಾಧಿಪತಿಗಳೂ ಶ್ರೀ ಶ್ರೀ ವಿದ್ಯಾಸಾಗರ ತೀರ್ಥ ಸ್ವಾಮೀಜಿಯವರಿಗೆ ಮಹಾಸಭಾ ಉಪಾಧ್ಯಕ್ಷ ರಾದ ಶ್ರೀ ಮಹೇಶ್ ಕಜೆಯವರು, ರಾಜ್ಯ ಧಾರ್ಮಿಕ ಪರಿಷತ್ತಿನ ಸದಸ್ಯರು– ಅಖಿಲ ಕರ್ನಾಟಕ ಬ್ರಾಹ್ಮಣ ಮಹಾ ಸಭಾದ ರಾಜ್ಯ ಕಾರ್ಯಕಾರಣಿಯ ಸದಸ್ಯರು ಆದ ಕಶೆಕೋಡಿ ಸೂರ್ಯನಾರಾಯಣ ಭಟ್ ಮತ್ತು ದ.ಕ.ಜಿಲ್ಲಾ ಧಾರ್ಮಿಕ ಪರಿಷತ್ತಿನ ಸದಸ್ಯರು, ಕಾರ್ಯಕಾರಣಿಯ ಸದಸ್ಯರಾದ ಪೊಳಲಿ ಗಿರಿಪ್ರಕಾಶ್ ತಂತ್ರಿ ಇವರುಗಳು ಗೌರವ ಫಲಕದೊಂದಿಗೆ ಭಿಕ್ಷಾ ಸಮರ್ಪಣೆ ಸಲ್ಲಿಸಿ ಆಶೀರ್ವಾದ ಪಡೆದರು.

### ಶ್ರೀ ಸುಬ್ರಹ್ಮಣ್ಯ ಮಠ



ಸುಬ್ರಹ್ಮಣ್ಯ ಮಠಾಧೀಶರಾದ ಶ್ರೀ ಶ್ರೀ ವಿದ್ಯಾಪ್ರಸನ್ನತೀರ್ಥ ಸ್ವಾಮೀಜಿ ಯವರಿಗೆ ಉಪಾಧ್ಯಕ್ಷರಾದ ಮಹೇಶ್ ಕಜೆಯವರು ಮಹಾಸಭಾದ ರಾಜ್ಯ ಕಾರ್ಯಕಾರಿಣಿಯ ಸದಸ್ಯರೂ ಮತ್ತು ಜಿಲ್ಲಾ ಧಾರ್ಮಿಕ ಪರಿಷತ್ತಿನ ಸದಸ್ಯರಾದ ಶ್ರೀ ಪೊಳಲಿ ಗಿರಿಪ್ರಕಾಶ ತಂತ್ರಿಯವರು, ಗೌರವ ಫಲಕದೊಂದಿಗೆ ಭಿಕ್ಷಾ ಸಮರ್ಪಣೆ ಸಲ್ಲಿಸಿ ಆಶೀರ್ವಾದ ಪಡೆದರು.

### ಶ್ರೀ ಸೋಸಲೆ ವ್ಯಾಸರಾಜ ಮಠ

ತುಮಕೂರಿನಲ್ಲಿ ಮೈಸೂರಿನ ಸೋಸಲೆ ವ್ಯಾಸರಾಜ ಮಠದ ವಿದ್ಯಾಶ್ರೀಶತೀರ್ಥ ಶ್ರೀಗಳ ಚಾತುರ್ಮಾಸ್ಯದ ಸಂದರ್ಭದಲ್ಲಿ ಶ್ರೀಗಳಿಗೆ ತುಮಕೂರು ಪಾಲಿಕೆ ಸದಸ್ಯರಾದ ಸಿ.ಎನ್. ರಮೇಶ್, ಕಾರ್ಯಕಾರಿಣಿ ಸದಸ್ಯೆ ಛಾಯಾ ರಾಮಾಶೇಷು ಇವರುಗಳು ಗೌರವ ಫಲಕದೊಂದಿಗೆ ಭಿಕ್ಷಾ ಸಮರ್ಪಣೆ ಸಲ್ಲಿಸಿ ಆಶೀರ್ವಾದ ಪಡೆದರು.

### ಶ್ರೀ ಭಂಡಾರಕೇರಿ ಮಠ



ಶ್ರೀ ಭಂಡಾರಕೇರಿ ಮಠದ ಶ್ರೀ ವಿದ್ಯೇಶತೀರ್ಥ ಸ್ವಾಮೀಜಿಗಳಿಗೆ ಗಿರಿನಗರ ಶಾಖಾ ಮಠದಲ್ಲಿ ಉಪಾಧ್ಯಕ್ಷರಾದ ಹೆಚ್.ಆರ್. ಸುರೇಶ್ ಹಾಗೂ ಸದಸ್ಯರಾದ ಸತ್ಯನಾರಾಯಣರವರು ಗೌರವ ಫಲಕದೊಂದಿಗೆ ಭಿಕ್ಷಾ ಸಮರ್ಪಣೆ ಸಲ್ಲಿಸಿ ಆಶೀರ್ವಾದ ಪಡೆದರು.

## ಶ್ರೀಮದ್ ಕಣ್ವ ಮಠ, ಹುಣಿಸೆಹೊಳಿ



ಶ್ರೀಮದ್ ಕಣ್ವಮಠ ಮೂಲ ಸಂಸ್ಥಾನ ಹುಣಿಸೆಹೊಳಿ ಸುರಪುರ ತಾಲ್ಲೂಕು, ಯಾದಗಿರಿ ಜಿಲ್ಲೆಯಲ್ಲಿ ಶ್ರೀ 1008 ವಿದ್ಯಾವಿರಾಜ ತೀರ್ಥ ಸ್ವಾಮಿಗಳಿಗೆ ಮಹಾಸಭಾ ವತಿಯಿಂದ ಪದಾಧಿಕಾರಿಗಳು ಗೌರವ ಫಲಕದೊಂದಿಗೆ ಭಿಕ್ಷಾ ಸಮರ್ಪಣೆ ಸಲ್ಲಿಸಿ ಆಶೀರ್ವಾದ ಪಡೆದರು.

## ಫಲಿಮಾರು ಮಠ



ಶ್ರೀ ಪಲಿಮಾರು ಮಠಾಧೀಶ ಮಹಾಸ್ವಾಮಿಗಳಿಗೆ ಮಹಾಸಭೆಯ ಉಪಾಧ್ಯಕ್ಷ ಹೆಚ್.ಎನ್. ಸುರೇಶ್, ಕೇಂದ್ರ ಪ್ರತಿನಿಧಿ ಛಾಯಾಪತಿ ಇವರುಗಳು ಗೌರವ ಫಲಕದೊಂದಿಗೆ ಭಿಕ್ಷಾ ಸಮರ್ಪಣೆ ಸಲ್ಲಿಸಿ ಆಶೀರ್ವಾದ ಪಡೆದರು.

## ಕಾಣಿಯೂರು ಮಠ



ಶ್ರೀ ಶ್ರೀ ವಿದ್ಯಾಲಭ ತೀರ್ಥ ಸ್ವಾಮೀಜಿಗಳಿಗೆ ಭಿಕ್ಷಾ ಸಮರ್ಪಣೆ

## ಬಾಳೆಕುದ್ರು ಮಠ



ಶ್ರೀ ನೃಸಿಂಹಾಶ್ರಮ ಶ್ರೀಗಳವರಿಗೆ ಭಿಕ್ಷಾ ಸಮರ್ಪಣೆ

ಬ್ರಾಹ್ಮಣ ಮಹಾಸಭಾ ಉಪಾಧ್ಯಕ್ಷರಾದ ಮಹೇಶ್ ಕಜೆ, ಕಾರ್ಯಕಾರಿಣಿಯ ಸದಸ್ಯರು ಹಾಗೂ ರಾಜ್ಯ ಧಾರ್ಮಿಕ ಪರಿಷತ್ತಿನ ಸದಸ್ಯರಾದ ವಿದ್ವಾಂಸ ಶ್ರೀ ಕಶೆಕೋಡಿ ಸೂರ್ಯನಾರಾಯಣ ಭಟ್, ಕಾರ್ಯಕಾರಿಣಿಯ ಸದಸ್ಯರು ಹಾಗೂ ಜಿಲ್ಲಾ ಧಾರ್ಮಿಕ ಪರಿಷತ್ತಿನ ಸದಸ್ಯರಾದ ಪೊಳಲಿ ಶ್ರೀ ಗಿರಿಪ್ರಕಾಶ ತಂತ್ರಿಯವರು ಇವರುಗಳು ಗೌರವ ಫಲಕದೊಂದಿಗೆ ಭಿಕ್ಷಾ ಸಮರ್ಪಣೆ ಸಲ್ಲಿಸಿ ಆಶೀರ್ವಾದ ಪಡೆದರು.

## ಶ್ರೀ ಕೂಡಲಿ ಶೃಂಗೇರಿ ಮಠ



ಶ್ರೀ ವಿದ್ಯಾಭಿನವ ವಿದ್ಯಾರಣ್ಯ ಭಾರತೀ ಸ್ವಾಮಿಗಳಿಗೆ ಕಾರ್ಯಕಾರಿ ಸಮಿತಿ ಸದಸ್ಯರಾದ ಶ್ರೀ ಜಯಸಿಂಹ ಶತ್ರುಘ್ನರವರವರಿಂದ ಗೌರವ ಫಲಕದೊಂದಿಗೆ ಭಿಕ್ಷಾ ಸಮರ್ಪಣೆ

## ಪರಕಾಲ ಮಠ, ಮೈಸೂರು



ಪರಕಾಲ ಮಠ ಶ್ರೀಗಳಿಗೆ ಉಪಾಧ್ಯಕ್ಷ ಸಿ.ಕೆ. ರಾಮಮೂರ್ತಿ, ಪುಷ್ಪ ಅಯ್ಯಂಗಾರ್, ವಿಜಯಲಕ್ಷ್ಮೀ, ಸತ್ಯನಾರಾಯಣ ಮತ್ತು ಜಗದೀಶರವರಿಂದ, ಭಿಕ್ಷಾ ಸಮರ್ಪಣೆ

PERIODICAL RATE

VIPRANUDI KANNADA MONTHLY.

RNI No. KARKAN/2009/29931. Posted at BG PSO, Mysore Road, Bangalore-560 026,
Permitted to Post on 17-07-2022 Date of Publishing 9-09-2022

ಶುಭಾಶಯಗಳು

ಡಾ|| ಉದಯ್ ಬಿ. ಗರುಡಾಚಾರ್

ಶಾಸಕರು, ಚಿಕ್ಕಪೇಟೆ ವಿಧಾನಸಭಾ ಕ್ಷೇತ್ರ



Dr. Uday B. Garudachar

MLA, Chickpet Assembly Constituency

/BGUdayBJP www.udaygarudachar.in

If undelivered please return to :

VIPRANUDI

Akhila Karnataka Brahmana Mahasabha (R.)

"Gayathri Bhavana", No. 3070, 9th Main Road

Gayathri Bhavana Road, (14th Cross) BSK 2nd Stage

BANGALORE-560 070. Phone : 26771695

VIPRANUDI-Kannada Monthly, Published & Owned by President, On behalf of Akhila Karnataka Brahamana Mahasabha (R) "Gayathri Bhavana", No. 3070, 9th Main Road, Gaythri Bhavana Road (14th Cross) BSK 2nd Stage, Bangalore-560 070. And Printed at Parimala Mudranalaya, No. 184, Allama Prabhu Road, 14th Main, Hanumanthanagar, Bangalore-560 050, Editor : Prof. M.K. Sridhar